ಅಪರಂಜಿ

ಅಕ್ಟೋಬರ್ 2003

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ವೈ.ಎನ್. ಗುಂಡೂರಾವ್

ಶ್ರೀನಿವಾಸ ವೈದ್ಯ

ಎ.ಎನ್. ಮೂರ್ತಿರಾಯರು

ಪ್ರಕಾಶ್

ಕಂ.ಭಂ. ಕೃಷ್ಣಮೂರ್ತಿ

ಶ್ಯಾಮಲ ರವಿಶಂಕರ್

ಸೂರಿ ಹಾರ್ದಳ್ಳಿ

ಬಿ.ಆರ್. ನಾಗೇಶ್

ಶೋಭಾ ಪ್ರಮೋದ್

ಹೆಚ್. ಗೋಪಾಲಕೃಷ್ಣ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ


ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ ರೂ. 60
ಹತ್ತು ವರ್ಷದ ಚಂದಾ ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 21 ಅಕ್ಟೋಬರ್ - 2003 ಸಂಚಿಕೆ - 1

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು - 27



○ ಪ್ರಕಾಶ್

ವಿವಾದದ ಸುಳಿಯಿಂದ ಅರ್ಜುನ ಪ್ರಶಸ್ತಿ ಮೇಲೆದ್ದು ಬರುವುದು ಯಾವಾಗ?
- ಕ್ರೀಡಾ ಪ್ರಶ್ನೆ

ಕೃಷ್ಣ - ಸಂಧಾನದ ಬಳಿಕ!!

★★★

ಹೈಕೋರ್ಟ್ ಪೀಠಕ್ಕೆ ಆಗ್ರಹ; ತೀವ್ರ ಹೋರಾಟ
- ಸುದ್ದಿ

ಈ ಹೋರಾಟದ ಕೇಸುಗಳೆಲ್ಲ ಬೆಂಗಳೂರಿಗೇ ಬರಬೇಕೆ?!!

★★★

ಭಾರತೀಯ ಪೋಲೀಸರು ವಿಶ್ವದಲ್ಲೇ ಅತ್ಯಂತ ಭ್ರಷ್ಟರು
- ಹೇಳಿಕೆ

ಭಾರತಕ್ಕೆ ವಿದೇಶಿ ವಕೀಲರು: ಬಿ.ಸಿ.ಐ. ವಿರೋಧ
- ಸುದ್ದಿ

ಇವೆರಡು ಅಂಶಗಳಿಗೂ ಯಾವ ಸಂಬಂಧವನ್ನೂ ಕಲ್ಪಿಸಲಾಗದು!!

★★★

ಲಾಲೂ ಪ್ರಸಾದ್ ಪುತ್ರ ಕ್ರಿಕೆಟ್ ತಾರೆ?

ಅವರ ಗೂಗ್ಲಿಗಳನ್ನ ಯಾರೂ ಎದುರಿಸಲಾರರು!!

★★★

ವೀರಪ್ಪನ್ ಸಹಚರ ಬಂಧನ
- ಸುದ್ದಿ

ಅವನ ಸಹ-ಚರ ಆದರೆ, ವೀರಪ್ಪನ್‌ನ ಯಾಕೆ ಹಿಡಿಯಲಿಲ್ಲ??

★★★

ನುಸಿ ಪೀಡೆ ಔಷಧಿಯಲ್ಲಿ ಬರೀ ಮಣ್ಣು!

- ಸುದ್ದಿ

ಸದ್ಯ, ಇದನ್ನ ನುಸಿಗಳಿಗೆ ಹೇಳಬಾರದು!!

★★★

"ನಾನೊಬ್ಬ ಚಿಕ್ಕ ಭಯೋತ್ಪಾದಕ; ಬುಷ್ ಬಗ್ಗೆ ಜಗತ್ತು ಚಿಂತಿಸಬೇಕು"

- ಬಾಲಿ ಪ್ರಕರಣದ ಆರೋಪಿ

ಮನನ ಮಾಡಬೇಕಾದ ವಿಷಯ??

★★★

ಇಂಗ್ಲಿಷ್ ಲೇಖಕರ ವಿರುದ್ಧ ಕಂಬಾರರ ಕಿಡಿ

- ಸುದ್ದಿ

'ಆಂಗ್ಲ' ಲೇಖಕರು ಎಂದಿದ್ದರೆ ಚೆನ್ನ!!

★★★

ಅಂಜು ಜಾರ್ಜ್ ಲಾಂಗ್ ಜಂಪ್‌ನಿಂದ ರಾಷ್ಟ್ರಕ್ಕೇ ಹೈ ಜಂಪ್ ಆಯಿತು!!

★★★

"ಒಂಟಿ ಮಹಿಳೆಗೆ ಹೆದರಿದ ಬಿ.ಜೆ.ಪಿ."

- ಸೋನಿಯಾ ಗಾಂಧಿ

ಒಂದು ದಿನಪತ್ರಿಕೆಯಲ್ಲಿ 'ಒಂಟೆ' ಎಂದು ಮುದ್ರಿತವಾದದ್ದು ಆಕಸ್ಮಿಕವಲ್ಲವಂತೆ!!

★★★

ನಲ್ಲ

ನಾ ನಲ್ಲ
ನೀನಲ್ಲ
ಯಾರು ಯಾರಿಗೆ
ಏನಲ್ಲ
ಆ ದೇವರೇ ಬಲ್ಲ

– ಮ.ಗು. ಬಿರಾದಾರ

ನಮ್ಮ ನಮ್ಮಲ್ಲಿ

ಅಪರಂಜಿಗೆ ಇಂದಿಗೆ ಇಪ್ಪತ್ತು ತುಂಬಿದೆ. ಇನ್ನೂ ಮೊನ್ನೆ ಮೊನ್ನೆ ಅನ್ನುವ ಹಾಗಿದೆ. 1983ರ ಅಕ್ಟೋಬರಿನ ಒಂದು ಶನಿವಾರ. ಶಿವಮೊಗ್ಗ ಸುಬ್ಬಣ್ಣ ಮತ್ತು ನಾನು ಬೆಂಗಳೂರಿನಿಂದ ಹೊರಟು ಸಂಜೆಯ ಹೊತ್ತಿಗೆ ದುರ್ಗವನ್ನು ಸೇರಿದ್ದೆವು. ಅಲ್ಲಿ ಪ್ರವಾಸೀ ಮಂದಿರದಲ್ಲಿ ಅರಾಸೇ, ಶೇಷಗಿರಿ ಹಾಗೂ ಪ್ರಭು ನಮ್ಮನ್ನು ಇದಿರುಗೊಂಡು ನಮ್ಮ ತಂಗುವಿಕೆಗೆ ಅನುಕೂಲ ಮಾಡಿಕೊಟ್ಟಿದ್ದರು. ಸ್ವಲ್ಪ ವಿಶ್ರಮಿಸಿದ ನಂತರ ಅಪರಂಜಿಯ ಮೊದಲ ಸಂಚಿಕೆಯ ಬಿಡುಗಡೆ ಸಮಾರಂಭಕ್ಕೆ ಎಲ್ಲರೂ ಹೊರಟೆವು. ಪುಟ್ಟ ಸಭಾಭವನ ಸಭಿಕರಿಂದ ತುಂಬಿ ತುಳುಕುತ್ತಿತ್ತು. ಸಂಚಿಕೆಯ ಬಿಡುಗಡೆಗಿಂತ ಸುಬ್ಬಣ್ಣನವರ ಕಂಠಮಾಧುರ್ಯವನ್ನು ಸವಿಯಲು ಜನ ಕಾತರರಾಗಿದ್ದಂತೆ ಕಂಡಿತು ಸುಬ್ಬಣ್ಣ ಸಭಿಕರನ್ನು ನಿರಾಶೆಗೊಳಿಸಲಿಲ್ಲ. ಅಂದು ಅವರು ಅನೇಕ ಭಾವಗೀತೆಗಳನ್ನು ಭಾವಪೂರ್ಣವಾಗಿ ಹಾಡಿ ರಸಿಕರನ್ನು ರಂಜಿಸಿದರು. ಅವರು ಅಂದು ಹಾಡಿದ ''ಸ್ನೇಹ ಮಾಡಬೇಕಿಂಥವಳ...'' ಎಂಬ ಶಿಶುನಾಳ ಷರೀಫರ ಗೀತೆ ಇಂದಿಗೂ ನನ್ನ ಕಿವಿಯಲ್ಲಿ ಗುಣಗುಣಿಸುತ್ತಿದೆ.

ಅಪರಂಜಿಯ ಮೊದಲ ವರ್ಷದ ಹುಟ್ಟುಹಬ್ಬದ ಹೊತ್ತಿಗಾಗಲೇ ಪತ್ರಿಕೆ ಬೆಂಗಳೂರಿನಿಂದ ಹೊರಡುತ್ತಿತ್ತು. ಅಂದಿನ ಸಮಾರಂಭವನ್ನು ಮಾನ್ಯ ಅ.ರಾ. ಮಿತ್ರ ನಡೆಸಿಕೊಟ್ಟರು. ಮಾನ್ಯ ಶ್ರೀರಂಗರು ಅನಾರೋಗ್ಯದ ನಿಮಿತ್ತ ಸಮಾರಂಭಕ್ಕೆ ಬರದಿದ್ದರೂ, ಅ.ರಾ.ಸೇ. ಮತ್ತು ನನ್ನನ್ನು ಮನೆಗೇ ಕರೆಯಿಸಿಕೊಂಡು ಪತ್ರಿಕೆ ಚೆನ್ನಾಗಿ ಮುಂದೆ ಬರಲಿ ಎಂದು ಹರಸಿದ್ದರು. ಅಂದಿನ ಕಾರ್ಯಕ್ರಮದ ವೈಶಿಷ್ಟ್ಯವೆಂದರೆ ಮಾನ್ಯ ವಿ.ಜಿ. ಭಟ್ಟರು ವೇದಿಕೆಯಮೇಲೆ ಬಂದು ಅಂದುತಾನೇ ರಚಿಸಿದ ಆಶು ಕವಿತೆಯೊಂದನ್ನು ಹೇಳಿದ್ದು.

ಅಪರಂಜಿಯ ಹತ್ತು ವರುಷದ ಹಬ್ಬ ಭಾರತೀಯ ವಿದ್ಯಾಭವನದಲ್ಲಿ ಅದ್ದೂರಿಯಿಂದಲೇ ನಡೆಯಿತೆಂದು ಹೇಳಬಹುದು. ಕೈಗಾರಿಕಾ ರಂಗದ ಸಾಹಿತ್ಯ ವೇದಿಕೆಯವರು ಮುಂದೆ ಬಂದು ನಡೆಸಿದ ಈ ಕಾರ್ಯಕ್ರಮದ ಮುಂಚೂಣಿಯಲ್ಲಿ ಕೃಷ್ಣ ಸುಬ್ಬರಾವ್ ಹಾಗೂ ಎಚ್. ಗೋಪಾಲಕೃಷ್ಣ ಇದ್ದರು. ವಿನೋದದ ಮಾನ್ಯ ಜಿ. ನಾರಾಯಣರು ಉದ್ಘಾಟಿಸಿದ ಈ ಕಾರ್ಯಕ್ರಮದಲ್ಲಿ ಮಾಸ್ಟರ್ ಹಿರಣ್ಣಯ್ಯ, ಸಿ.ಆರ್. ಸಿಂಹ, ಹೆಚ್.ಕೆ. ರಂಗನಾಥ್ ಇವರೆಲ್ಲಾ ಭಾಗವಹಿಸಿ, ಅಂದಿನ ಪ್ರಯತ್ನವನ್ನು ಗೆಲ್ಲಿಸಿದ್ದರು.

ಕೇವಲ ಎರಡು ವರ್ಷಗಳ ಹಿಂದೆ ನಾವು ನಡೆಸಿದ ''ಹದಿನೆಂಟರ ಹಬ್ಬ'' ತೀರ ಈಚಿನದಾದ್ದರಿಂದ ಅದರ ಬಗ್ಗೆ ಪುನಃ ಮೆಲುಕಾಡುವ ಅಗತ್ಯವಿಲ್ಲ ಅನ್ನಿಸುತ್ತದೆ. ಕೊರವಂಜಿಯ ಪರಂಪರೆಯ ಬರಹಗಾರರಾದ ಟಿ. ಸುನಂದಮ್ಮ, ಅ.ರಾ.ಸೇ., ಹಾ.ರಾ., ಶಿವಸ್ವಾಮಿ ಹಾಗೂ ಹಾರ್ನಳ್ಳಿ ರಾಮಸ್ವಾಮಿ ಇವರುಗಳನ್ನು ಸನ್ಮಾನಿಸಿದ್ದು ಅಂದಿನ ಹೈಲೈಟ್.

ಇದೇ ವರ್ಷ ನವೆಂಬರ್ ಎಂಟರಂದು ಶನಿವಾರ ಸಂಜೆ ಆರೂವರೆಗೆ ಭಾರತೀಯ ವಿದ್ಯಾಭವನದ ಖೀಂಚ ಸಭಾಂಗಣದಲ್ಲಿ ಅಪರಂಜಿಯ ಇಪ್ಪತ್ತರ ಹಬ್ಬವನ್ನು ಹಮ್ಮಿಕೊಂಡಿದ್ದೇವೆ. ಎಂದಿನಂತೆ ಎಲ್ಲ ಅಭಿಮಾನಿಗಳೂ ಬಂದು ಭಾಗವಹಿಸಿ ಎಂದು ನಮ್ಮ ನಮ್ರ ಕೋರಿಕೆ.

– ಶಿವಕುಮಾರ್

ಹಿರಿಯ ಸಾಹಿತಿಗಳು....

– ವೈ.ಎನ್. ಗುಂಡೂರಾವ್

ಮಕ್ಕಳ ಚಿತ್ರ ಬರೆಯುವ ಸ್ಪರ್ಧೆಯ ಫಲಿತಾಂಶದ ದಿನ ಬಹುಮಾನ ವಿತರಣಾ ಸಮಾರಂಭಕ್ಕೆ ನೀವು ಬರಬೇಕು ಸರ್ ಎಂದಾಗ ಒಪ್ಪಿಕೊಳ್ಳಲು ಹಿಂದೆಗೆದೆ, ಇಲ್ಲ ಸರ್ ನೀವೇನೂ ಮಾಡಬೇಡಿ, ಸುಮ್ನೆ ವೇದಿಕೆಯ ಮೇಲೆ ಇರೋದಷ್ಟೆ ಸಮಾರಂಭಕೊಂದು ಕಳೆ ಎಂದರು.

ಹೌದು ಭತ್ತರಾಗಿ ಜೊತೆ ಬೇಡದ ಹುಲ್ಲು, ಕಸ, ಕಡ್ಡಿ ಬೆಳೆಯೋದಕ್ಕೂ ಕಳೆ ಅಂತ್ಲೇ ಹೇಳ್ತಾರಪ್ಪ. ನಾನೇನಾದ್ರೂ ಬಂದ್ರೆ ನಿಮ್ಮ ಸಮಾರಂಭಕ್ಕೆ ಆ ರೀತಿಯ 'ಕಳೆ'ಯ? ಎಂದೆ.

ಬಿಡಿಸರ್, ತುಂಬಾ ಜೋಕ್ ಮಾಡ್ತೀರಾ, ಹೀಗೆ ನೀವು ನಾಲ್ಕು ಮಾತು ಆಡಿದರೂ ಸರಿ ಎಂದರು.

ಅಲ್ಲಪ್ಪ ನಾನು ಬರೋದೋ ಬೇಡವೋ ಅಂತಾ ಯೋಚಿಸ್ತಾ ಇರುವಾಗ ಇನ್ನು ಮಾತಾಡೋದೇನು ಬಂತು?

ಇಲ್ಲ ಸರ್, ನೀವು ಬಂದ್ರೆ ಕಾರ್ಯಕ್ರಮಕ್ಕೆ ಒಂದು ರೀತಿಯ ಶೋಭೆ ಎಂದು ಕೊಂಚ ಪಾಲಿಶ್ ಮಾಡಿದ ಭಾಷೆಯಲ್ಲಿ ಹೇಳಿದ ಸಂಸ್ಥೆಯ ಕಾರ್ಯದರ್ಶಿ ಕಡೆಗೂ 'ಹ್ಞೂಂ' ಅನ್ನಿಸಿದ. ಹೌದು ಬಂದ್ರೆ ನಾವೇನಾದ್ರೂ ಮಾತನಾಡಬೇಕಾ ಹೇಗೆ? ಏನು ಮಾತನಾಬೇಕು, ಎಷ್ಟು ಹೊತ್ತು, ಆದೂ ಬರೇ ಬಹುಮಾನ ವಿನಿಯೋಗವಾ ಅಥವಾ ಬೇರೇನಾದರೂ ಕಾರ್ಯಕ್ರಮ ಉಂಟೇ ಎಂದು ಎಲ್ಲ ವಿವರ ತಿಳಿದುಕೊಂಡೆ.

ನೀವು ಬನ್ನಿ, ಇನ್ನೊಬ್ಬರು ಅತಿಥಿಗಳು ಬರ್ತಾರೆ. ಅವರು ಚಿತ್ರ ರಚನೆಯ ಬಗ್ಗೆ ಮಕ್ಕಳಿಗೆ ಸ್ವಲ್ಪ ತಿಳಿ ಹೇಳ್ತಾರೆ, ನಂತರ ಒಂದಿಬ್ಬರು ಹುಡುಗರಿಂದ ಹಾಡುಗಳ ಕಾರ್ಯಕ್ರಮ. ನಂತರ ಬಹುಮಾನ ವಿತರಣೆ ಅಷ್ಟೆ. ನೀವು ಒಂದು ನಾಲ್ಕು ಮಾತು ಈಗ ಆಡಿದ ಹಾಗೆ ಹಾಸ್ಯದ ಮೇಲೆ ಮಾತಾಡಿ ಸರ್ ಎಂದರು.

ಸರಿ ಎಂದು ಒಪ್ಪಿಕೊಂಡೆ, ಕಾರ್ಯಕ್ರಮ ಇನ್ನೂ ಒಂದು ವಾರವಿದೆ ಅನ್ನೋವಾಗ ಆಹ್ವಾನ ಪತ್ರಿಕೆ ತಂದು ಕೊಟ್ಟು ಹೋದರು. ಅವರು ಕೊಟ್ಟಾಗ ನಾನು ತೆಗೆದು ನೋಡಲಿಲ್ಲ. ನೋಡಿದ್ದರೆ ಚೆನ್ನಾಗಿತ್ತು. ಆಹ್ವಾನ ಪತ್ರಿಕೆಯಲ್ಲಿ ಹಿರಿಯ ಸಾಹಿತಿ ಎಂದೇ ಅಚ್ಚು ಹಾಕಿಸಿದ್ದರು. ''ಅಲ್ಲಾ ಯಾವುದರಲ್ಲಿ ಹಿರಿಯ ಸಾಹಿತಿ? ವಯಸ್ಸಿನಲ್ಲೇ, ಸಾಹಿತ್ಯ ಕೃಷಿಯಲ್ಲೇ... ಯಾವುದರಲ್ಲೂ ನಾನೇನು ಅಂತಾ ಹಿರಿಯ ಸ್ಥಾನದಲ್ಲಿರಲಿಲ್ಲ.''

ನಂತರ ಫೋನು ಮಾಡಿ, ಏನಪ್ಪ ಹೀಗೆ ಹಾಕಿಬಿಟ್ಟಿದ್ದೀರಾ, ನನ್ನ ಓರಿಗೆಯ ಬರಹಗಾರರಿಗೇನಾದರೂ ಈ ಆಹ್ವಾನ ಪತ್ರಿಕೆ ಸಿಕ್ಕರೆ ಅಥವಾ ನನ್ನ ಗುರುತಿನ ಸಾಹಿತಿಗಳೇನಾದರೂ ನೋಡಿದರೆ... ನನ್ನನ್ನು ಕಿಚಾಯಿಸದೆ ಬಿಡರು, ಬರೇ ಹೆಸರು ಹಾಕಿಸಿದ್ದರೆ ಸಾಕಿತ್ತು ಎಂದೆ.

''ಅಯ್ಯೋ ಬಿಡಿ ಸರ್, ಅದಕ್ಯಾಕೆ ಯೋಚ್ನೆ ಮಾಡ್ತೀರಾ? ನೀವೇನು ಸಾಹಿತ್ಯ ಕೃಷಿ ಮಾಡಿಲ್ವೇ, ನಿಮ್ಮ ಸಾಹಿತ್ಯ ಸಾಧನೆಯೇನೂ ಕಡಿಮೆಯೇ, ಎಲ್ಲ ಪ್ರಕಾರದಲ್ಲೂ ಕೈಯಾಡಿಸಿಟ್ಟೀರಾ ಎಂದು ಏನೇನೋ ವಿಶೇಷಣ ಹಚ್ಚಿ ನನ್ನ ಬಾಯನ್ನೇ ಮುಚ್ಚಿಸುವುದಕ್ಕೆ ಬಂದಾಗ ಹೇಳಿ ಪ್ರಯೋಜನವಿಲ್ಲವೆಂದು ಸುಮ್ಮನಾದೆ.''

ಹಿರಿಯ ಸಾಹಿತಿಗಳು ಅಂದರೆ ನಮಗೆ ತಕ್ಷಣ ಜ್ಞಾಪಕಕ್ಕೆ ಬರುವುದೆಂದರೆ ಗೊರೂರು, ಅಡಿಗರು, ಮಾಸ್ತಿಯವರು, ಕಾರಂತರು ಇತ್ಯಾದಿ... ಇವರನ್ನು ಬಿಟ್ಟರೆ ಈಗಿರುವ ಹಿರಿಯ ಸಾಹಿತಿಗಳು. ಈ ಸಾಲಿನಲ್ಲಿ ನನ್ನನ್ನು ಸೇರಿಸಿಬಿಟ್ಟಿದ್ದಾರಲ್ಲಾ ಎನಿಸಿತು. ಸರಿ ಎಂದು ಅಂದು ಕಾರ್ಯಕ್ರಮಕ್ಕೆ ಹೋದೆ.

ಕಾರ್ಯಕ್ರಮ ಪ್ರಾರಂಭವಾಗಲು ಇನ್ನೂ ವೇಳೆಯಿದ್ದುದರಿಂದ ಸಿಕ್ಕ ಸ್ನೇಹಿತರೊಡನೆ ಹೊರಗಡೆ ಅಲ್ಲೇ ನಿಂತು ಮಾತನಾಡುತ್ತಿದ್ದೆ. ನಮ್ಮಂತೆ ಮಕ್ಕಳ ಪಾಲಕರೂ ಅಲ್ಲೇ ಗುಂಪುಗೂಡಿ ಮಾತನಾಡುತ್ತಾ ನಿಂತಿದ್ದರು.

ಹಿರಿಯ ಸಾಹಿತಿ ಎಂದು ಸಂಬೋಧಿಸಿದ್ದರೆ ಜೊತೆಗೆ ನನ್ನ ಹೆಸರೂ ಕೊಂಚ ಹಳೇ ಕಾಲದವರ ರೀತಿ ಇದ್ದುದರಿಂದ ನನಗೂ ವಯಸ್ಸು 70-80ರ ಆಸುಪಾಸಿನಲ್ಲಿರಬೇಕೆಂದು ಬಗೆದ ಪಾಲಕರ ಗುಂಪೊಂದು ನನ್ನ ಬೆನ್ನ ಹಿಂದೆ ನಿಂತು ಮಾತನಾಡುತ್ತಿದ್ದುದು ಅಚಾನಕವಾಗಿ ಕಿವಿಗೆ ಬಿತ್ತು.

ಏನು ಇನ್ನೂ ಅತಿಥಿಗಳು ಬಂದಿಲ್ಲಾಂತ ಕಾಣುತ್ತೆ - ಒಬ್ಬರು

ಬರ್ತ್ತಾರೆ ಬಿಡಿ, ಹಿರಿಯ ಸಾಹಿತಿಗಳು ಅಂತಾ ಹಾಕಿದ್ದಾರೆ, ಪಾಪ ವಯಸ್ಸಾಗಿರಬೇಕು - ಮತ್ತೊಬ್ಬರು,

ಯಾಕೆ ಕರೀತಾರೋ ಈ ಹಿರಿಯ ಸಾಹಿತಿಗಳನ್ನು ಕೈ ಹಿಡ್ಕೊಂಡು ಬಂದು ವೇದಿಕೆ ಹತ್ತಿರಸಬೇಕೋ ಏನೋ ಪಾಪ - ಇನ್ನಿಬ್ಬರು

ವಯಸ್ಸಾದ ಮೇಲೆ ಸುಮ್ನೆ ಕೂತಿರೋಕಾಗೋಲ್ವ ಮನೇಲಿ - ಚಪಲ ಹಾಳಾದ್ದು - ಮತ್ತೊಬ್ಬರು.

ಇದಾರಂತಾ...? ಮಗದೊಬ್ಬರು ಅಂದಾಗ,

ರೀರೀರೀ... ಏನ್ರಿ, ನೀವು ಹೇಳೋದು? ಇಲ್ದಿದ್ರ, ಹ್ಯಾಗ್ರಿ, ಹೆಸರು ಹಾಕ್ತಾರೆ?

ಹಾಗಲ್ಲಪ್ಪ ನಾನು ಹೇಳಿದ್ದು, ಇದ್ದಾರ ಅಂದ್ರೆ.... ಕಾರ್ಯಕ್ರಮ ಅದೂ ಇದೂ ಅಂತಾ ಬೇರೆ ಬೇರೆ ಊರಿಗೆ ಹೊರಟು ಹೋಗಿದ್ದಾರ ಹೇಗೆ ಅಂತಾ ಕೇಳಿದೆ. ''ನೀವು ಅಷ್ಟಕ್ಕೆ ಏನೇನೋ ಕಲ್ಪಿಸಿಬಿಟ್ಟರೆ ಹ್ಯಾಗ್ರಿ'' ಎಂದು ನಕ್ಕರು.

ಹಿರಿಯ ಸಾಹಿತಿಗಳು ಅಂದ್ರೆ, ಕಣ್ಮುಚ್ಕೊಂಡವ್ರು ಅಂತ್ಲೇ ಸಾಮಾನ್ಯವಾಗಿ ಕಣ್ಣಮುಂದೆ ಬಂದುಬಿಡುವುದರಿಂದ ನನನ್ನೂ ಪರಲೋಕಕ್ಕೆ ಕಳುಹಿಸಿಯೇ ಬಿಟ್ಟಿದ್ದರು.


ಕತ್ತಲಾವರಿಸತೊಡಗಿತು. ಕಾರ್ಯಕ್ರಮ ಪ್ರಾರಂಭವಾಗುವ ಸೂಚನೆಯೇ ಕಾಣಿಸಲಿಲ್ಲ. ಅಷ್ಟರಲ್ಲಿ ಕರೆಂಟ್ ಕೈಕೊಟ್ಟಿತು, ಸಾಕಷ್ಟು ಹೊತ್ತು ಹೆಣಗಾಡಿದ ಕಾರ್ಯದರ್ಶಿ

ಕಡೆಗೂ ಅನೌನ್ಸ್ ಮಾಡಿದರು. ಇಂದು ವಿದ್ಯುಚ್ಛಕ್ತಿ ತೊಂದರೆ ಇರೋದ್ರಿಂದ ಇದೇ ವೇಳೆಗೆ ಮುಂದಿನ ಭಾನುವಾರ ಕಾರ್ಯಕ್ರಮವಿರುತ್ತೆ. ದಯವಿಟ್ಟು ಎಲ್ಲರೂ ಸಹಕರಿಸಬೇಕು ಎಂದು ಪ್ರಾರ್ಥಿಸಿದಾಗ ನಿಧಾನವಾಗಿ ಗುಂಪು ಚದುರತೊಡಗಿತು.

'ನಾನು ಹಿರಿಯ ಸಾಹಿತಿಯೂ ಅಲ್ಲ... ಇನ್ನೂ ನಿಮ್ಮೊಂದಿಗೇ ಇದ್ದೇನೆ' ಎಂಬುದನ್ನು ಸಾಬೀತು ಪಡಿಸುವ ಸುಯೋಗದಿಂದ ಅಂದು ವಂಚಿತನಾಗಿಬಿಟ್ಟಿದ್ದೆ.

ಶ್ರದ್ಧಾಂಜಲಿ

''ನಗೆಮುಗುಳು'' ಸಂಪಾದಕಿ ಶ್ರೀಮತಿ ಪೂರ್ಣಿಮಾ ರಾಮಣ್ಣ ಇನ್ನಿಲ್ಲ. ಕಳೆದ ವರ್ಷ ವಿನೋದನ ಸಮಾರಂಭವೊಂದರಲ್ಲಿ ಮಾನ್ಯ ಜಿ. ನಾರಾಯಣರವರು ನಮ್ಮಿಬ್ಬರನ್ನೂ ವೇದಿಕೆಗೆ ಬರಮಾಡಿಕೊಂಡು ಸನ್ಮಾನ ಮಾಡಿದ್ದರು. ಆ ಸಂದರ್ಭದಲ್ಲೇ ನಾನು ಆಕೆಯನ್ನು ಮೊದಲಬಾರಿಗೆ ಭೇಟಿ ಮಾಡಿದ್ದು. ಆಮೇಲೆ ಸಂವಾದದ ಸಮಾರಂಭವೊಂದಕ್ಕೆ ಹೋಗಿದ್ದಾಗ ಪೂರ್ಣಿಮಾರವರ ಮಗಳು ರಶ್ಮಿ ಸಿಕ್ಕಿದ್ದರು. ''ನಗೆಮುಗುಳು'' ಪ್ರಾರಂಭವಾದಾಗಿನಿಂದ ನಾನು ಆಗಾಗ ಆ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಆಕೆ ಹೋದದ್ದು ನಿಜಕ್ಕೂ ಆಕೆಯ ಕುಟುಂಬಕ್ಕೆ, ''ನಗೆಮುಗುಳು'' ಪತ್ರಿಕೆಗೆ ತುಂಬಲಾರದ ನಷ್ಟ ಅನ್ನಿಸುತ್ತದೆ. ಅವರ ಬಂಧು ಮಿತ್ರರಿಗೆ ಆ ನಷ್ಟವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಅಪರಂಜಿ ತುಂಬು ಹೃದಯದಿಂದ ಪ್ರಾರ್ಥಿಸುತ್ತಾಳೆ.



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಶ್ರೀನಿವಾಸ ವೈದ್ಯ

ಉತ್ತಮ ಹಾಸ್ಯ ಸಾಹಿತ್ಯದಲ್ಲಿ, ವಿಶೇಷತಃ ಸಭ್ಯ ಹಾಸ್ಯದಲ್ಲಿ ನಾಜೂಕಾದ ಕಲಾತ್ಮಕತೆಯಿರಬೇಕು. ಮೂರ್ತಿರಾಯರ ''ಲಲಿತೆಯ ವಿದ್ಯಾಭ್ಯಾಸ'' ಕೃತಿಯಲ್ಲಿದ್ದಂತೆ.

ಸುಮಾರು ಎಪ್ಪತ್ತು ಎಂಬತ್ತು ವರುಷಗಳ ಹಿಂದೆ, ಸುಶಿಕ್ಷಿತ ಪತಿಯೊಬ್ಬ ಮದುವೆಯಾದ ಹೊಸತರಲ್ಲಿ ತನ್ನ ಅಶಿಕ್ಷಿತ ಪತ್ನಿ - ಇನ್ನೂ ಹುಡುಗಿ-ಗೆ ವಿದ್ಯಾಭ್ಯಾಸ ಕಲಿಸಲು ಪಟ್ಟ ಪರಿಪಾಡು ಈ ಕತೆಯಲ್ಲಿದೆ.

ಗಂಡ ಹೆಂಡಿರಾದ ಈ ಗುರು ಶಿಷ್ಯೆಯರ ಒಲವು ನಲಿವು, ಸೊಗಸು ಮುನಿಸು, ಸರಸ ವಿರಸ ಈ ಎಲ್ಲ ಕೊನೆಯಿರದ ಅಂಟಿದ ನಂಟಿನ ಚಿತ್ರ ಕತೆಯ ಉದ್ದಕ್ಕೂ ನವಿರಾದ ಹಾಸ್ಯದೊಡನೆ ಮೂಡಿ ಬಂದಿದೆ.

''ಲಲಿತೆ ಅವಳ ಮೇಷ್ಟ್ರ ವಕ್ರ ಚಿತ್ರ ಬಿಡಿಸಿದ್ದು'''... ''ಸಿಲ್ಲಿ ಸ್ಟುಪಿಡ್ ಮುಂತಾದ ಕೆಲವು ಪದಗಳನ್ನು ಲಲಿತೆ ನನ್ನಿಂದ ಕಲಿತು, ಅವುಗಳನ್ನು ಅಪಾತ್ರದಲ್ಲಿ ಉಪಯೋಗಿಸಬಾರದೆಂದು ಎಷ್ಟು ಬಗೆ ಹೇಳಿದರೂ ಕಿವಿಗೆ ಹಾಕಿಕೊಳ್ಳದೇ ನನ್ನ ಮೇಲೆಯೇ ಪ್ರಯೋಗಿಸಿದಳು'' .... ''ಈಗ ಲಲಿತೆಯೂ ನಾನು ಒಟ್ಟಿಗೆ ''ರೋಮಿಯೋ ಜೂಲಿಯೆಟ್'' ನಾಟಕವನ್ನೂ, ಷೆಲ್ಲಿಯ ಗೀತೆಗಳನ್ನೂ ಓದುತ್ತೇವೆ...'' ಇತ್ಯಾದಿಯಾಗಿ ಮೂರ್ತಿರಾಯರು ಚಿತ್ರಿಸಿದ ಕುಸುರಿ ಚಿತ್ರಗಳು ಈ ಕತೆಯನ್ನು ಕನ್ನಡದ ಒಂದು ''ಕ್ಲಾಸಿಕ್'' ಕತೆಯ ಪಟ್ಟಕ್ಕೆ ಏರಿಸಿವೆ.

ಈ ಕತೆಯಲ್ಲಿ ನನಗೆ ಎಲ್ಲಕ್ಕೂ ಹೆಚ್ಚಾಗಿ ಮೆಚ್ಚಿಗೆಯಾದ ಭಾಗ, ''... ಅಷ್ಟು ಹೊತ್ತಿಗೆ ಕೊಬ್ಬರಿ ಸಕ್ಕರೆಯೆಲ್ಲಾ ಅದೃಶ್ಯವಾಗಿ, ಲಲಿತೆಯ ತುಟಿಯ ಮೇಲೆ ಸ್ವಲ್ಪ ಮಾತ್ರ ಕಾಣುತ್ತಿತ್ತು. ನನಗೆ ಚರಪು ಸಿಕ್ಕಿದ್ದು ಅಷ್ಟೇ'' ಎಂಬ ಸರಸ ವಿನೋದದಲ್ಲಿ ಮೂರ್ತಿರಾಯರು ತೋರುವ ಸಂಯಮ.

ಸಾಮಾನ್ಯ ಲೇಖಕರು ಗಂಡು ಹೆಣ್ಣಿನ ಪ್ರೀತಿ ಪ್ರೇಮಗಳ ಬಗ್ಗೆ ಬರೆಯುವಾಗ ''ಅವಳನ್ನು ಬರಸೆಳೆದು ತಬ್ಬಿಕೊಂಡನು'' ''ತುಟಿಗೆ ತುಟಿ ಬೆಸೆದನು'' ''ದೀರ್ಘವಾಗಿ ಚುಂಬಿಸಿದನು'' ''ಹಾಸಿಗೆಗೆ ಕೊಡಹಿಕೊಂಡನು'' ಹೀಗೆ ಲಂಗುಲಗಾಮಿಲ್ಲದೇ, ತಾವೇ ವಾತ್ಸಾಯನನ ತೆಕ್ಕೆಗೆ ಬೀಳುವದೇ ಹೆಚ್ಚು. ಹಾಗಾಗಿ ಮೂರ್ತಿರಾಯರ ''ಚರಪಿನ ಸನ್ನಿವೇಶ''ದ ಚಿತ್ರಣ ಕನ್ನಡ ಸಾಹಿತ್ಯದ ಅತಿ ಮೃದು ಮಧು ಮಾಡಿವಂತ ಪ್ರಣಯ ಸನ್ನಿವೇಶವೆನಿಸಿದೆ, ಮಾಸ್ತಿಯವರ 'ಸುಬ್ಬಣ್ಣ'ದಲ್ಲಿ ಬರುವ ''ಶಾನೇ ನೋವಾಯಿತೇ'' ಎಂಬ ಪ್ರಸಂಗದಂತೆ.

ಲಲಿತೆಯ ವಿದ್ಯಾಭ್ಯಾಸ

- ಮೂರ್ತಿ ರಾಯರು

ನಮಗೆ ಮದುವೆಯಾದ ಹೊಸದರಲ್ಲಿ ಲಲಿತೆ ''ಐದು ರೂಪಾಯಿನ ಪರೀಕ್ಷೆ''ಯ ಕ್ಲಾಸಿನಲ್ಲಿ ಓದುತ್ತಿದ್ದಳಂತೆ. ಆ ಕ್ಲಾಸಿನಲ್ಲಿ ಅವಳ ವಿದ್ಯಾಭ್ಯಾಸ ಸಾಂಗವಾಗಿ ನಡೆಯದೆ ನಿಂತು ಹೋದದ್ದಕ್ಕೆ ಸರಿಯಾದ ಕಾರಣ ಇನ್ನೂ ನನಗೆ ಗೊತ್ತಾಗಿಲ್ಲ. ಮೇಷ್ಟರು ಅವಳನ್ನು ನಿಷ್ಕಾರಣವಾಗಿ ಬೆಂಚಿನ ಮೇಲೆ ನಿಲ್ಲಿಸಿದರೆಂದು ಅವಳ ಹೇಳಿಕೆ. ಆ ವೇಳೆಗೆ ಅವಳಿಗೆ ಮದುವೆಯಾಗಿದ್ದದರಿಂದ ತನ್ನ ಅಪಾರವಾದ ಸ್ವಂತ ಬಿಗುಮಾನದ ಜೊತೆಗೆ ನನ್ನಲ್ಲಿರುಬಹುದಾದ ಅಲ್ಪಸ್ವಲ್ಪ ಬಿಗುಮಾನವನ್ನೂ ಸೇರಿಸಿಕೊಂಡಿದ್ದಳೆಂದು ತೋರುತ್ತದೆ. ಮೇಷ್ಟರು ಶಿಕ್ಷೆಯನ್ನು ವಿಧಿಸಿದೊಡನೆಯೇ ಕಣ್ಣಿನಲ್ಲಿ ನೀರು ಬರಮಾಡಿಕೊಂಡು ಮನೆಗೆ ಹೋಗಿ ತಂದೆಯೊಡನೆ ದೂರು ಹೇಳಿಕೊಂಡಳು. ಅವರಲ್ಲಿ ಮಗಳ ಮೇಲಿನ ಪ್ರೇಮಕ್ಕೂ ನ್ಯಾಯದೃಷ್ಟಿಗೂ ಕದನ ನಡೆದು ವ್ಯಾಮೋಹವೇ ಗೆಲ್ಲಲು, ಅವರು ಇನ್‌ಸ್ಪೆಕ್ಟರಿಗೆ ರಿಪೋರ್ಟು ಮಾಡುತ್ತೇನೆಂದು ಮೇಷ್ಟರನ್ನು ಹೆದರಿಸಿದರಂತೆ. ಲಲಿತೆಯಂತೂ ಮತ್ತೆ ಸ್ಕೂಲಿಗೆ ಹೋಗುವುದಿಲ್ಲವೆಂದು ಹಟ ಹಿಡಿದು ಅಂದಿನಿಂದಾಚೆಗೆ ತನ್ನ ಬುದ್ಧಿಶಕ್ತಿಯನ್ನೆಲ್ಲಾ ಗುಚ್ಚಮ್ಮ ನಕ್ಷತ್ರ ಆಡುವುದರಲ್ಲಿಯೇ ಉಪಯೋಗಿಸಿದಳು. - ಈ ಕೊನೆಯ ಅಂಶ ಲಲಿತೆಯ ಹೇಳಿಕೆಯಲ್ಲಿಲ್ಲ. ಈ ಕಥೆ ಲಲಿತೆಯೇ ಹೇಳಿದ್ದಾದುದರಿಂದ ನಿಶ್ಚಯವೇ ಇರಬೇಕು. ಅವಳ ವಿದ್ಯಾಭ್ಯಾಸ ಅಲ್ಲಿಗೇ ಕೊನೆಗೊಂಡದ್ದಕ್ಕೆ ಇದೇ ಕಾರಣವಲ್ಲದೆ ಅವಳು ತಮ್ಮ ಮೇಷ್ಟರ ವಕ್ರಚಿತ್ರವನ್ನು ಬರೆದು ಜೊತೆಗಾತಿಯರಿಗೆ ತೋರಿಸುತ್ತಿದ್ದದ್ದಲ್ಲ. ಆ ಕುತ್ಸಿತವಾದ ದೂರನ್ನು ಅವಳಿಗೆ ಆಗದವರು ಯಾರೋ ಹರಡಿರಬೇಕೆಂದೂ. ಆ ಚಿತ್ರ ಮೇಷ್ಟರ ಕಣ್ಣಿಗೆ ಬೀಳಲೇ ಇಲ್ಲವೆಂದೂ ಲಲಿತೆ ಪ್ರಮಾಣ ಮಾಡಿ ಹೇಳುತ್ತಾಳೆ.

ನಮ್ಮ ಮದುವೆಯಾಗಿ ಒಂದು ವರ್ಷವಾದ ಮೇಲೂ ನನಗೆ ಈ ವಿಷಯವೆಲ್ಲಾ ತಿಳಿದಿರಲಿಲ್ಲ. ಅವಳ ವಿದ್ಯಾಭ್ಯಾಸ ಹೇಗೆ ನಡೆಯುತ್ತಿತ್ತೆಂಬ ವಿಷಯದಲ್ಲಿ ನಾನು ಶ್ರದ್ಧೆಯನ್ನೂ ವಹಿಸಲಿಲ್ಲ. ನಮ್ಮ ಮಾವನವರಿಗೆ ಅವಳಲ್ಲಿ ಪಕ್ಷಪಾತ ದೃಷ್ಟಿಯಾದರೆ ನನಗೆ ಪಕ್ಷಪಾತ ಮಾತ್ರವಲ್ಲ, ಅವಳು ಸರ್ವಲಕ್ಷಣ ಸಂಪನ್ನೆಯೆಂದೂ ಶಾರದೆಯ ಅಪರಾವತಾರವೆಂದೂ ದೃಢವಾದ ನಂಬಿಕೆ. ಆದ್ದರಿಂದ ಅವಳಿಗೆ ಇಂಗ್ಲಿಷು ಓದುವುದಕ್ಕೂ ಬರೆಯುವುದಕ್ಕೂ ಬಾರದೆಂದು ತಿಳಿದಾಗ ನನಗೆ ಬಹಳ ಆಶ್ಚರ್ಯವೂ ಖೇದವೂ ಆಯಿತು. ಆದರೂ ಅವಳದ್ದೇನೂ ತಪ್ಪಿಲ್ಲವೆಂದುಕೊಂಡೆನು; - ಅದು ಹೇಗಾಗುತ್ತಿತ್ತೋ ತಿಳಿಯದು, ಲಲಿತೆ ಅಪರಾಧಿ ಸ್ಥಾನದಲ್ಲಿ ನಿಂತ ದಿನವೇ ಇಲ್ಲ. ಈ ಸಂದರ್ಭದಲ್ಲೇನೋ ತಪ್ಪು ಅವಳದ್ದಲ್ಲವೆಂದು ಯಾರಾದರೂ ಒಪ್ಪಲೇಬೇಕು. ಆದರೇನು, ತಪ್ಪು ಯಾರದ್ದಾದರೂ ಆಗಲಿ, ಲಲಿತೆಗೆ ''ಒಂದು ಬೆಕ್ಕು ಒಂದು ಇಲಿಯ ಕಡೆಗೆ ಓಡಿತು'' ಎಂದು ಇಂಗ್ಲೀಷಿನಲ್ಲಿ ಬರೆಯಲು ಬರುತ್ತಿರಲಿಲ್ಲ. ಇದು ನನಗೆ ಬಹಳ ಅಸಮಾಧಾನವುಂಟುಮಾಡಿತು. ವೇದಿಕೆ ಮೇಲೆ ನಿಂತು ''ಈ ಇಪ್ಪತ್ತನೆಯ

ವರ್ತಮಾನದಲ್ಲಿ ಸಹ ನಾಗರಿಕರೆಂದು ಹೇಳಿಕೊಳ್ಳುವ ನಾವು ಹೆಂಗಸರನ್ನು ಅಜ್ಞಾನ ಕೂಪದಲ್ಲಿಯೇ ಇಟ್ಟಿರುವುದನ್ನು ನೋಡಿದರೆ ರಕ್ತ ಕುದಿಯುತ್ತದೆ. ನಾವು ಸಂಪ್ರದಾಯಕ್ಕೆ ಕಟ್ಟುಬಿದ್ದ ಗುಲಾಮರು, ಹೇಡಿಗಳು'' ಎಂದು ನಾನು ಗರ್ಜಿಸುತ್ತಿರುವುದು; ಇತ್ತ ನನ್ನ ಪತ್ನಿಗೇ ಇಂಗ್ಲಿಷು ಓದಿ ಬರೆಯುವುದಕ್ಕೆ ಬಾರದು. ಹಾಗೆಯೇ ಯೋಚಿಸಿನೋಡಿ ''ಇನ್ನೂ ಕಾಲ ಮೀರಿಲ್ಲ, ಈ ಕುಂದನ್ನು ಹೋಗಲಾಡಿಸಿ ಮತ್ತೆ ನಾಲ್ಕು ಜನರಲ್ಲಿ ತಲೆಯೆತ್ತಿಕೊಂಡು ನಡೆಯಬೇಕು'' ಎಂದುಕೊಂಡು ಕೂಡಲೇ ಲಲಿತೆಗೆ ಒಬ್ಬ ಉಪಾಧ್ಯಾಯಿನಿಯನ್ನು ಗೊತ್ತು ಮಾಡಬೇಕೆಂದು ನಿಶ್ಚಯಿಸಿದೆನು. ಆದರೆ ನಮ್ಮ ಮನೆಗೆ ಯಾವ ಉಪಾಧ್ಯಾಯಿನಿಯೂ ಕಾಲಿಡಕೂಡದೆಂದು ಲಲಿತೆ ಖಂಡಿತವಾಗಿ ಹೇಳಿಬಿಟ್ಟಳು. ಆ ವಿಷಯದಲ್ಲಿ ನಾನು ಹಟ ಹಿಡಿಯುವುದು ಉಚಿತವಲ್ಲವೆಂದು ನನ್ನ ಅಸಮಾಧಾನವನ್ನು ಹಾಗೆಯೇ ನುಂಗಿಕೊಂಡೆನು. ಅನಂತರ ಹಾಗೇ ಯೋಚಿಸಿದ್ದರಲ್ಲಿ ಲಲಿತೆಗೆ ಮತ್ತೊಬ್ಬರಿಂದ ಪಾಠ ಹೇಳಿಸುವುದಕ್ಕಿಂತ ನಾನೇ ಹೇಳಿಕೊಡುವುದು ಉತ್ತಮವೆಂದು ತೋರಿತು. ಎಷ್ಟಾದರೂ ಪ್ರೀತಿಯಿಂದ ಕಲಿಸಿದಾಗ ತಿಳಿಯುವಷ್ಟು ಚೆನ್ನಾಗಿ ಹಣದ ಆಸೆಗೆ ಕೆಲಸ ಮಾಡುವ ಮೇಷ್ಟರಿಂದ ಹೇಳಿಸಿಕೊಂಡರೆ ತಿಳಿಯುತ್ತದೆಯೆ?... ಒಂದು ವಿಧದಲ್ಲಿ ನೋಡಿದರೆ ಲಲಿತೆ ವಿದ್ಯಾವತಿಯಾಗದೆ ನಮ್ಮ ಮನೆಗೆ ಬಂದದ್ದೇ ಒಳ್ಳೆಯದಾಯಿತು. ಈಗ ಅವಳ ಮನಸ್ಸು ಸರಳವಾಗಿದೆ, ತಿಳಿಯಾಗಿದೆ, ಇನ್ನೂ ಶಿಲ್ಪಿಯ ಕೈಗೆ ಸಿಕ್ಕ ಅಮೃತಶಿಲೆಯಂತಿದೆ. ಅದಕ್ಕೆ ನಾನು ಯಾವ ರೂಪವನ್ನು ಕೊಟ್ಟರೂ ಕೊಡಬಹುದು. ಅವಳ ಆತ್ಮಕ್ಕೆ ಪೂರ್ಣರೂಪವನ್ನು ಕೊಡುವ ಶಿಲ್ಪಿ ನಾನಾಗುವೆನು. ಮತ್ತೊಬ್ಬರು ನಿರ್ಮಿಸಿದ ಪ್ರತಿಮೆಯನ್ನು ಕಡೆಯುವುದಕ್ಕಿಂತ ನಾನೇ ಶಿಲ್ಪಿಯಾಗುವುದಲ್ಲವೆ ಮಹತ್ವ! ಲಲಿತೆಯ ವಿದ್ಯಾಭ್ಯಾಸವು ಲಲಿತಕಲೆ; ಅವಳು ವಿದ್ಯಾವತಿಯಾಗುತ್ತಿರುವಾಗ ನಾನು ಕಲೆಗಾರನಾಗುತ್ತಿರುವೆನು.... ಹೀಗೆಲ್ಲಾ ಯೋಚನೆ ಮಾಡಿ ನಾನೇ ಉಪಾಧ್ಯಾಯ ವೃತ್ತಿಯನ್ನು ಅವಲಂಬಿಸಬೇಕೆಂದು ನಿಶ್ಚಯಿಸಿದೆನು.

ಉಪಾಧ್ಯಾಯನಿಗೂ ಶಿಷ್ಯೆಗೂ ಉತ್ಸಾಹವೇನೋ ತುಂಬಿ ತುಳುಕುತ್ತಿತ್ತು. ಆದರೆ ಆಗ ಗೌರಿಯ ಹಬ್ಬ ಹತ್ತಿರವಿದ್ದುದರಿಂದ ಪಾಠ ನಿರ್ವಿಘ್ನವಾಗಿ ನಡೆಯದೆ ಹೋಗಬಹುದೆಂದು ನಮ್ಮ ಶಾಲೆಯ ಪ್ರಾರಂಭೋತ್ಸವವನ್ನು ಮುಂದುವರಿಸಬೇಕಾಗಿ ಬಂತು. ಅನಂತರ ಲಲಿತೆ ಖಾಯಿಲೆ ಬಿದ್ದಳು. ಹೀಗೆಯೇ ನಾಲ್ಕೈದು ತಿಂಗಳು ನಮ್ಮ ಉತ್ಸಾಹವು ಕಾರ್ಯರಂಗಕ್ಕೆ ಇಳಿಯದೇ ಜೀವಂತರವಾಗಿರಬೇಕಾಯಿತು. ಇಷ್ಟು ದಿನವೇ ತಡೆದದ್ದಾಯಿತು; ಇನ್ನೆರಡು ತಿಂಗಳು ಕಳೆಯಲಿ, ಬೇಸಗೆ ರಜ ಬರುತ್ತದೆ, ಎಂದು ನಾನಷ್ಟು ಕಾಲ ತಳ್ಳಿದೆ; ನನ್ನಿಂದ ತಡವಾದದ್ದು ಎರಡು ತಿಂಗಳು ಮಾತ್ರವಾದರೂ ಕಾಲ ವಿಳಂಬಕ್ಕೆ ನಾನೇ ಪೂರ್ತಿ ಜವಾಬ್ದಾರನೆಂದು ಲಲಿತೆ ಇಂದಿನವರೆಗೂ ಪ್ರತಿಪಾದಿಸುತ್ತಾಳೆ. ಅದು ಶುದ್ಧ ಸುಳ್ಳು.

ಕೊನೆಗೆ ಬೇಸಗೆಯ ರಜ ಬಂದಮೇಲೆ ಒಂದು ಶುಭ ದಿವಸವನ್ನು ಗೊತ್ತುಮಾಡಿ ವಿದ್ಯಾಭ್ಯಾಸವನ್ನಾರಂಭಿಸಬೇಕೆಂದು ನಿರ್ಣಯವಾಯಿತು. ನಾನು ಒಂದು ಪ್ರಥಮ ಪಾಠದ ಪುಸ್ತಕವನ್ನು ತಂದು ಅಂದವಾಗಿ ರಟ್ಟು ಹಾಕಿಟ್ಟೆನು. ಅದರ ಮೇಲೆ ಲಲಿತೆಯ

ಹೆಸರು ಬರೆಯಬೇಕೇ ಬೇಡವೆ ಎಂಬ ವಿಷಯದಲ್ಲಿ ನನಗೂ ಅವಳಿಗೂ ದೊಡ್ಡ ವಾಗ್ಯುದ್ಧವಾಯಿತು. ಅವಳ ಹೆಸರು ಪುಸ್ತಕದ ಮೇಲಿದ್ದರೆ ನೋಡಿದವರಿಗೆಲ್ಲರಿಗೂ ಅವಳಿಗೆ ಇಂಗ್ಲಿಷು ಬಾರದೆಂದೂ, ಆಗತಾನೇ ಕಲಿಯುತ್ತಿರುವಳೆಂದೂ ತಿಳಿದುಹೋಗುವುದು - ಇದು ಲಲಿತೆಯ ಶಂಕೆ. ಅವಳ ಮಾತೇ ಏಕೆ ಸಾಗಬೇಕು, ಹೆಸರನ್ನು ಬರೆದೇ ತೀರುತ್ತೇನೆ ಎಂದು ನನ್ನ ಹಟ. ಈ ಜಗಳ ಪೂರೈಸುವುದರೊಳಗೆಯೇ ಅವಳು ಪುಸ್ತಕದ ಮೇಲೆ ನನ್ನ ಹೆಸರು ಬರೆದಿಟ್ಟುಬಿಟ್ಟಳು. ನಾನು ಅದರ ಹಿಂದೆ 'ಮಿಸೆಸ್' ಎಂದು ಸೇರಿಸಿದ್ದನ್ನು ನೋಡಿ ಅವಳು ರೇಗಿಕೊಂಡು ನಾನು ಇಂಗ್ಲಿಷ್ ಕಲಿಯುವುದಿಲ್ಲವೆಂದೂ ಯಾರಾದರೂ ಮಾನಗೆಟ್ಟವರನ್ನು ಕರೆತಂದು ಪಾಠ ಹೇಳಬಹುದೆಂದೂ ಹೇಳತೊಡಗಿದಳು. ವಿದ್ಯಾಭ್ಯಾಸ ಮುಂದುವರಿಯುವುದಕ್ಕೆ ಬದಲಾಗಿ ಈ ಜಗಳದಲ್ಲೇ ಮೂರುದಿನ ಕಳೆದುಹೋಯಿತು. ಆದರೂ ಆ ಕಾಲ ತೀರ ವ್ಯರ್ಥವಾಗಲಿಲ್ಲ. 'ಸಿಲ್ಲಿ, ಸ್ಟುಪಿಡ್' ಮುಂತಾದ ಕೆಲವು ಪದಗಳನ್ನು ಲಲಿತೆ ನನ್ನಿಂದ ಕಲಿತು, ಅವುಗಳನ್ನು ಅಪಾತ್ರದಲ್ಲಿ ಉಪಯೋಗಿಸಬಾರದೆಂದು ಎಷ್ಟು ಬಗೆ ಹೇಳಿದರೂ ಕಿವಿಗೆ ಹಾಕಿಕೊಳ್ಳದೆ ನನ್ನ ಮೇಲೆಯೇ ಪ್ರಯೋಗಿಸಿದಳು. ಕೊನೆಗೆ ಲಲಿತೆಯ ಹೆಸರಿನ ಕೆಳಗೆ ಐದು ವರ್ಷದ ಹಿಂದಿನ ತಾರೀಖನ್ನು ಹಾಕಿದ್ದಲ್ಲದೆ ನನ್ನ ಕೆಲವು ನೋಟ್ ಪುಸ್ತಕಗಳನ್ನೂ ಹೊಸದಾಗಿ ಕೊಂಡಿದ್ದ ಫೌಂಟನ್ ಪೆನ್ನನ್ನೂ ಲಂಚವಾಗಿ ಕೊಟ್ಟಮೇಲೆ ಈ ಜಗಳ ಕೊನೆಗಂಡಿತು.

ಲಲಿತೆಗೆ ನಿಜವಾಗಿಯೂ ಪ್ರಪಂಚ ಪರಿಚಯವಾಗಬೇಕಾದರೆ ಸಾಹಿತ್ಯವೊಂದು ಬಂದರೆ ಸಾಲದೆಂದು ತೋರಿ ಭೂವಿವರಣೆ ಚರಿತ್ರೆಗಳನ್ನೂ ನನ್ನ ಪಾಠ ಕ್ರಮದಲ್ಲಿ ಸೇರಿಸಿಕೊಂಡಿದ್ದೆನು ಆದರೆ ಪ್ರಾರಂಭವಾದ ಮೇಲೆ ಸ್ವಲ್ಪ ದಿನಗಳಲ್ಲಿಯೇ ಇವೆರಡರಿಂದ ಬಹಳ ತೊಂದರೆಯಾದ್ದರಿಂದ ನಾನಾಗಿಯೇ ಅವುಗಳನ್ನು ನಿಲ್ಲಿಸಬೇಕಾಯಿತು. ಊಟಕ್ಕೆ ಕುಳಿತಾಗ ಅಥವಾ ಎಲೆ ಅಡಕೆ ಹಾಕಿಕೊಳ್ಳುವಾಗ ನಿಮ್ಮ ಹೆಂಡತಿ ನಿಮ್ಮನ್ನು ಪರೀಕ್ಷಿಸುವುದಕ್ಕೋ ಬರಿಯ ಕುತೂಹಲದಿಂದಲೋ - ''ಕಿಲಿಮಂಜೇರೋ ಎಲ್ಲಿದೆ?'' ಎಂದು ಕೇಳಿದರೆ ನಿಮ್ಮ ಗತಿ ಏನಾಗಬೇಕು? ಅಂಥ ಪ್ರಶ್ನೆಗಳಿಗೆ ಉತ್ತರ ಕೊಡಲಾರದೆ ನಂಬರು ಕಳೆದುಕೊಂಡು ಈಗಾಗಲೇ ಹತ್ತು ಹದಿನೈದು ವರ್ಷಗಳಾಗಿರಬೇಕು. ಇನ್ನೂ ಅದೆಲ್ಲಾ ಮನಸ್ಸಿನಲ್ಲಿ ನಿಲ್ಲಬೇಕೆಂದರೆ ಹೇಗೆ? ಲಲಿತೆಯ ಜೊತೆಗೆ ಹೆಜ್ಜೆ ಹೆಜ್ಜೆಗೂ ನಾನು ಭೂವಿವರಣೆ ಚರಿತ್ರೆಗಳನ್ನು ಅಭ್ಯಾಸ ಮಾಡುವುದು ಸಾಧ್ಯವಾಗಿ ತೋರಲಿಲ್ಲ. ಆದ್ದರಿಂದ ''ನಿನಗೆ ಮನೆಗೆಲಸಗಳನ್ನು ಮಾಡಿಕೊಂಡು ಇದನ್ನೆಲ್ಲಾ ಓದುವುದಕ್ಕಾಗುವುದಿಲ್ಲ, ಸದ್ಯಕ್ಕೆ ಇಂಗ್ಲಿಷೊಂದು ಸಾಕು'' ಎಂದು ಹೇಳಿಬಿಟ್ಟೆ.

ಇನ್ನು ಇಂಗ್ಲಿಷು ಪಾಠಕ್ಕೆ ಸರಿಯಾದ ಕಾಲವನ್ನು ಕಂಡು ಹಿಡಿಯುವ ಕೆಲಸವೊಂದು ಉಳಿಯಿತು. ಉಷ್ಣವಲಯದಲ್ಲಿ ಮೆದುಳಿನ ಕೆಲಸ ಮಾಡುವವರಿಗೆ ಪ್ರಾತಃಕಾಲವೇ ಅತ್ಯುತ್ತಮವಾದದ್ದೆಂಬ ವೈಜ್ಞಾನಿಕರ ನಿರ್ಣಯವನ್ನು ಮೂಲೆಗೆ ತಳ್ಳಿ ಲಲಿತೆ ''ನಾನು ಮೆದುಳಿನ ಕೆಲಸಕ್ಕೆ ಕುಳಿತರೆ ಮುಸುರೆ ಕೆಲಸವನ್ನು ನೀವು ಮಾಡುತ್ತೀರಾ?'' ಎಂದಳು. ಬೆಳಗ್ಗೆಯೆಲ್ಲಾ ಅವಳಿಗೆ ಮನೆಗೆಲಸ ಏನಾದರೂ ಇದ್ದೇ ಇರುವುದು; ಮಧ್ಯಾಹ್ನವೆಲ್ಲಾ

ನಾನು ಮನೆಯಲ್ಲಿರುವುದಿಲ್ಲ; ಸಂಜೆ ಟೆನಿಸ್ಸಿಗೆ ಹೋಗಬೇಕು - ಈ ಮಧ್ಯೆ ನಮ್ಮ ಶಾಲೆಗೆ ಕಾಲ ಸಿಕ್ಕುವುದೇ ಕಷ್ಟವಾಯಿತು. ''ನಿನ್ನ ಮನೆಗೆಲಸ ಅಷ್ಟರಲ್ಲೇ ಇದೆ, ಬೆಳಗ್ಗೆ ಪುರುಸತ್ತು ಮಾಡಿಕೊ'' ಎಂದು ಲಲಿತೆಗೆ ಹೇಳಿದರೆ ಅವಳು ''ನೀವು ಟೆನಿಸ್ ಬಿಟ್ಟುಬಿಡಿ, ಆಡುವುದು ಅಷ್ಟರಲ್ಲೇ ಇದೆ. ನಾನು ಬೇಕಾದರೂ ನಿಮ್ಮನ್ನು ಸೋಲಿಸುತ್ತೇನೆ'' ಎನ್ನುತ್ತಾಳೆ. ''ಅದಾಗದಿದ್ದರೆ ಬೆಳಗಿನ ಜಾವಕ್ಕೆ ಬೇಕಾದರೆ ಏಳುತ್ತೇನೆ. ನಿಮಗೆ ಎಚ್ಚರವಾಗದಿದ್ದರೆ ಮುಖಕ್ಕೆ ತಣ್ಣೀರೆರಚಿ ಎಚ್ಚರಿಸುತ್ತೇನೆ'' ಎಂದು ಲಲಿತೆ ಭರವಸೆಯನ್ನೇನೋ ಕೊಟ್ಟಳು. ಆದರೂ ನನಗೇಕೋ ಅದು ರುಚಿಸಲಿಲ್ಲ. ಕೊನೆಗೆ ರಾತ್ರಿ ಊಟವಾದ ಮೇಲೆ ಪಾಠ ಹೇಳಿಕೊಡುವುದೆಂದು ನಿಶ್ಚಯವಾಯಿತು. ಲಲಿತೆ ಇಂಗ್ಲಿಷ್ ಕಲಿಯುವುದು ಯಾರಿಗೂ ತಿಳಿಯಕೂಡದೆಂದು ಬೇರೆ ಗೊತ್ತುವಳಿಯಿದ್ದದ್ದರಿಂದ ರಾತ್ರಿಯೇ ಅತ್ಯುತ್ತಮವಾದ ಕಾಲವೆಂದು ಅವಳೂ ಒಪ್ಪಿದಳು. ನನಗೆ ಮಾತ್ರ ಲಲಿತೆ ಆಗ ಎಲ್ಲಿ ತೂಕಡಿಸುವಳೋ ಎಂದು ಹೆದರಿಕೆ; ಆ ತೂಕಡಿಕೆ ನನ್ನ ಶಿಕ್ಷಣದ ಮಹಿಮೆಯೆಂದು ಎಲ್ಲಿ ಹೇಳುವಳೋ ಎಂದು ಮತ್ತೂ ಹೆದರಿಕೆ. ''ಹಾಗೆ ಹೇಳುವುದಿಲ್ಲ, ಹಲ್ಲು ಕಚ್ಚಿಕೊಂಡು ಸುಮ್ಮನಿರುತ್ತೇನೆ,'' ಎಂದು ಅವಳು ಮಾತು ಕೊಟ್ಟಮೇಲೂ ನನ್ನ ಮನಸ್ಸಿಗೆ ಅಷ್ಟೇನೂ ಸಮಾಧಾನವಾಗಲಿಲ್ಲ.

ಪ್ರಾರಂಭೋತ್ಸವದ ದಿನ ಬಂತು. ಆ ದಿನ ಸಂಜೆ ನಾನು ಮನೆಗೆ ಬರುವ ವೇಳೆಗೆ ನನ್ನ ಮೇಜಿಗೆ ಸ್ಥಾನ ಭ್ರಷ್ಟತ್ವವಾಗಿತ್ತು. ನಾನು ಅದರ ಮೇಲೆ ಯಾವುದೋ ಕ್ರಮವನ್ನನುಸರಿಸಿ ಜೋಡಿಸಿದ್ದ ಪುಸ್ತಕಗಳು ಒಂದೊಂದು ಒಂದೊಂದು ಕಡೆ ಕಿಟಕಿಯ ಗೂಡು ಮುಂತಾದ ಸ್ಥಳಗಳನ್ನು ಅಲಂಕರಿಸಿದ್ದುವು. ರೂಮಿನ ಮಧ್ಯೆ ಮೇಜು, ಅದಕ್ಕೆ ಎರಡು ಕಡೆಗಳಲ್ಲೂ ಎದುರು ಬದರಾಗಿ ಒಂದೊಂದು ಕುರ್ಚಿ, ಮೇಜಿನ ಮೇಲೆ ಲಲಿತೆಯ ನೋಡು ಪುಸ್ತಕಗಳು, ಫೌಂಟನ್ ಪೆನ್, ಮೇಜಿನ ದೀಪ, ಇತ್ಯಾದಿ. ಈ ಅವಾಂತರವೆಲ್ಲಾ ಏಕೆಂದು ಕೇಳಿದ್ದಕ್ಕೆ ಶಾಲೆಯ ಆವರಣ ಸರಿಯಾಗಿರಬೇಕೆಂದೂ ಉಪಾಧ್ಯಾಯನಿಗೂ ಶಿಷ್ಯೆಗೂ ನಡುವೆ ಒಂದು ಮೇಜಿದ್ದರೆ ಒಳ್ಳೆಯದೆಂದೂ ಉತ್ತರ ಬಂತು. ಒಂದು ಮೂಲೆಯಲ್ಲಿ ಕಾಲುಮಣೆಯನ್ನು ಹಾಕಿ ಅದರ ಮೇಲೆ ನಾಲ್ಕೈದು ಪುಸ್ತಕಗಳನ್ನಿಟ್ಟು ಪೂಜೆ ಮಾಡಿ ಚರಪಿಗಾಗಿ ಮಾಡಿದ್ದ ಕೊಬ್ಬರಿ ಸಕ್ಕರೆಯನ್ನು ನನಗೂ ಸ್ವಲ್ಪ ಉಳಿಸಿದ್ದಳು. ಅದರ ಕಡೆ ನನ್ನ ಗಮನ ಹೋಗುವುದಕ್ಕಿಂತ ಮುಂಚೆ ಕಾಲು ಮಣೆಯ ಮೇಲಿನ ಪುಸ್ತಕಗಳನ್ನು ನೋಡಿದರೆ, ಅವೆಲ್ಲಾ ನಾನು ಲೈಬ್ರರಿಯಿಂದ ತಂದ ಬೆಲೆ ಬಾಳುವ ಪುಸ್ತಕಗಳು. ''ಇವನ್ನೇಕೆ ತೆಗೆದೆ? ಎಲ್ಲಾ ಅರಿಸಿನ ಕುಂಕುಮ ಆಗಿಹೋಯಿತಲ್ಲ! ನಿನ್ನ ಪುಸ್ತಕ ಇಡಬಾರದಾಗಿತ್ತೆ?'' ಎಂದು ಕೇಳಿದ್ದಕ್ಕೆ ಲಲಿತೆ ನನ್ನ ಪಾಲಿನ ಕೊಬ್ಬರಿ ಸಕ್ಕರೆಯನ್ನು ಸ್ವಲ್ಪ ಸ್ವಲ್ಪವಾಗಿ ಬಾಯಿಗೆ ಹಾಕಿಕೊಳ್ಳುತ್ತಾ ''ನನ್ನ ಪುಸ್ತಕ ಕೊಳೆಯಾಗಿ ಹೋಗುತ್ತೆ ಅಂತ ಅದನ್ನೇ ಇಟ್ಟೆ'' ಎಂದಳು. ಸತ್ಯಸಂಧೆ, ನನ್ನ ಲಲಿತೆ. ನನಗೆ ಏನು ಹೇಳುವುದಕ್ಕೂ ತೋರಲಿಲ್ಲ. ಅಷ್ಟು ಹೊತ್ತಿಗೆ ಕೊಬ್ಬರಿ ಸಕ್ಕರೆಯೆಲ್ಲಾ ಅದೃಶ್ಯವಾಗಿ ಲಲಿತೆಯ ತುಟಿಯ ಮೇಲೆ ಸ್ವಲ್ಪ ಮಾತ್ರ ಕಾಣುತ್ತಿತ್ತು. ನನಗೆ ಚರಪು ಸಿಕ್ಕಿದ್ದು ಅಷ್ಟೇ.

ಲಲಿತೆ ಇಂಗ್ಲಿಷ್ ಅಕ್ಷರಗಳನ್ನು ಇನ್ನೂ ಮರೆತಿರಲಿಲ್ಲವಾದ್ದರಿಂದ ನಾವು ನೇರವಾಗಿ ಪ್ರಥಮ ಪುಸ್ತಕವನ್ನೇ ಪ್ರಾರಂಭಿಸಿದೆವು. ಆ ದಿನದ ಪಾಠ ಬಹಳ ಚೆನ್ನಾಗಿ ನಡೆಯಿತೆಂದೇ

ಹೇಳಬೇಕು. ಪಾಠ ಹೇಳುವುದು ನನಗೆ ಹೊಸದು, ಕಲಿಯುವುದು ಅವಳಿಗೆ ಹೊಸದು; ಆದ್ದರಿಂದ ಇಬ್ಬರಿಗೂ ಹೊಸ ಅನುಭವ, ಹೊಸ ಹುರುಪು. ಆ ದಿನ ನಾಲ್ಕು ಪಾಠಗಳನ್ನು ಮುಗಿಸಿಬಿಟ್ಟೆವು. ಲಲಿತೆಗಂತೂ ಪಾಠಗಳನ್ನು ಸುಲಭವಾಗಿ ಅರ್ಥ ಮಾಡಿಕೊಂಡೆನೆಂದು ಮಿತಿಯಿಲ್ಲದ ಹೆಮ್ಮೆ. ''ಇನ್ನು ಎರಡು ಮೂರು ತಿಂಗಳಲ್ಲಿ ಸಣ್ಣ ಸಣ್ಣ ಕಥೆಗಳನ್ನು ಓದಿಸಬಹುದು. ಒಂದು ವರ್ಷವಾದಮೇಲೆ ಅವಳೊಡನೆ 'ರೋಮಿಯೊ ಜೂಲಿಯೆಟ್' ನಾಟಕವನ್ನೂ ಷೆಲ್ಲಿಯ ಗೀತೆಗಳನ್ನೂ ಓದಬಹುದು'' ಎಂದುಕೊಂಡು ನಾನೂ ಬಹಳ ಸಂತೋಷಪಟ್ಟೆನು.

ಮಾರನೆಯ ದಿನ ಗ್ರೆಟಾಗಾರ್ಬ್ಪೊ ಪಾತ್ರ ವಹಿಸಿದ್ದ ಪ್ರಸಿದ್ಧ ಚಿತ್ರವೊಂದರ ಕೊನೆಯ ಪ್ರದರ್ಶನ. ಸಂಜೆ ಬೇರೆ ಕೆಲಸವಿದ್ದದ್ದರಿಂದ ನನ್ನ ಸ್ನೇಹಿತರೆಲ್ಲರೂ ರಾತ್ರಿಯ ಪ್ರದರ್ಶನಕ್ಕೆ ಹೋಗಬೇಕೆಂದು ನಿಶ್ಚಯಿಸಿ ನಾನೂ ಬಂದೇ ತೀರಬೇಕೆಂದು ಬಲವಂತ ಮಾಡಿದರು. ಆದರೆ ಲಲಿತೆಯ ವಿದ್ಯಾಭ್ಯಾಸಕ್ಕೆ ದ್ವಿತೀಯ ವಿಘ್ನವಾಗದಂತೆ ಶಾಸ್ತ್ರಕ್ಕಾದರೂ ಸ್ವಲ್ಪ ಹೊತ್ತು ಪಾಠ ಮಾಡಲೇಬೇಕು. ''ನಿನ್ನೆಯ ಪಾಠಗಳನ್ನು ಸ್ವಲ್ಪವಾದರೂ ಮರೆತಿರುತ್ತಾಳೆ, ಒಂದೆರಡು ಪ್ರಶ್ನೆಗಳನ್ನು ಕೇಳಿ ಮತ್ತೆ ಅದನ್ನೇ ಓದ ಹೇಳಬಹುದು'' ಎಂದುಕೊಂಡು ನಾನು ಮನೆಗೆ ಬಂದೆ. ಹೊತ್ತಿಗೆ ಸರಿಯಾಗಿ ಲಲಿತೆ ಪುಸ್ತಕ ತೆಗೆದುಕೊಂಡು ಬಂದಳು. ಒಂದು ನೋಟು ಪುಸ್ತಕದಲ್ಲಿ ಹಿಂದಿನ ದಿನದ ಪಾಠವನ್ನೂ ಅದರ ಅರ್ಥವನ್ನೂ ಸ್ವಲ್ಪವೂ ತಪ್ಪಿಲ್ಲದೆ ಬರೆದಿದ್ದಳು. ಅದನ್ನು ಓದುತ್ತ ಓದುತ್ತ ಗ್ರೆಟಾಗಾರ್ಬ್ಪೋವಿನ ಚಿತ್ರ ದೂರ ದೂರಕ್ಕೆ ಸರಿಯಿತು. ಆದರೂ ನಿರಾಶನಾಗದೆ ಒಂದೆರಡು ಪ್ರಶ್ನೆಗಳನ್ನು ಕೇಳಿದರೆ ಅದಕ್ಕೂ ತೃಪ್ತಿಕರವಾದ ಉತ್ತರವೇ ಬಂತು. ನಾಯಿ ಬೆಕ್ಕಿನ ಕಡೆಗೆ ಓಡಿದ್ದನ್ನೂ ಹೇಂಟೆ ಬೆಕ್ಕನ್ನು ಎದುರುಗೊಂಡದ್ದನ್ನೂ ಲಲಿತೆ ಬಹು ಸೊಗಸಾಗಿ ಮಂದಟ್ಟು ಮಾಡಿಕೊಂಡಿದ್ದಳು. ನನಗೆ ಕೆಲವು ವೇಳೆ ಮಿಲ್ಟನ್, ಡಾಂಟೆ ಮೊದಲಾದವರ ಕಾವ್ಯಗಳಲ್ಲಿ ಸಹ ಆಸಕ್ತಿಯಿಲ್ಲದೆ ಹೋಗುತ್ತದೆ. ಲಲಿತೆಗೆ ಇಂಥ ಕೆಲಸಕ್ಕೆ ಬಾರದ ವಿಷಯಗಳಲ್ಲಿ ಅಭಿರುಚಿಯಿರುವುದನ್ನು ನೋಡಿ ನನಗೆ ಆಶ್ಚರ್ಯವೂ ಬೇಸರವೂ ಆದುವು. ಈ ಬಗೆಯ ಪ್ರವರ್ತನೆಯುಳ್ಳ ಮನಸ್ಸಿಗೆ ಘನ ಸಾಹಿತ್ಯವು ಎಲ್ಲಾದರೂ ರುಚಿಸುವುದುಂಟೆ, ಈ ವಿದ್ಯಾಭ್ಯಾಸದ ಪ್ರತಯ್ನವನ್ನು ಬಿಟ್ಟುಬಿಡುವುದೇ ಒಳ್ಳೆಯದಲ್ಲವೇ? ಎಂಬ ಪ್ರಶ್ನೆಗಳು ತಲೆದೋರಿದುವು.... ದೂರದೃಷ್ಟಿಯಿಂದ ನೋಡಿದರೆ ಆ ಆರಂಭಶೂರತ್ವ ಖಂಡಿತ ಒಳ್ಳೆಯದಲ್ಲ. ಹೊಸದರಲ್ಲಿ ಅಗಸ ಗೋಣಿ ಒಗೆದಂತೆ. ಉತ್ಸಾಹ ಹೀಗೆ ಮಿತಿಯಿಲ್ಲದೆ ಜ್ವಲಿಸಿದರೆ ಎಷ್ಟು ದಿನ ಬಾಳಿಕೆ ಬಂದೀತು!.... ಅಂತೂ ಅಂದು ಸಿನಿಮಾ ನೋಡುವುದಕ್ಕೆ ಲಲಿತೆ ಕಲ್ಲು ಹಾಕಿದಳು.

ಅಲ್ಲಿಂದಾಚೆಗೆ ಸಹ ನಾವು ಹಾಕಿಕೊಂಡಿದ್ದ ಕಾರ್ಯಕ್ರಮ ಸುಲಲಿತವಾಗಿ ನಡೆಯಲು ಸ್ವಲ್ಪ ಕಷ್ಟವೇ ಆಯಿತು. ಎಷ್ಟೋ ವೇಳೆ ಲಲಿತೆ ಮನೆಗೆಲಸಗಳನ್ನು ತೀರಿಸಿಕೊಂಡು ಬರುವ ವೇಳೆಗೆ ಮುಖದಲ್ಲಿ ಆಯಾಸ ತೇಲುತ್ತಿರುವುದು. ನನಗೆ ಉತ್ಸಾಹಭಂಗವಾಗದಿರಲೆಂದು ಅವಳು ಎಷ್ಟು ಪ್ರಯತ್ನಿಸಿದರೂ ಘಳಿಗೆಗೊಂದು ಸಲ ಆಕಳಿಕೆ ಬರುವುದು. ಆಗ ಪಾಠ ಹೇಳುವುದೆಂದರೆ ಕೇವಲ ಚಿತ್ರಹಿಂಸೆ. ಇನ್ನು ಕೆಲವು ದಿನ

ತನಗೆ ಓದುವುದು ಇಷ್ಟವಿಲ್ಲದಿದ್ದರೆ, ಲಲಿತೆ ನನ್ನ ಮುಖವನ್ನು ನೋಡಿ ಅದರಲ್ಲಿ ನಾನು ಅನುಭವಿಸಿದ ಆಯಾಸವನ್ನು ಕಂಡು ಹಿಡಿಯುವಳು. ಅವಳಿಗೆ ಬೇಕಿಲ್ಲದೆ ಮನಸ್ಸು ಸಿದ್ಧವಿಲ್ಲದೆ ಇರುವಾಗ ಬಲವಂತ ಮಾಘಸ್ನಾನವೇಕೆಂದು ನಾನು ದಯೆತೋರಿ ಪುಸ್ತಕವನ್ನು ಮುಚ್ಚಿಬಿಡುತ್ತಿದ್ದೆ. ಇದಕ್ಕಾಗಿ ಲಲಿತೆ ಕೃತಜ್ಞತೆ ತೋರಿಸುವುದಕ್ಕೆ ಬದಲಾಗಿ ಹೇಗೋ ತಂತ್ರಮಾಡಿ ಪಾಠ ನಿಂತಿದ್ದಕ್ಕೆ ಜವಾಬ್ದಾರಿಯನ್ನು ನನ್ನ ಮೇಲೆಯೇ ಒರಗಿಸುತ್ತಿದ್ದಳು.

ಹೀಗೆ ಎರಡು ಮೂರು ತಿಂಗಳು ಶಿಕ್ಷಣ ಜರುಗುವುದರಲ್ಲಿ ನಾನು ಲಲಿತೆಗೆ ವಿದ್ಯೆ ಕಲಿಸುವುದು ಸಾಧ್ಯವೆ ಎಂಬ ಸಂದೇಹ ಬರಲಾರಂಭಿಸಿತು. ಆ ಉಪಾಧ್ಯಾಯ - ಶಿಷ್ಯೆ ಸಂಬಂಧವೆ ಬಹು ವಿಚಿತ್ರವಾಗಿ ತೋರಿತು. ಪಾಠ ಹೇಳಿಕೊಡುವಾಗ ನಗುನಗುತ್ತ ಇರಬೇಕೆ ಅಥವಾ ಗಂಭೀರ ಮುದ್ರೆಯನ್ನು ತಾಳಬೇಕೆ? ನನಗೇನೋ ಪುಸ್ತಕವನ್ನು ತೆರೆದೊಡನೆ ಎಲ್ಲೂ ಇಲ್ಲದ ಗಾಂಭೀರ್ಯ ಬಂದುಬಿಡುತ್ತಿತ್ತು. ಆ ಮುಖ ಮುದ್ರೆಯನ್ನು ಮುರಿದು ಎಂದಿನಂತೆ ಸಲಿಗೆಯಾಗಿದ್ದರೆ ಶಾಲೆಯ ಆವರಣವೇ ಕೆಟ್ಟುಹೋಗಬಹುದು. ಇದಲ್ಲದೆ ಮೇಷ್ಟರ ಕೆಲಸಕ್ಕೆ ಅರ್ಹನೆಂಬ ನಂಬಿಕೆಯೇ ನನಗಿರಲಿಲ್ಲ. ಲಲಿತೆ ಅಪ್ರಬುದ್ಧಳು, ನಾನು ವಿದ್ಯಾವಂತ; ನಾನು ಹೇಳಿದ್ದೇ ಅವಳಿಗೆ ವೇದವಾಕ್ಯ. ಆದರೂ ಅವಳೆದುರಿಗೆ ಕುಳಿತಾಗ ನನಗೆ ಪರೀಕ್ಷಕನ ಮುಂದೆ ನಿಂತ ಹುಡುಗನ ಅನುಭವವಾಗುತ್ತಿತ್ತು. ಅದಕ್ಕೆ ತಕ್ಕ ಹಾಗೆ ಲಲಿತೆಯ ಪ್ರಶ್ನೆಗಳು ಕೆಲವು ವೇಳೆ ಬಹಳ ತೊಂದರೆ ಕೊಡುತ್ತಿದ್ದವು. ನಾನು ಬುದ್ಧಿವಂತನೇ ಹೌದಾದರೆ ಲಲಿತೆಯ ಎದುರಿಗೆ ನನ್ನ ಬುದ್ಧಿ ಶಕ್ತಿಯನ್ನು ಪ್ರದರ್ಶಿಸುವುದು ಏಕೋ ಅಸಾಧ್ಯವಾಗುತ್ತಿತ್ತು. ಅವಳು ಈಗ ನನಗೆ ಪರಕೀಯಳಂತೆ ತೋರುತ್ತಿದ್ದಳು. ನಾವು ಯಾವಾಗಲೂ ದೂರ ದೂರ ಕುಳಿತು ಮಾತಾಡಿದ್ದಿಲ್ಲ. ಈಗ ನಮ್ಮಿಬ್ಬರ ನಡುವೆ ಒಂದು ಅನಿಷ್ಟ ಮೇಜು ನಿಂತಿತ್ತು. ಅದು ಬೇಡವೆಂದರೆ ಲಲಿತೆ ಕೇಳಳು. ಎಂದಿನಂತೆ ಹಸನ್ಮುಖಿಯಾಗಿರದೆ, ಮುಖದಲ್ಲಿ ಯಾವ ಭಾವವನ್ನೂ ಪ್ರಕಟಿಸದೆ ಆ ಮೇಜಿನ ಹಿಂದೆ ಪ್ರತಿಮೆಯಂತೆ ಕುಳಿತುಬಿಡುವಳು. ಮೇಷ್ಟರು ತಾನೆ ಮುಖವನ್ನು ನೋಡದೆ ಗೋಡೆಯನ್ನು ನೋಡುತ್ತ ಮಾತಾಡುವುದಕ್ಕಾಗುತ್ತದೆಯೆ? ಲಲಿತೆ ತನ್ನ ಮುಖದ ಚೆಲುವನ್ನು ನಾನು ಕದ್ದುಕೊಂಡು ಹೋಗುವೆನೆಂದು ಭಾವಿಸಿದಳೋ ಏನೋ, ನಾನು ಆ ಕಡೆ ನೋಡಿದ ಕ್ಷಣವೇ ಮುಖವನ್ನು ತಗ್ಗಿಸಿಬಿಡುವಳು. ಪುಸ್ತಕದ ಮರೆಯಲ್ಲಿ ಅವಳೇನು ನಗುತ್ತಿದ್ದಳೋ ಅಥವಾ ಹಿಂದಿನ ಮೇಷ್ಟರ ವಕ್ರ ಚಿತ್ರವನ್ನು ಬರೆದಂತೆ ನನ್ನ ಚಿತ್ರವನ್ನು ಬರೆಯುತ್ತಿದ್ದಳೋ ಎಂಬ ಸಂಶಯ ನನ್ನನ್ನು ಈಗಲೂ ಬಾಧಿಸುತ್ತಲೇ ಇದೆ. ಇಂಥ ಸಂದರ್ಭಗಳಲ್ಲಿ ಶಾಲೆಯ ಉಪಾಧ್ಯಾಯರು ಹೇಗೆ ನಡೆದುಕೊಳ್ಳುತ್ತಾರೋ! ನನ್ನ ಉಪಾಧ್ಯಾಯರ ನಡವಳಿಕೆಯನ್ನು ನೆನಪಿಗೆ ತಂದುಕೊಂಡದ್ದರಿಂದ ಏನೂ ಪ್ರಯೋಜನವಿಲ್ಲ. ಹೆಣ್ಣು ಹುಡುಗಿಯರ ಶಾಲೆಯ ಮೇಷ್ಟರು ತನ್ನ ಹೆಂಡತಿ ಕ್ಲಾಸಿನಲ್ಲಿ ಕುಳಿತಿದ್ದರೆ ಹೇಗೆ ಪಾಠ ಹೇಳುತ್ತಾರೋ! ಅಂಥ ಪ್ರಸಂಗ ಯಾರಿಗಾದರೂ ಒದಗಿದೆಯೋ ಇಲ್ಲವೋ ತಿಳಿಯದು. ಒಟ್ಟಿನಲ್ಲಿ ಮನಸ್ಸಿನ ಲವಲವಿಕೆ ಅಷ್ಟೇನೂ ಹೆಚ್ಚಾಗಿಲಾರದೆಂದೂ, ಬುದ್ಧಿ ಚುರುಕಾಗಿ ಕೆಲಸ

ಮಾಡಲಾರದೆಂದೂ ತೋರುತ್ತದೆ. ಮನೆಯಲ್ಲಿ ಹೆಂಡತಿಯ ಎದುರಿಗೆ ಕುಳಿತು ಪಾಠ ಹೇಳುವುದಂತೂ ಮತ್ತೂ ಕಷ್ಟ.

ಅಷ್ಟೇ ಅಲ್ಲದೆ ಪಾಠ ಹೇಳಿಕೊಡುವುದು ಮುಗಿದ ಮೇಲೆ ಸಹ ನಾವು ಎಂದಿನಂತೆ ಇರುವುದು ಅಸಾಧ್ಯವಾಗುತ್ತಿತ್ತು. ಪುಸ್ತಕವನ್ನು ಮುಚ್ಚಿದ ಕೂಡಲೆ ಲಲಿತೆ ಯಾರೋ ಅಪರಿಚಿತರನ್ನು ಕಂಡು ಒಳಗೆ ಹೋಗುವವಳಂತೆ ಎದ್ದು ಹೊರಟುಹೋಗುತ್ತಿದ್ದಳು. ನನ್ನ ಪೂರ್ವ ಪರಿಚಿತ ಲಲಿತೆ ಮನೆಯಲ್ಲಿ ಕಾಣುತ್ತಲೇ ಇರಲಿಲ್ಲ; ಅವಳನ್ನು ನಾನು ಸಲಿಗೆಯಾಗಿ ಮಾತಾಡಿಸುವುದೇ ಕಷ್ಟವಾಗುತ್ತಿತ್ತು. ಈ ಬಗೆಯ ಜೀವನ ಕೆಲವು ತಿಂಗಳು ನಡೆಯುವ ವೇಳೆಗೆ ಲಲಿತೆಗೆ ಬೇಸರವಾದದ್ದಲ್ಲದೆ ತನ್ನಲ್ಲಿ ನನಗೆ ಪ್ರೀತಿ ಕಡಿಮೆಯಾಯಿತೆಂಬ ಭಾವನೆ ಸಹ ಬಂದಂತೆ ತೋರುತ್ತದೆ. ಈ ಉಪಾಧ್ಯಾಯ - ಶಿಷ್ಯೆ ಸಂಬಂಧ ತೊಲಗಿ ಹೋಗಲೆಂಬ ಇಚ್ಛೆ ನಮ್ಮಿಬ್ಬರಿಗೂ ಏಕಕಾಲದಲ್ಲೇ ಬಂದಿರಬೇಕು. ಆದರೂ ಅದನ್ನು ಬಾಯಿಬಿಟ್ಟು ಹೇಳುವುದಕ್ಕೆ ಇಬ್ಬರೂ ಹಿಂಜರಿಯುತ್ತಿದ್ದೆವು. ನಾನೇನಾದರೂ ಮೊದಲು ಹೇಳಿದ್ದರೆ ಲಲಿತೆ ನನ್ನ ಪ್ರಾಣ ತೆಗೆದುಬಿಡುತ್ತಿದ್ದಳು.

ಈ ಮಧ್ಯೆ ನಮ್ಮ ಮಾವನವರು ''ನಮ್ಮ ಮನೆಯಲ್ಲಿ ಕೆಲವು ದಿನ ಇರಲಿ'' ಎಂದು ಹೇಳಿ ಅವಳನ್ನು ಕರೆದುಕೊಂಡು ಹೋದರು. ನನ್ನ ಮನಸ್ಸಿಗೆ ಸ್ವಲ್ಪ ಸಂತೋಷವಾಯಿತೆಂದೇ ಹೇಳಬೇಕು. ಒಂಟಿಯಾಗಿ ಜೀವಿಸುವುದೇನೋ ಕಷ್ಟವಾದರೂ ಆಗ ಇದ್ದ ಸ್ಥಿತಿಯಲ್ಲಿ ಲಲಿತೆ ಮನೆಯಲ್ಲಿ ಇದ್ದರೂ ಇಲ್ಲದಂತೆಯೇ ಆಗಿತ್ತು. ಲಲಿತೆಗೂ ಹಾಗೆಯೇ ತೋರಿರಬೇಕು. ಆದರೂ ಅವಳು ಹೊರಡುವಾಗ ''ಪಾಠ ಹೇಳುವುದು ತಪ್ಪಿತು, ನಿಮಗೆ ಬಹಳ ಸಂತೋಷವೇನೋ'' ಎಂದು ನನ್ನ ಮೇಲೆ ಮಾತು ಹಾಕದೆ ಬಿಡಲಿಲ್ಲ. ನಾನೂ ಅವಳಿಗೆ ''ಹೇಳಿಕೊಟ್ಟದ್ದೆಲ್ಲಾ ಮರೆತುಕೊಂಡು ಬಾ. ನಿನ್ನ ಸೋಮಾರಿತನಕ್ಕೆ ಒಳ್ಳೆಯ ನೆಪ ಸಿಕ್ಕಿದ ಹಾಗಾಯಿತು'' ಎಂದು ಹೇಳಿ ಕಳುಹಿಸಿದೆ.

ಲಲಿತೆ ಹೋದಮೇಲೆ ಎರಡು ಮೂರು ದಿನಗಳು ಹೇಗೋ ಕಳೆದುಹೋದುವು. ನನ್ನ ಮೊದಲನೆಯ ಕಾಗದದಲ್ಲಿ ನಾನು ಇಂಗ್ಲಿಷ್ ಪಾಠದ ಮಾತೇ ಎತ್ತಿರಲಿಲ್ಲ. ಅದು ಆಗಲೇ ಮರೆತು ಹೋಗುವುದರಲ್ಲಿತ್ತು. ನಾನು ಬಹಳ ಉತ್ಸಾಹದಿಂದ ಪ್ರೇಮ ಪತ್ರವನ್ನು ಬರೆದು ಎರಡು ದಿನ ಉತ್ತರವನ್ನು ನೀರಿಕ್ಷಿಸಿ ಅದು ಬಂದ ಮೇಲೆ ಒಡೆದು ನೋಡಿದರೆ, ಅದರಲ್ಲಿ ನಮ್ಮ ನಮ್ಮ ಮಾತುಗಳೇನೂ ಇರದೆ ಎಲ್ಲಾ ಇಂಗ್ಲಿಷ್ ಭಾಷೆಯ ವಿಷಯವೇ ಆಗಿತ್ತು. ಕೊನೆಯಲ್ಲಿ ನಾನು ಸಾಧಾರಣವಾಗಿ ಕಾಗದವನ್ನು ಕೊನೆಗಾಣಿಸುವ ರೀತಿಯನ್ನು ಬಿಟ್ಟು ''ನಿಮ್ಮ ವಿಧೇಯಳಾದ ಶಿಷ್ಯೆ'' ಎಂದು ಬರೆದುಕೊಂಡಿದ್ದಳು. ಅವಳು ಊರು ಬಿಟ್ಟು ಹೋಗಿ ಆಗಲೇ ನಾಲ್ಕೈದು ದಿನಗಳಾಗಿದ್ದುವು. ನನಗೆ ಆಗ ಇಂಗ್ಲಿಷ್ ಭಾಷಾಂತರವೂ ವಿಧೇಯಳಾದ ಶಿಷ್ಯೆಯೂ ಬೇಕಾಗಿರಲಿಲ್ಲ. ಇಂಗ್ಲಿಷ್ ಭಾಷೆ ಹಾಳಾಗಲೆಂದು ಕಾಗದವನ್ನು ಹರಿದು ಬಿಸುಟೆನು. ಆದರೂ ಕೋಪವನ್ನು ಹೇಗೋ ನುಂಗಿ ಜೀರ್ಣಿಸಿಕೊಂಡು ಅವಳು ಕೇಳಿದ ಪದಗಳ ಅರ್ಥವನ್ನೆಲ್ಲಾ ಬರೆದು ಕಳುಹಿಸಬೇಕಾಯಿತು. ಹಾಗೆ ಮಾಡದಿದ್ದರೆ ''ನಿಮ್ಮಿಂದ ನಾನು ವಿದ್ಯೆ ಕಲಿಯುವುದು ತಪ್ಪಿತು'' ಎಂದು ಸಾಯುವವರೆಗೂ ಕಾಡುತ್ತಾಳೆ. ಇದನ್ನೆಲ್ಲಾ ಯೋಚಿಸಿಕೊಂಡೇ ಅವಳು

ಹಾಗೆ ಕಾಗದ ಬರೆದಿರಬೇಕು. ಈ ಬಗೆಯ ಟಪಾಲು ಬೋಧನೆ ಕೆಲದು ದಿನ ನಡೆಯಿತು. ಕೊನೆಗೆ ನನಗೆ ಬಹಳ ಅಸಹ್ಯವಾಗಿ ಒಂದು ಉಪಾಯವನ್ನು ಹುಡುಕಿದೆನು. ನಮ್ಮ ಮಾವನವರಿಗೆ ಒಂದು ಕಾಗದ ಬರೆದು ಅದರ ಜೊತೆಯಲ್ಲಿ ಲಲಿತೆಯ ಭಾಷಾಂತರ ಪಾಟವನ್ನಿಟ್ಟು ''ಇದನ್ನು ಚಿ|| ಸೌ|| ಲಲಿತೆಗೆ ತಲಪಿಸುವುದು'' ಎಂದು ಬರೆದು ಕಳುಹಿಸಿದೆ. ಅವರು ಅದನ್ನು ನೋಡಿದ ಮೇಲೆ ಲಲಿತೆಗೆ ಚೆನ್ನಾಗಿ ಬೈಗುಳಾಯಿತಂತೆ. ''ನಾನು ಎದುರಿಗೆ ಇಲ್ಲವೆ, ಅರ್ಥ ಕೇಳಿದ್ದರೆ ಹೇಳುತ್ತಾ ಇರಲಿಲ್ಲವೆ! ಅವರಿಗೆ ತೊಂದರೆ ಕೊಟ್ಟು ಅಲ್ಲಿಂದ ಕಾಗದದಲ್ಲಿ ಬರೆದು ತರಿಸಿಕೊಳ್ಳಬೇಕೆ!'' ಎಂದು ತುಂಬ ಆಕ್ಷೇಪಿಸಿದರಂತೆ. ಅದಾದಮೇಲೆ ಏಳೆಂದು ದಿನ ಲಲಿತೆ ಕಾಗದವನ್ನೇ ಬರೆಯಲಿಲ್ಲ. ನಾನು ಮಾತ್ರ ಪಾಠಗಳನ್ನು ಬರೆದು ಕಳುಹಿಸಬೇಕೆಂದೂ ಸೋಮಾರಿಯಾಗಿರಕೂಡದೆಂದೂ ಎಚ್ಚರಿಸಿ ತಪ್ಪದೆ ಪ್ರತಿದಿನವೂ ಕಾಗದಗಳನ್ನು ಬರೆಯುತ್ತಿದ್ದೆ. ಒಂದೆರಡು ವಾರಗಳಾದ ನಂತರ ಒಂದು ಕಾಗದಕ್ಕೂ ಉತ್ತರ ಬರದೆ ಇದ್ದದ್ದರಿಂದ ಬಹಳ ಅಸಮಾಧಾನಪಟ್ಟುಕೊಂಡು ಒಂದು ಆಕ್ಷೇಪಣೆಯ ಪತ್ರವನ್ನು ಬರೆದ ಮೇಲೆ ಉತ್ತರ ಬಂತು - ನನ್ನ ವಿಧೇಯಳಾದ ಶಿಷ್ಯಳಿಂದಲ್ಲ, ನನ್ನ ಪ್ರಿಯೆ ಲಲಿತೆಯಿಂದ. ಕಾಗದದಲ್ಲಿ ಇಂಗ್ಲಿಷ್ ಪಾಠದ ಮಾತೇ ಎತ್ತಿರಲಿಲ್ಲ. ಕೊನೆಯಲ್ಲಿ ಮಾತ್ರ ''ನಿಮ್ಮ ತಂತ್ರ ನನಗೆ ತಿಳಿಯದೆ ಇಲ್ಲ'' ಎಂದು ಒಂದು ವಾಕ್ಯವನ್ನು ಸೇರಿಸಿದ್ದಳು. ಅವಳು ತಂದೆಯ ಮನೆಯಿಂದ ಬಂದಮೇಲೂ ನಾನಾಗಲಿ ಅವಳಾಗಲಿ ಇಂಗ್ಲಿಷ್ ಪಾಠದ ಮಾತೇ ಆಡಲಿಲ್ಲ. ಪಾಠ ತಪ್ಪಿದ್ದರಿಂದ ನಮ್ಮಿಬ್ಬರನ್ನೂ ಮುಸುಕಿದ್ದ ಮಂಜು ಹರಿದು ಮತ್ತೆ ಒಬ್ಬರ ಮುಖವನ್ನೊಬ್ಬರು ನೋಡುವ ಹಾಗಾಯಿತು. ಕೆಲವು ದಿನಗಳಾದ ಮೇಲೆ ನಾನು ಮತ್ತೆ ಮೇಷ್ಟರೊಬ್ಬರನ್ನು ಗೊತ್ತುಮಾಡಬೇಕೆಂದಾಗ ಲಲಿತೆ ಯಾವ ಆಕ್ಷೇಪಣೆಯನ್ನೂ ಮಾಡದೆ ಸುಮ್ಮನಿದ್ದಳು.

ಈಗ ಲಲಿತೆಯೂ ನಾನೂ ಒಟ್ಟಿಗೆ 'ರೋಮಿಯ ಜೂಲಿಯೆಟ್' ನಾಟಕವನ್ನೂ, ಷೆಲ್ಲಿಯ ಗೀತೆಗಳನ್ನೂ ಓದುತ್ತೇವೆ. ಆದರೆ ಅದು ನನ್ನ ಶಿಕ್ಷಣದ ಮಹಿಮೆಯಲ್ಲ.

ಅನುಬಂಧ

ಮದುವೆ ಹೆಂಡತಿಯೊಡನೆ
ಜನುಮ ಜನುಮದ ಬಂಧ
ಆಫೀಸಿನವಳ ಜೊತೆ
ವೃತ್ತಿ ಸಂಬಂಧ
ಆದರಚ್ಚರಿಯಿಲ್ಲ
ಬಾಳ ಸಂಪುಟದಲ್ಲಿ
ಇವಳೊಂದು ಅನುಬಂಧ

– ಮ.ಗು. ಬಿರಾದಾರ

ರಾ.ಶಿ. ಅವರ ಜೊತೆ

– ಓಂ ಪ್ರಕಾಶ್

ನಾನು, ಕಿಟ್ಟಿ (ಡಾ|| ಕೃಷ್ಣಮೂರ್ತಿ) ಈಗ ಕ್ಲಿನಿಕ್ ನಡೆಸ್ತಾ ಇದೀವಿ. ಕಿಟ್ಟಿ ಎಂ.ಬಿ.ಬಿ.ಎಸ್. ಮಾಡಿದ ಮೇಲೆ ಶಿವರಾಂ ಹತ್ತಿರ ಬಂದು, ಬೆಳಗ್ಗೆ ವಿಕ್ಟೋರಿಯಾ ಆಸ್ಪತ್ರೇಲಿ ಕೆಲಸ ಇರುತ್ತೆ, ಸಂಜೆ ಕ್ಲಿನಿಕ್‌ಗೆ ಬರ್ತೀನಿ ಅಂದರು. ಮಾರನೇ ದಿನ ಕಿಟ್ಟಿ, ಪಾಪ, ಶುಭ್ರವಾದ ಬಟ್ಟೆ ಧರಿಸಿ, ಕೆಂಪು ಟೈ ಕಟ್ಟಿಕೊಂಡು ಕ್ಲಿನಿಕ್‌ಗೆ ಬಂದರು. ರಾ.ಶಿ. ''ಇದೇನೋ ನಿನ್ ಅವತಾರ! ಮಕ್ಕಳು ಮೊದಲೇ ಹೆದರಿರುತ್ವೆ, ನಿನ್ ಟೈ ನೋಡಿ ಇನ್ನೂ ಗಾಬರಿ ಆಗುತ್ತೆ! ತೆಗೆಯೋ ಟೈನ!'' ಅಂದರು. ಕಿಟ್ಟಿ ಈಗಲೂ ಇದನ್ನ ನೆನೆಸಿಕೊಂಡು ನಗ್ತಾರೆ.

★★★

ಶಿವರಾಂ ಹತ್ರ ಒಬ್ಬ ಬ್ಯಾಂಕ್ ಕ್ಲಾರ್ಕ್ ಬರ್ತಾ ಇದ್ದ. ಸಣ್ಣಗೆ ಇದ್ದ, ಆದರೆ ಬಹಳ ಜಾಣ. ಸುಸ್ತು ಅಂತ ಬಂದ. ಅವನ ಬಿ.ಪಿ. ನೋಡಿದರೆ 90/60! ನಿನ್ನ ಬಿ.ಪಿ. ಕಡಿಮೆ ಇದೆ! ಆದರೆ ಅದರಿಂದ ನಿನಗೆ ಯಾವ ತೊಂದರೇನೂ ಇಲ್ಲ, ಅಂತ ಧೈರ್ಯ ಹೇಳಿದರು. ಕೆಲವರಿಗೆ ಬಿ.ಪಿ. ಇರೋದೇ ಕಮ್ಮಿ ಅಂತ ಅವನಿಗೆ ಅರ್ಥವಾಯಿತು.

ಕೆಲವು ತಿಂಗಳಾದ ಮೇಲೆ, ಆ ಕ್ಲಾರ್ಕ್ ಬ್ಯಾಂಕಿನಿಂದ ಎರಡು ಲಕ್ಷ ರೂಪಾಯಿ ಗುಳುಂ ಮಾಡಿ ಸಿಂಗಪೂರ್‌ಗೋ (ಎಲ್ಲಿಗೋ) ಹೊರಟು ಹೋದ ಯಾರಿಗೂ ಅವನ ಪತ್ತೆ ಸಿಗಲೇ ಇಲ್ಲ! ಒಂದು ದಿನ ಶಿವರಾಂ ಅವರನ್ನೇ ಕೇಳಿದೆ. ಏನು ನಿಂ ಎಕ್ಸ್-ಪೇಶೆಂಟ್ ಎಲ್ಲಿದಾನೆ ಅಂತ. ನಗುತ್ತ ಹೇಳಿದರು, 'ಅಲ್ಲ ಕಣೋ, 90/60 ಬಿ.ಪಿ. ಇದ್ದೇ ಎರಡು ಲಕ್ಷ ತಿಂದ! ಇನ್ನು ಅವನಿಗೆ ನಾರ್ಮಲ್ ಬಿ.ಪಿ. ಇದ್ದಿದ್ರೆ!?''


★★★

ಮರಳಿ ಕಿಟ್ಟಿ! ಮೊದಲನೇ ದಿನವೆ, ರಾ.ಶಿ. ಕಿಟ್ಟೀನ ಕೇಳಿದರು. ಯಾರಾದರೂ ಕ್ಲಿನಿಕ್‌ಗೆ ಬಂದರೆ, ಮೊದಲು ಏನಂತೀಯಾ? ಕಿಟ್ಟಿ, History ತಗೋತೀನಿ' ಅಂದರು. ಇದೇನೋ History, ಜಾಗ್ರಫಿ! ಏನು ಕೇಳ್ತೀಯ? ಕಿಟ್ಟಿ ತಬ್ಬಿಬ್ಬಾದರು. ರಾ.ಶಿ. ನಸುನಗುತ್ತ ಹೇಳಿದರು ಅಲ್ಲ ಕಣೋ, ನಂ ಕ್ಲಿನಿಕ್ ಪಕ್ಕದಲ್ಲಿ ಮೆಜೆಸ್ಟಿಕ್ ಸಿನಿಮಾ ಇದೆ! ಪಾಪ ಈ ಪ್ರಾಣಿ ಸಿನಿಮಾ ಟಿಕೆಟ್ ಕ್ಯೂಗೂ ನಮ್ಮ ಕ್ಲಿನಿಕ್ ಕ್ಯೂಗೂ ಮಧ್ಯ ಸಿಕ್ಕಿ, ದಾರಿ ತಪ್ಪಿ ಇಲ್ಲಿ ಬಂದಿದ್ರೆ? ಅದನ್ನ ಮೊದಲು ಖಚಿತ ಮಾಡ್ಕೋಬೇಕು! ಇಲ್ದಿದ್ರೆ ಅವನಿಗೂ ಸಿನಿಮಾ ತಪ್ಪುತ್ತೆ! ನಿನಗೂ ಬೈಗಳು!''

★★★

ರಾ.ಶಿ. ಹತ್ರ ಒಬ್ಬ ಬಂದ. ಮಡೀಕೋಲಿನ ತರಹ ಇದ್ದ. ಪದೇ ಪದೇ ಹೊಟ್ಟೇಲಿ ಸಂಕಟ ಆಗುತ್ತೆ! ಉರಿ ಆದ ಹಾಗೆ ಆಗುತ್ತೆ! ಸುಸ್ತು ಯಾವಾಗಲೂ ಅಂದ. ರಾ.ಶಿ. ಅವನ್ನ ಒಳಗಡೆ ಇದ್ದ ರೂಮಿಗೆ ಕರೆದು, ಐದು ರೂಪಾಯಿ ಕೊಟ್ಟು, ಹೊಟ್ಟೆ ತುಂಬ ಊಟಮಾಡಿ ಬಾ, ಆಮೇಲೆ ತಿರುಗಿ ಪರೀಕ್ಷೆ ಮಾಡ್ತೀನಿ ಅಂದರು. ಅವನು ಪಾಪ ವಾಪಸ್ ಬಂದಾಗ ವಿಷಯ ತಿಳೀತು. ಅವನು ಎರಡು ದಿನದಿಂದ ಊಟ ಮಾಡಿರಲಿಲ್ಲ. ಆ ಸಂಜೆ ರಾ.ಶಿ. ಖಿನ್ನರಾಗಿ ನಸಗೆಂದರು. ''Hunger was his Disease! ನಂ ಹಾಳು ದೇಶದಲ್ಲಿ ಮಾತ್ರ ಈ ಕಾಯಿಲೆ ಸಾಮಾನ್ಯ!''

★★★



ಇಷ್ಟಕ್ಕೆಲ್ಲಾ ಮಾನ ಹೋಗುತ್ತೈ...?

- ಶಂ.ಭಂ. ಕೃಷ್ಣಮೂರ್ತಿ

ಮರಕುಂಟಿಯ ಆರಕ್ಷಕ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಸಾಲಿಮನಿಯವರು ತಲೆಯ ಮೇಲೆ ಕೈ ಹೊತ್ತು ಕೂತಿದ್ದರು. ರೈಟರ್ ಅಕ್ಕಿಹಾಳುಮಠ ಬೂಟು ಕಾಲನ್ನು ಜೋಡಿಸಿ ಸಶಬ್ದವಾಗಿ ಸಲ್ಯೂಟ್ ಹೊಡೆದಿದ್ದೂ ಚಿಂತೆಯಲ್ಲಿ ಮುಳುಗಿದ್ದ ಅವರ ಗಮನಕ್ಕೇ ಬಂದಿರಲಿಲ್ಲ.

''ಏನ ಚಿಂತ ಮಾಡ್ಲಿಕ್ಕೆ ಹತ್ತೀರಿ ಸಾಹೇಬ್ರೆ'' ಎಂದು ಅಕ್ಕಿಹಾಳುಮಠ ತನ್ನ ಕಂಚಿನ ಕಂಠದಲ್ಲಿ ಕೂಗಿದಾಗಲೇ ಸಾಲಿಮನಿಯವರು ಬೆಚ್ಚಿ ಬಿದ್ದು ಮುಚ್ಚಿದ್ದ ಕಣ್ಣನ್ನು ಮೆಲ್ಲನೆ ತೆರೆದು ನಿರಾಸಕ್ತಿಯಿಂದಲೇ ಅವನನ್ನು ನೋಡಿದರು.

ಯಾಮಿಕ ಖಾತೆಗೆ ಹೇಳಿ ಮಾಡಿಸಿದಂತಿದ್ದರು ಸಾಲಿಮನಿ. ಕಲ್ಲಿಮೀಸೆ, ಕೆಂಡಗಣ್ಣು, ದಡೂತಿ ದೇಹ, ಉಬ್ಬಿದ ಉದರ, ಪೋಲೀಸರಿಗಿರಬೇಕಾದ ಶಾರೀರಿಕ ಸಂಪತ್ತೆಲ್ಲಾ ಸಾಲಿಮನಿಯವರಿಗಿತ್ತು. ಆದರೆ ತಲೆ ಮಾತ್ರ ಸಣ್ಣದಾಗಿದ್ದುದರಿಂದಲೋ ಏನೋ ಅವರು ತಮ್ಮ ಮಿದುಳಿಗೆ ಯಾವ ರೀತಿಯಲ್ಲೂ ತ್ರಾಸ ಕೊಡುತ್ತಿರಲಿಲ್ಲ. ಠಾಣೆಯ ಅರ್ಧ ಕೆಲಸವನ್ನೆಲ್ಲಾ ಅಕ್ಕಿಹಾಳುಮಠನೇ ನೋಡಿಕೊಳ್ಳುತ್ತಿದ್ದ. ಉಳಿದರ್ಧ ಕೆಲಸವನ್ನು ಪೇದೆಗಳಾದ ಮೂಲಿಮನಿ, ಮೆಣಸಿನಕಾಯಿ, ಗಫೂರಸಾಬ ಇತ್ಯಾದಿಗಳು ನೋಡಿಕೊಳ್ಳುತ್ತಿದ್ದುದರಿಂದ ಎಸ್.ಐ. ಸಾಹೇಬರಿಗೆ ಕಛೇರಿಯ ಬಗ್ಗೆ ಯಾವ ಚಿಂತೆಯೂ ಇರುತ್ತಿರಲಿಲ್ಲ. ಆಕ್ಕಿ ಹಾಳು ಮಠ ಠಾಣೆಯ ಎಲ್ಲಾ ದಸ್ತಾವೇಜುಗಳ ಕಾರುಬಾರು ನೋಡಿಕೊಳ್ಳುತ್ತಿದ್ದ ಇನ್ನು ಕೇಡಿಗಳನ್ನು ಹಿಡಿಯುವುದು, ಲಾಕಪ್ಗೆ ದೂಡಿ ಆರೋಪಿಗಳನ್ನು ಬೂಟಿನಿಂದ ಒದ್ದು, ಬೆಲ್ಟಿನಿಂದ ಬಡಿದು ಶರಣಾಗತಿಯ ಹಂತಕ್ಕೆ ಅವರನ್ನು ತರುತ್ತಿದ್ದ ಕೆಲಸವನ್ನು ಮೆಣಸಿನಕಾಯಿ ಹಾಗೂ ಗಫೂರ್ ಸಾಬ ಶಾಸ್ತ್ರೋಕ್ತವಾಗಿ ಮಾಡುತ್ತಿದ್ದರು. ನರಿಯ ಬುದ್ಧಿಯನ್ನು ಅರೆದು ಮೆತ್ತಿಕೊಂಡಿದ್ದ ಮೂಲಿಮನಿ ಹಫ್ತಾಕಲೆಕ್ಷನ್ನು ಮತ್ತು ಅದರ ವಿತರಣೆಯನ್ನು ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಿದ್ದ. ಹೀಗಾಗಿ ಸಾಲಿಮನಿಯವರು ಶಾರೀರಿಕವಾಗಿ, ಮಾನಸಿಕವಾಗಿ ಯಾವ ತ್ರಾಸವೂ ಇಲ್ಲದೆ, ಮೂಲ ದೇವರಂತೆ ಪೀಠದ ಮೇಲೆ ಕೂತು ಕಾಲಯಾಪನೆ ಮಾಡಿಕೊಂಡಿದ್ದರು. ಪರಿಸ್ಥಿತಿ ಹೀಗಿರುವಾಗ ಸಾಹೇಬರು ಚಿಂತಿತರಾಗಿ ಕೂತಿದ್ದುದು ಅಕ್ಕಿಹಾಳುಮಠನಿಗೆ ಅಚ್ಚರಿಯಾಗಿಯೇ ಕಂಡಿತು. ''ವರ್ಗಾವಣೆ ಮಾಡಿಸಿಕೊಳ್ಳಲಿಕ್ಕೆ ಹತ್ತೀನಪ್ಪ. ಅದರದೇ ಚಿಂತಿ''.... ಎಂದು ಎಸ್.ಐ. ಸಾಹೇಬರು ತಾವು ತಲೆಯ ಮೇಲೆ ಕೈ ಹೊತ್ತು ಕೂತಿದ್ದ ಕಾರಣ ತಿಳಿಸಿದಾಗ, ಅವನಿಗೆ ಠಾಣೆಯ ಒಳಗೆ ಬಾಂಬೊಂದು ಸ್ಫೋಟವಾದಂತೆ ಭಾಸವಾಯಿತು. ಮಿಕ್ಕ ಪೇದೆಗಳಿಗೂ ದಿಗ್ಭ್ರಮೆಯಾಯಿತು.

ಇಟ್ಟಿದ್ದಕ್ಕೆ ರುಜುಹಾಕಿ, ಕೊಟ್ಟಿದ್ದನ್ನು ತೆಗೆದುಕೊಂಡು ನಿರ್ಲಿಪ್ತರಂತೆ ಕಾಲ ಹಾಕುತ್ತಿದ್ದ ಠಾಣೆಯ ಧಣಿ ಸಾಲಮನಿಯವರು ವರ್ಗವಾಗಿ ಹೋದರೆ ತಮ್ಮಗಳ ಗತಿಯೇನೆಂಬ

ಚಿಂತೆ ಠಾಣೆಯ ಸಿಬ್ಬಂದಿ ವರ್ಗವನ್ನು ಕಾಡಿತು. ಇವರ ಬದಲು ಇನ್ಯಾವನಾದ್ರೂ ಅಡ್ಡ ಕಸಬಿ ಸಾಹೇಬನಾಗಿ ಬಂದರೆ ಅನೂಚಾನವಾಗಿ ಅಭಾದಿತವಾಗಿ ನಡೆದು ಬರುತ್ತಿರುವ ಠಾಣೆಯ ಸಂಪ್ರದಾಯಕ್ಕೆ ಚ್ಯುತಿ ಬರುವ ಸಾಧ್ಯತೆಯನ್ನು ಊಹಿಸಿಕೊಂಡೆ ಅವರುಗಳು ಚಿಂತಿತರಾದರು.

''ನಾ ವರ್ಗವಾಗಿ ಹೋದರೆ ಏನಪಾ ಆತು. ಇನ್ನೊಬ್ಬ ಎಸ್.ಐ. ಠಾಣೆಗೆ ಬಂದಾನು'' ಎಂದು ಸಾಲಿಮನಿಯವರು ನಿಸೂರಾಗಿ ಹೇಳಿದರು.

''ಎಸ್.ಐ. ಸಾಯೇಬ್ರು ಸಾವಿರ ಮಂದಿ ಬಂದಾರು, ಹೋದಾರು. ಆದ್ರೆ ಸಾಲಿಮನಿ ಸಾಯೇಬ್ರು ಇದ್ದಂಗೆ ಇರಲಿಕ್ಕೆ ಬ್ಯಾಕಲ್ರಿ. ಶಿಲಾದ್ಯಾವರ ಹಾಂಗೆ ನೀವು ಈ ಕುರ್ಚಿನಾಗೆ ಕುಂತಿರೋದ್ರಿಂದ ಅಲ್ವೇನ್ರಿ ಸರ್ರ್, ಠಾಣೆನಾಗಿನ ವ್ಯವಹಾರವೆಲ್ಲಾ ಸುಸೂತ್ರ ನಡದೈತಿ....'' ಎಂದು ಎಲ್ಲರ ಪರವಾಗಿ ಅಕ್ಕಿಹಾಳುಮಠ ಹೇಳಿದ. ''ಈಗ ವರ್ಗಾವಣೆ ನಿಮಗ ಯಾಕ ಬ್ಯಾಕೈತ್ರಿ ಸಾಹೇಬ್ರ ಅದ್ನ ಮದ್ಲು ಹೇಳ್ರಿ...'' ಎಂದು ಅವನು ದುಂಬಾಲು ಬಿದ್ದ.

''ಮಂಡಲ ಪಂಚಾಯ್ತಿ ಮೆಂಬ್ರು ಶರಣಪ್ಪ ಅದಾನಲ್ಲ ಅವ ನನ್ನ ಅಗ್ದಿ ಕಾಡಲಿಕ್ಕೆ ಹತ್ಯಾನೆ ನೋಡ್ರಪಾ. ಅದ್ಕೆ ನಾ ವರ್ಗಾವಣೆಗೆ ಟ್ರೈ ಮಾಡ್ಲಿಕ್ಕೆ ಹತ್ತೀನಿ....'' ಎಂದು ಸಾಲಿಮನಿಯವರು ಕಾರಣವನ್ನು ವಿವರಿಸಿದಾಗ ಪೇದೆ ಮೆಣಸಿನಕಾಯಿಗೆ ಮೈಯೆಲ್ಲಾ ಉರಿದುಹೋಯಿತು. ಯಃಕಶ್ಚಿತ್ ಶರಣಪ್ಪ ಪೋಲೀಸರನ್ನೇ ಕಾಡುವುದೆಂದರೇನು? ಅವನನ್ನು ಎಳೆದು ತಂದು ಬೂಟಿನಿಂದ ಒದೆಯುವುದನ್ನು ಬಿಟ್ಟು ಸಾಲಿಮನಿಯವರೇ ಅವನಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುತ್ತಿರುವುದನ್ನು ಕಂಡು ಅವನಿಗೆ ಸೋಜಿಗವೇ ಆಯಿತು.

ಶರಣಪ್ಪ ಏಳನೆ ಮನೆ ಶನಿಯಂತೆ ಸಾಲಿಮನಿಯವರಿಗೆ ಗಂಟು ಬಿದ್ದಿದ್ದ. ''ಏನ್ರಿ ಸಾಯೇಬ್ರೆ ವೀರಪ್ಪನ್ನ ಹಿಡಿದಾತೇನ್ರಿ...?'' ಎಂದು ಎಸ್.ಐ. ಸಾಹೇಬರು ಕಣ್ಣಿಗೆ ಬಿದ್ದಾಗಲೆಲ್ಲಾ ವ್ಯಂಗ್ಯವಾಗಿ ಕೇಳುತ್ತಿದ್ದ. ಅವನ ಮಾತು ಕೇಳಿ ಕೂತಿದ್ದ ಮಂದಿಯೆಲ್ಲಾ ಕಿಸಕ್ಕನೆ ನಕ್ಕಾಗ ಸಾಲಿಮನಿಯವರಿಗೆ ಮೈ ಪರಚಿಕೊಳ್ಳುವಂತಾಗುತ್ತಿತ್ತು. ಇತ್ತೀಚೆಗೆ ಶರಣಪ್ಪ ಮತ್ತೊಂದು ಪ್ರಶ್ನೆಯನ್ನು ಕೇಳಲು ಶುರು ಮಾಡಿದ್ದ. ''ಏನ್ರಿ ಎಸ್.ಐ. ಸಾಹೇಬ್ರೆ, ಬೀದಿ ನಾಯಿ ಬ್ಯಾಟೆ ಸುಸೂತ್ರ ನಡದೈತೇನ್ರಿ. ಇಂದು ಎಷ್ಟು ಬಿಡಾಡಿ ನಾಯಿಗಳ್ನ ಹಿಡಿದ್ರಿ ಸರ್ರ್...?'' ಎಂದು ನಾಯಿಗಳ್ನ ಹಿಡಿಯುವುದೇ ಪೋಲೀರ ಉದ್ಯೋಗವೆಂಬಂತೆ ಕುಹಕವಾಗಿ ಹೇಳುತ್ತಿದ್ದುದು ಸಾಲಿಮನಿಯವರಿಗೆ ನುಂಗಲಾರದ ತುತ್ತಾಗಿತ್ತು. ಹಾಗೆಯೇ ಮರಕುಂಟೆಯ ಮಂದಿಗೆ ಪುಕ್ಕಟ್ಟೆ ಮನರಂಜನೆಯೂ ಸಿಕ್ಕಿದಂತಾಗಿತ್ತು. ಸಾಲಿಮನಿಯವರನ್ನ ನಗೆಪಾಟಲಿಗೆ ಗುರಿ ಮಾಡುತ್ತಿದ್ದ ಶರಣಪ್ಪನನ್ನು ಕಂಡರೆ ಹಾವನ್ನು ಕಂಡ ಕಪ್ಪೆಯಂತೆ ಅವರು ಅವನಿಂದ ತಪ್ಪಿಸಿಕೊಂಡು ಹೋಗಲು ನೋಡುತ್ತಿದ್ದರು.

''ಹೀಂಗ ಅಪಹಾಸ್ಯ ಮಾಡಿ ಆ ಬದ್ಮಾಶ ನನ್ನ ಮಗ ನನ್ನ ಮಾನ, ಮರ್ಯಾದೆ ಕಳೀಲಿಕ್ಕೆ ಹತ್ಯಾನೆ'' ಎಂದು ಸಾಲಿಮನಿಯವರು ಅಲವತ್ತುಕೊಂಡಾಗ, ''ಇಷ್ಟಕ್ಕೆಲ್ಲಾ ಮಾನ

ಹೋಗುತ್ತದೆಯೇ?'' ಎಂದು ಠಾಣೆಯ ಸಿಬ್ಬಂದಿಗಳು ಅಚ್ಚರಿಪಟ್ಟರು. ''ಶರಣಪ್ಪ ಹೇಳೋದ್ರಾಗೆ ಮಾನ ಹೋಗೂ ಅಂಥಾದು ಏನೈತ್ರಿ ಸಾಹೇಬ್ರ. ಖರೇಂದ್ರೆ ನಾವು ಮಾಡೋ ಚಾಕರೀನೇ ಅವ ಹೇಳಲಿಕ್ಕೆ ಹತ್ಯಾನೆ...'' ಎಂದು ಅಕ್ಕಿಹಾಳುಮಠ ಸಮಾಧಾನ ಮಾಡಿದ. ಮರಕುಂಟಿ ಆರಕ್ಷಕ ಠಾಣೆಯ ಸಿಬ್ಬಂದಿ ವರ್ಗಕ್ಕೆ ಮಂದಿಯಿಂದ ಉಗಿಸಿಕೊಂಡರೂ ಅದನ್ನು ಅವರು ಅಪಮಾನವೆಂದು ಭಾವಿಸುತ್ತಿರಲಿಲ್ಲ. ಯಾಮಿಕರ ಬಗ್ಗೆ ಜನರು ಮಾಡುವ ಟೀಕೆ ಟಿಪ್ಪಣಿಗಳನ್ನು ಕೇಳಿ ಕೇಳಿ ಅವರ ಕಿವಿ ಜಡ್ಡುಗಟ್ಟಿ ಹೋಗಿತ್ತು. ಶರಣಪ್ಪನ ಕುಹಕದ ಮಾತಿಗೇ ತಮ್ಮ ಸಾಹೇಬರು ವರ್ಗ ಮಾಡಿಸಿಕೊಳ್ಳಲಿಕ್ಕೆ ಪ್ರಯತ್ನುತ್ತಿರುವುದು ಹುಚ್ಚುತನದ ಪರಮಾವಧಿಯೆಂದೇ ಅವರುಗಳು ತಿಳಿದುಕೊಂಡರು.

''ಮಾನ ಅವಮಾನಕ್ಕೆಲ್ಲಾ ಕಾಳಜಿ ಮಾಡ್ತಾ ಕುಂತ್ರೆ ಪೋಲೀಸು ಉದ್ಯೋಗ ಮಾಡ್ಲಿಕ್ಕೆ ಬರೂದಿಲ್ರಿ ಸಾಹೇಬ್ರ. ನಿಮಗೆ ಇರೂ ಇನ್ನೂ ಒಂದು ಕನ್ಯಾಗೆ ಮದುವಿ ಮಾಡ್ಲಿಕ್ಕೆ ಬ್ಯಾಡವೇನ್ರಿ ಸರ್ರ್. ಮದ್ಲು ಆ ವರ್ಗದ ಅರ್ಜಿನ ಹರಿದು ಒಗೀರಿ ಸಾಹೇಬ್ರ...'' ಎಂದು ಮೂಲಿಮನಿ ಹೇಳಿದಾಗ ಸಾಲಿಮನಿಯವರಿಗೆ ಮಗಳ ಮದುವೆಯ ವಿಷಯವೇ ಬಲು ಮುಖ್ಯವಾಗಿ ಕಂಡು ಶರಣಪ್ಪನ ಅವಹೇಳನೆಯೆಲ್ಲಾ ಗೌಣವಾಗಿ ಕಾಣತೊಡಗಿತು.

ಆದಾಯ

ನಿತ್ಯ ದುಡಿವವರ ಆದಾಯ
ಕೆರೆನೀರ ತುಂಬಿ ತಂದಿಟ್ಟ ಗಿಂಡಿ
ಕೃಷಿಕರದು
ಕಲ್ಮಣ್ಣು ಬಗೆದಗೆದರೂ
ತುಂಬಲಾರದ ಗುಂಡಿ
ಅಧಿಕಾರಿ ಆದಾಯ
ಸದಾ ತೆರೆದಿಟ್ಟ ಬೆಳೆಕಿಂಡಿ
ವ್ಯಾಪಾರಿ ಅಳೆಯುವನು
ಬಂಡಿ ಬಂಡಿ
ರಾಜಕಾರಣಿಗಳದೋ?
ಅದು ತಿರುಪತಿಯ ಹುಂಡಿ!

— ಮ.ಗು. ಬಿರಾದಾರ

ಹೀಗೊಂದು ಅಬ್ಬ

- ಶ್ಯಾಮಲಾ ರವಿಶಂಕರ್

ಕೆಲಸದ ಹುಡುಗಿ ಅಂದು ಡಿಕ್ಲೇರ್ ಮಾಡಿದಳು. ''ಅಮ್ಮಾ (ಆಗಿನ್ನೂ ಆಂಟೀ/ ಭಾಭೀ ಪದ್ಧತಿ ಚಾಲೂ ಇರಲಿಲ್ಲ!) ನಾಳೆ ನಾನು ಬರೋಲ್ಲ. ಕೆಲಸವೆಲ್ಲಾ ಹಂಗೇ ಮಡಗಿರಿ, ನಾನೇ ಬಂದು ಮಾಡ್ತೀನಿ ನಾಳಿದ್ದು.''

ನನಗೆಷ್ಟು ಗೊತ್ತೋ ಅವಳಿಗೂ ಅಷ್ಟೇ ಗೊತ್ತು. ಅವಳ ರಜ ಒಂಟಿ ಎಂದೂ ಇರೋಲ್ಲ. ಅದೊಂದು ಚೈನು ಅಂತ. ಹೇಗೂ ಈಕೆ ಮಾಡ್ಕೋತಾರೆ. ಒಂದಿಷ್ಟು ಒಳ್ಳೇತನನಾದ್ರೂ ತೋರಿಸೋಣ ಎನ್ನುವಷ್ಟು ಉದಾರ ಬುದ್ಧಿ ಇದ್ದವಳು ಆ ಬಾಲಮ್ಮ!

ಕಾರಣ ಕೇಳದಿದ್ರೂ ಅವಳೇ ಉಸುರಿದಳು, 'ಬೋನಾಲಲ್ವಾ, ಅದ್ಕೆ'' ನನ್ನ ಮುಖ ಪ್ರಶ್ನಾರ್ಥಕ ಚಿಹ್ನೆಯಾಯಿತು. 'ಏನೇ ಅದು?'

'ಬೋನಾಲಮ್ಮ ಅದ್ಕೆ ನಾಳೆ ನಾನು ಬರಾಕಿಲ್ಲ'

'ಯಾರೇ ಆಕೆ, ಅದೇ ಜಿಲ್ಲೆ ಲಗೂಡಾದಲ್ಲಿರೋ ಅಕ್ಕಾನಾ?'

'ಅಯ್ಯೋ, ಇದೇನ್ರವ್ವಾ? ಬೋನಾಲಮ್ಮಾ ಅಂದ್ರೆ ಅಕ್ಕಾನಾ ಅಂತೀರಾ? ಬೋನಾಲಮ್ಮಾ, ಬೋನಾಲು! ಅಂದಳು.

'ಸರಿಹೋಯ್ತು, ಅದೇನೇ ನೀನು ಬಡ ಬಡಸ್ತಿರೋದು? ನನಗೆ ಸಂಬಂಧಿಸಿದ್ದಾದರೆ ಹೇಳು, ಅದೂ ಅರ್ಥ ಆಗೋ ಹಾಗೆ; ಇಲ್ಲದಿದ್ದರೆ ತೊಲಗು''

''ಇದೊಳ್ಳೆ ತಮಾಸೆ ತಕ್ಕಳ್ರಮಾ! ಬೋನಾಲಂದ್ರೆ ನಿಂಗೆ ಗೊತ್ತಿಲ್ಲಾಂತ ನಂಗೆ ಹೆಂಗೆ ತಿಳೀಬೇಕು? ಅದೊಂದು ಅಬ್ಬ. ವಸಿ ಪೂಜೆ-ಗೀಜೆ ಅಂತ ಮಾಡ್ಕಂತೀವಿ.''

ಇದರಿಂದ ನನ್ನ ಜಿ.ಕೆ. ಏನೂ ಉದ್ಧಾರವಾಗಲಿಲ್ಲವಾದರೂ 'ಹೋಗೆ ಹೊರಗೆ, ನನ್ನ ಕೆಲಸ ಮುಗೀತಿಲ್ಲಾ ನಿನ್ನ ಸಾವಾಸದಿಂದ' ಎಂದೆ.

ಮೂರು ದಿನ ಕಳೆದ ಮೇಲೆ ಬಾಲಮ್ಮನ ಬರುವಿಕೆಯಿಂದ ಸ್ವಲ್ಪ ವಿರಾಮ ಸಿಕ್ಕಿತು. ಜೊತೆಗೆ ರಜೆಯ ದಿವಸ ಬೇರೆ! 'ಸರಿ, ಈವತ್ತು ಆ ಬೋನಾಮ್ಮನ ಸರಿಯಾಗಿ ವಿಚಾರಿಸ್ಕೊಳ್ತೀನಿ' ಆಂತ ಮುಂಗಡ ಹಣಕ್ಕಾಗಿ ಕೈಚಾಚಿದ ಬಾಲಮ್ಮನನ್ನು ಮಾತಿಗೆಳೆದೆ.

'ಏನ್ಮಾಡಿದ್ಯೇ ಈ ಹಬ್ಬಕ್ಕೆ' ಅಂದೆ.

ಮುಸಿ ಮುಸಿ ನಕ್ಕು 'ಅಬ್ಬ, ಅನ್ನಮ್ಮಾ, ಹಬ್ಬ ಅಲ್ಲಾ' ಅಂದ್ಳು.

''ಸರಿ, ಬಿಡು ಹೀ ಅಬ್ಬಕ್ಕೆ ಹೇನು ಹೇಸು ಮಾಡ್ಕಂತೀರಾ?''

''ಇನ್ನೇನು ಮಾಡೋದೂ... ಬೋನಾಲು ತೆಗೀತೀವಿ, ಅಸ್ಟೇ''

ಮತ್ತೆ ಈ ಮಿಸ್ಟೆರಿ ಪದ ತಲೆಯೆತ್ತಿತ್ತಲ್ಲಾ: ''ಏನೇ ಹಾಗಂದ್ರೆ? ಎಲ್ಲಿರತ್ತೇ ಆ ಬೋನಾಲು. ಹೇಗೆ ತೆಗೀತೀರಾ ತುಂಬಾ ಟೈಂ ಹಿಡಿಸತ್ತಾ ಅದನ್ನು ತೆಗೆಯೋಕೆ?''

ಬಾಲಮ್ಮ ವ್ಯಂಗ್ಯವಾಗಿ "ಬ್ರಾಂಬ್ರೂ ಅಂತೀರಾ, ವಸಿ ಮಾಂಸ ಕೂಡ ಗಿಟ್ಟಾಕಿಲ್ಲಾ ನಿಮ್ಮ ತಂಗಳಲ್ಲಿ? ಮತ್ತೆ ನೋಡಿದ್ರೆ ವಂದಷ್ಟು ದೇವರು ದಿಂಡ್ರೂ ಕೂಡಿ ಗೊತ್ತಿಲ್ಲ ನಿಂಕಳಿಗೆ! ಸಾಕಪ್ಪೋ ಈ ದೊಡ್ಡನಿಸ್ರ ಇಸ್ಯ. ಇಚಿತ್ರದ ಜನ" ಅಂತ ರಾಗ ಎಳೆದು ನಾನೇನೂ ಪ್ರಯೋಜನವಿಲ್ಲ ಅಂತ. ಮುಗುಮ್ಮಾಗಿ ವ್ಯಕ್ತಪಡಿಸಿದಳು.

'ನಿಂಗೇನಾದ್ರೂ ಹೇಳೋಕೆ ಬಂದರೆ ಹೇಳು, ಇಲ್ಲದಿದ್ರೆ ಜಾಗ ಖಾಲಿ ಮಾಡು' 'ಸರಿ ಬುಡ್ರಿ, ಯೋಳೆ ಬುಡ್ತೀನಿ' ಅಂದವಳೇ ಚಕ್ಕಂ-ಬಕ್ಕ ಹಾಕ್ಕೊಂಡು ಸೂತರು, ಶೌನಕಾದಿ... ಅನ್ನೋ ಧಾಟಿಯಲ್ಲಿ ಹೇಳಲಾರಂಭಿಸಿದಳು.

ಹೀಗೆ ಶುರುವಾದ ನನ್ನ ಜ್ಞಾನಾರ್ಜನೆ ಈ ವಿಷಯದಲ್ಲಿ ಇಂದು ಬಹಳ ಮುಂದುವರೆದಿದೆ ಎಂದು ಹೇಳಲು ತವಕಿಸುತ್ತಿದ್ದೇನೆ.

ಆಷಾಢದ ಕಡೇ ಭಾನುವಾರ ಸಿಕಂದರಾಬಾದಿನಲ್ಲಿ ಜಾತ್ರೆಯೊಂದು ನಡೆಯುತ್ತದೆ. ಅದು "ಸಿಂಕಂದ್ರಾಬಂದ್ ಬೋನಾಲು" ಅದಾದ ಮರುದಿನ ಸಿಕಂದರಾಬಾದಿನಲ್ಲಿರುವ ಪಾಠಶಾಲೆಗಳಿಗೆಲ್ಲಾ ರಜ! ಅದು ಮಕ್ಕಳ ಸಮಾಚಾರ ಬಿಡಿ. ಇದು ಬಹಳ ವಿಜೃಂಭಣೆಯಿಂದ ನಡೆಯುತ್ತದೆ ಅಲ್ಲಿನ ಮುಖ್ಯ ರಸ್ತೆಗಳಲ್ಲಿ ನಿರ್ದಿಷ್ಟ ಕಾಲಕ್ಕೆ ಹಾದು ಹೋಗುತ್ತದೆ ಈ ಬೋನಾಲು ಮೆರವಣಿಗೆ.

ಇದಾದ ಮರು ಭಾನುವಾರ "ಹೈದರಾಬಾದು ಬೋನಾಲು" ನಾವೇನು ಪಾಪ ಮಾಡಿದ್ದೇವೆ ಎಂಬಂತೆ ಹೈದರಾಬಾದಿನ ಶಾಲೆಗಳಿಗೆ ಮರು ದಿನ ರಜ: ಇಷ್ಟೇ ಆದರೆ ಯಾವ ರೀತಿಯಲ್ಲೂ ಗಲಾಟೆ / ತೊಂದರೆ ಇರುತ್ತಿರಲಿಲ್ಲ.

ಕಾಲಕ್ರಮೇಣ ಬದಲಾವಣೆ ಬರುವುದು ಸಹಜವಷ್ಟೇ? ಇದರಿಂದ ಮನೆ ಕೆಲಸದವರ ಚಕ್ಕರ್‌ಗೆ ಇದೊಂದು ಉಪಾಯವಾಯಿತು. ಮುಂದಿನ ಹಂತದಲ್ಲಿ ಅವರ ಮನೆಯ ಗಂಡಸರು ಈ 'ಅಬ್ಬ'ಕ್ಕಾಗಿ ಚಂದಾ ವಸೂಲಿ ಮಾಡಿ. ಕುಡಿದು, ತಿಂದು, ತೇಗಿ, ವಾಂತಿ ಮಾಡಿಕೊಂಡು ಮನೆಯಲ್ಲಿನ ಹೆಂಗಸರನ್ನು ಬಡಿದು, ಚಚ್ಚಿ ಪ್ರಾಣ ತೆಗೆಯುವುದು ಸಾಧಾರಣವಾಯಿತು. ಇದರಿಂದ ಲಾಭ ಪ್ರಾಪ್ತಿಯೆಂದು ಅರಿತು ಕೇರಿ ಕೇರಿಗೂ (ರಸ್ತೆ ಮಧ್ಯದಲ್ಲಿ) ರಾತ್ರೋರಾತ್ರಿ ಚಿಕ್ಕ ಚಿಕ್ಕ ಗುಡಿಗಳಿದ್ದವು. ಈಗಂತೂ ರಸ್ತೆಗೊಂದಂತೆ ಸಣ್ಣ ಪುಟ್ಟ ಗುಡಿಗಳೆದ್ದು ಸುಣ್ಣ ಬಣ್ಣ ಮಾಡಿಸಿಕೊಂಡು ಬೋನಾಲು ಅಬ್ಬಕ್ಕೆ ರೆಡಿಯಾಗುತ್ತವೆ. ಎಲ್ಲಾ ಗುಡಿಗಳಲ್ಲೂ ಬೇಜಾನ್ ಬಲಿ - ಕೋಳಿಗಳು ಮಾತ್ರ - ನಡೆಯುತ್ತದೆ. ಈಚೀಚೆಗೆ ಯಾವ ಗುಡಿಯಲ್ಲಿ ಹೆಚ್ಚು ಬಲಿಯಾಯಿತು ಅನ್ನೋ ಸ್ಪರ್ಧೆ ಏರ್ಪಟ್ಟು ಅದಕ್ಕೆ ಸಬೂತಾಗಿ ಬಲಿಯಾದ ಕೋಳಿಗಳ ಕಾಲುಗಳ ತೋರಣ ಕಟ್ಟಲಾಗುತ್ತದೆ.

ಸಾಯಂಕಾಲಕ್ಕೆ ಹೆಂಗಸರು ಶೃಂಗರಿಸಿಕೊಂಡು ಮಡಕೆಯೊಂದರಲ್ಲಿ ಅನ್ನ ತುಂಬಿ, ಮಡಕೆಗೆ ಅಲಂಕಾರ ಮಾಡಿ ಅದರ ಕುತ್ತಿಗೆಗೆ ತೋರಣ ಬಿಗಿದು ಹಿರಿಯ ಮುತ್ತೈದೆಯೊಬ್ಬರು ಮತ್ತೊಬ್ಬ ಹೆಂಗಸಿನ ತಲೆಯ ಮೇಲಿರಿಸುತ್ತಾರೆ. ಇದೇ 'ಬೋನಾಲು ತೆಗೆಯುವುದು' ಅಂತ ಹೆಸರುವಾಸಿಯಾಗಿರುವುದು. ಮನೆ ಮಂದಿಯೆಲ್ಲಾ

ಮೆರವಣಿಗೆಯಲ್ಲಿ ಹೊರಟು ನದೀ ತೀರ ಅಥವಾ ಕೆರೆ ಕುಂಟೆ ಹತ್ತಿರ ಹೋಗಿ ಅನ್ನ ಕೋಳಿ ಇತ್ಯಾದಿಗಳನ್ನು ತಿಂದು ಪಿಕ್‌ನಿಕ್ ಮಾಡಿ ಮನೆಗೆ ಮಳುತ್ತಾರೆ. ಈ ವೈಭೋಗ ವರ್ಷೇ ವರ್ಷೇ ಹೆಚ್ಚುತ್ತಾ ಆಯಾ 'ಕೇರಿಯ ಬೋನಾಲು' ಹೆಸರಿನೊಡನೆ ಆಚರಿಸಲ್ಪಡುತ್ತಿದೆ. ಅಂದರೆ ಗೊತ್ತಾಯಿತಲ್ಲಾ, ಮೈಕಾಸುರನ ಬಾಯಿಗೆ ನಮ್ಮ ಕಿವಿಗಳ ಆಹುತಿ! ಆಯಾ ಮುನಿಸಿಪ್ ಕೌನ್ಸಿಲರ್‌ಗಳು ಮುಖ್ಯ ಅತಿಥಿಗಳು! ಅವರ ಬಿಜಿ ಶೆಡ್ಯೂಲ್‌ನಿಂದ ಕಡೆಯ ತನಕ ಬರುವುದಿಲ್ಲ ಆದರೆ ಪಕ್ಕದ ಕೇರಿಯವರಿಗಿಂತ ನಮ್ಮ 'ಅಬ್ಬ' ಗ್ರ್ಯಾಂಡ್ ಆಗಿರಬೇಕಲ್ಲವೇ. ಅದಕ್ಕಾಗಿ ಛೋಟಾ-ಮೋಟಾ ಪುಡಾರಿಗಳನ್ನು ಕಾಯ್ದಿರಿಸ್ತಾರೆ. ಇದು ಕಡೇ ನಿಮಿಷದ ನಿರ್ಣಯ ಅವರನ್ನು ಸ್ಟೇಜಿನ ಮೇಲೆ ಕರೆದು ಮೈಕಾಸುರನ ಪ್ರತಿಷ್ಠೆ ಮಾಡಲಾಗುತ್ತದೆ. ಇವರು ಭಾಷಣ ಮಾಡ್ತಾಲೇ ಇತರ್ರಾರೆ. ''ಇಲ್ಲಿ ಎಲ್ಲಾ ನಲ್ಲಿಗಳಲ್ಲೂ ನೀರು ತರಿಸಲು ನಾನು ಪಡುತ್ತಿರುವ ಪಾಡು (ನಿಮಗಾಗಿ) ಅಷ್ಟಿಷ್ಟಲ್ಲ (ಭಗೀರಥ ನಾಚಬೇಕು) ಕಾಲೋನಿಯಲ್ಲಿ ಕಸದ ಬುಟ್ಟಿಗಳನ್ನು ಇಡಿಸ್ತೀನಿ, ಗಿಡಗಳನ್ನು ನೆಡೆಸ್ತೀನಿ (ಅಶೋಕ ಮಾಡಿದ ಹಾಗೆ?) ಯಾವಾಗಲು ಕರೆಂಟು ಇರೋ ಥರಾ ಮಾಡ್ತೀನಿ (ಅದು ಯಾರ ಕೈಲೂ ಆಗದ ಕೆಲಸ!)'' ಹೀಗೆ ಏನೇನೋ ವದರ್‍ತಾರೆ. ಅಲ್ಲಿನ ಜನರೆಲ್ಲಾ ಯಾವಗ್ಲೋ ಚೆಲ್ಲಾಪಿಲ್ಲಿಯಾಗಿ ಚದುರಿ ಹೋಗ್ಬಿಟ್ಟಿರ್ತಾರೆ. ಅಲ್ಲೊಬ್ಬ ಇಲ್ಲೊಬ್ಬ ಪಡ್ಡೆ ಹುಡುಗರು ಸಮಿತಿಯ ಪರವಾಗಿ ಅತಿಥಿಗಳಿಗೆ ಚೆಂಡು ಹೂವಿನ (ಇಲ್ಲದಿದ್ದಲ್ಲಿ ಸುಗಂಧ ರಾಜ ಹೂವಿನ) ಹಾರ ಹಾಕಿ ಕೈಮುಗಿದು ಹಲ್ಲು ಕಿಸಿದು ಹಸ್ತಗಳನ್ನು ಉಜ್ಜಿ ನಿಂತಿರುತ್ತವೆ. ಅಂದರೆ, ''ಭಾಷಣ ಸಾಕು, ಸುಖವಾಗಿ ಜಾಗ ಖಾಲಿಮಾಡಿ'' ಅಂಬೋ ಸೂಚನೆ! ಅಂತೂ ಭಾಷಣಕಾರರು ತೆರಳುತ್ತಾರೆ.

ಸೋಮವಾರ ಆ ಕೇರಿಯ ಪ್ರತಿ ರಸ್ತೆಯೂ ಚಂಡಮಾರುತಕ್ಕೆ ಅಡ್ಡಬಂದ ಹಾಗೆ ತೋರುತ್ತದೆ.

ಇದೇ 'ಬೋನಾಲು ಅಬ್ಬ'

ಬಾಲಮ್ಮನ ಅಜ್ಜಿ ಮೊನ್ನೆ ಇದನ್ನೆಲ್ಲಾ ನೋಡಿ ಬಹಳ ವಿಷಾದ ಪಟ್ಟಳು: ''ಒಬ್ಬರಿಗಾದ್ರೂ ವಸಿ ಭಕ್ತಿ ಗಿತ್ತಿ ಅಂತ ಐತ್ರಾ ಅಮ್ಮಾವ್ರೆ? ಯಾವ ದೇವರ ಪಿರ್ತಿ ಇದು? ನಂಗೆನೊ ನಮ್ಮ ಕಾಲದ ಶಿಂಪಲ್ ಅಬ್ಬನೇ ಚಂದ ಅನ್ನಿಸ್ತದೆ'' ಅಂದಾಗ ಅವಳ ವಿವೇಕಾನ ಮೆಚ್ಚಬೇಕಾದದ್ದೇ!

ಸಾಲ

ಸಾಲ, ಬೆಳಲು ಬಿಡುತ್ತ
ಬೆಳೆಯುವ ಆಲ
ರೈತರಿಗೆ ಮಾತ್ರ ಇದು ಶೂಲ
ಉಳಿದವರಿಗೆ ಇದೆಲ್ಲ ಮಾಮೂಲ

– ಮ.ಗು. ಬಿರಾದಾರ

ಇಲ್ಲದಿದ್ದರೆ...

- ಸೂರಿ ಹಾರ್ದಳ್ಳಿ

1. ವೀರಪ್ಪನ್ ಇಲ್ಲದಿದ್ದರೆ...

ಕರ್ನಾಟಕ ಎಂಬ ಹೆಸರಿನ ಅಂತ ಒಂದು ರಾಜ್ಯ ಇದೆ, ಅದು ಇಂಡಿಯಾ ಎಂಬ ದೇಶದಲ್ಲಿದೆ ಎಂದು ವಿಶ್ವದಾದ್ಯಂತ ಗೊತ್ತಾಗಿದ್ದೇ ವೀರಪ್ಪನ್‌ನಿಂದ. ಬಿ.ಬಿ.ಸಿ. ಕೂಡಾ ರಾಜ್‌ಕುಮಾರ್ ಅಪಹರಿಸಿದ ವಿಷಯವನ್ನು ಪ್ರಸಾರ ಮಾಡಿ, ಹಿಂದಿ ನಟ ರಾಜ್‌ಕುಮಾರ್ ಚಿತ್ರ ತೋರಿಸಿ ಕರ್ನಾಟಕದ ಮುಡಿಗೊಂದು ಗರಿ ನೀಡಿದೆ. ವೀರಪ್ಪನ್‌ನಿಂದಾಗಿ ನಮ್ಮ ರಾಜ್‌ಕುಮಾರ್, ಹಿಂದಿಯ ರಾಜ್‌ಕುಮಾರ್, ಇವರುಗಳೆಲ್ಲ ಪ್ರಸಿದ್ಧಿ ಪಡೆದರೆಂಬುದು ಸುಳ್ಳೇ?

ವೀರಪ್ಪನ್ ಇಲ್ಲದಿದ್ದರೆ ಸಾವಿರಾರು ಜನರಿಗೆ ಟಾಸ್ಕ್‌ಫೋರ್ಸ್‌ನಲ್ಲಿ ಕೆಲಸ ಸಿಗುತ್ತಿತ್ತೇ? ಅವನಿರದಿದ್ದರೆ ವೀರಪ್ಪನ್‌ನನ್ನು ಶೀಘ್ರವೇ ಹಿಡಿಯುತ್ತೇವೆ ಎಂದು ಮುಖ್ಯ ಮಂತ್ರಿಗಳು, ಗೃಹ ಸಚಿವರು ಪತ್ರಿಕೆಗಳ ಮುಖ ಪುಟದಲ್ಲಿ ಪ್ರಕಟವಾಗುವ, ಯಾರೂ ನಂಬದ, ಹಳಸು ಹೇಳಿಕೆ ಕೊಡಲಾಗುತ್ತಿತ್ತೇ?

2. ಭ್ರಷ್ಟ ರಾಜಕಾರಣಿಗಳು, ಸರ್ಕಾರಿ ನೌಕರರು - ಅಧಿಕಾರಿಗಳು, ಸ್ವಜನ ಪಕ್ಷಪಾತಿಗಳು, ಮೋಸಗಾರರು ಇರದಿದ್ದರೆ...

ಲಂಕೇಶ್ ಪತ್ರಿಕೆಯ ಇಂದ್ರಜಿತ್, ಹಾಯ್ ಬೆಂಗಳೂರು ಪತ್ರಿಕೆಯ ರವಿ ಬೆಳಗೆರೆ, ಇವರು ತಮ್ಮ ಉದರಂಭಣಕ್ಕಾಗಿ ಬೇರೊಂದು ವೃತ್ತಿಯನ್ನು ಅವಲಂಬಿಸಬೇಕಾಗುತ್ತಿತ್ತು. ತಮ್ಮ ಬದುಕಿಗೊಂದು ದಾರಿ ಕಣಿಸಿದ ಮೇಲಿನಂಥವರಿಗೆ ಅವರು ಋಣಿಯಾಗಿರಬೇಕು.

3. ವರ್ಣಮಾಲೆಯಲ್ಲಿ 'ಕ' ಅಕ್ಷರವೇ ಇರದಿದ್ದರೆ....

ನಂಬುತ್ತೀರೋ ಬಿಡುತ್ತೀರೋ... ಕವಲುದಾರಿ, ಕ್ಷಣ ಕ್ಷಣ, ಕನ್ನಡಿ, ಮೊದಲಾದ ರಿಮೇಕ್ ಟಿವಿ ಧಾರಾವಾಹಿಗಳನ್ನು ತಯಾರಿಸುವ ಏಕತಾ ಕಪೂರ್ 'ಕ' ಅಕ್ಷರದಿಂದಾರಂಭವಾಗುವ ಪದಗಳು ಇರದೇ ಇದ್ದರೆ ಟಿವಿ ಧಾರಾವಾಹಿಗಳನ್ನು ತಯಾರಿಸುವುದನ್ನೇ ನಿಲ್ಲಿಸಬೇಕಾಗುತ್ತಿತ್ತೇನೋ?

4. ಪ್ಯಾಂಟುಗಳಲ್ಲಿ ಬದಿಯ ಜೇಬುಗಳೇ ಇರದಿದ್ದರೆ...

ಯಾರಿಗೇನು ತೊಂದರೆಯಾಗುತ್ತಿತ್ತೋ ತಿಳಿಯದು, ಆದರೆ ನಟ ರವಿಕಿರಣ್ ಮಾತ್ರ ನಿಂತು ಮಾತನಾಡುವ ದೃಶ್ಯಗಳಿಗೆ ವಿದಾಯ ಹೇಳುತ್ತಿದ್ದರು. ಪ್ಯಾಂಟಿನಲ್ಲಿ ಜೇಬುಗಳೇ ಇರದಿದ್ದರೆ ಎರಡೂ ಭುಜಗಳಿಗೆ ನೇತಾಡುವ ಅವರ ಕೈಗಳನ್ನು ಇಡುವುದಾದರೂ ಎಲ್ಲಿ?

5. ಕನ್ನಡ ಸಿನೆಮಾಗಳಿಗೆ ಇಂಗ್ಲಿಷ್ ಹೆಸರಿಡಬಾರದೆಂದು ರಾಜ್ಯ ಸುಗ್ರೀವಾಜ್ಞೆ ಹೊರಡಿಸಿದ್ದರೆ...

ನಟರಾದ ದೇವರಾಜ್ ಮತ್ತು ಸಾಯಿಕುಮಾರ್‌ರವರ ಸಿನೆಮಾಗಳಿಗೆ ಹೆಸರಿಡುವುದೇ ಆಗುತ್ತಿರಲಿಲ್ಲ. ಇಂಗ್ಲಿಷ್ ಹೆಸರಿರುವ ಚಲನಚಿತ್ರಗಳ ನಾಯಕರು ದೇವರಾಜ್ ಅಥವಾ ಸಾಯಿಕುಮಾರ್‌ರೇ ಆಗಿರುತ್ತಾರೆ ಎಂಬುದು ಸತ್ಯ.

6. ಡಿ.ವಿ.ಜಿ.ಯವರು ಮಂಕುತಿಮ್ಮನ ಕಗ್ಗ ಬರೆಯದಿದ್ದರೆ....

ತರಂಗ ವಾರಪತ್ರಿಕೆಯ ಸಂಪಾದಕಿ ಸಂಧ್ಯಾ ಪೈ ತರಂಗದಲ್ಲಿ ಸಂಪಾದಕೀಯ ಬರೆಯಲಾಗದೇ ಪರದಾಡುತ್ತಿದ್ದರು. ಮಂಕುತಿಮ್ಮನ ಕಗ್ಗದ ಉಲ್ಲೇಖವಿಲ್ಲದೇ ಅವರು ಎಂದಾದರೂ ಸಂಪಾದಕೀಯ ಬರೆದಿದ್ದಾರೆಯೇ?

7. ಮನುಷ್ಯನಿಗೆ ಮೂಗೇ ಇಲ್ಲದಿದ್ದರೆ...

ಈ ಜಗತ್ತಿನಲ್ಲಿ ಕುರುಡರ ಸಂಖ್ಯೆ ಗಣನೀಯವಾಗಿ ಏರುತ್ತಿತ್ತು. ಮೂಗಿಲ್ಲದಿದ್ದರೆ ಕನ್ನಡಕ ಧರಿಸುವುದು ಸಾಧ್ಯವೇ ಹೇಳಿ?

8. ಮದುವೆ ಎಂಬುದೊಂದು ಇರದಿದ್ರೆ....

ಗಂಡು ಜಾತಿಗೆ ಸುಖ ಎಂದರೇನು ಎಂಬುದೇ ತಿಳಿಯುತ್ತಿರಲಿಲ್ಲ. ಕಷ್ಟ ಇದ್ದಾಗ ಮಾತ್ರ ಸುಖ ಎಂದರೇನು ಎಂಬುದಕ್ಕೆ ವ್ಯಾಖ್ಯಾನ ಮಾಡಬಹುದೇ ಹೊರತು ಇಲ್ಲದಿದ್ದಾಗ ಸುಖಕ್ಕೆ ಮಹತ್ವವೇ ಇರುವುದಿಲ್ಲ. ಸುಖ ಎಂದರೇನು ಎಂಬುದು ಗಂಡಸರಿಗೆ ತಿಳಿಯುವಾಗ, ಪಾಪ, ಅವರ ಮದುವೆ ಆಗಲೇ ಆಗಿರುತ್ತದೆ.

9. ಕಾರುಗಳೇ ಇಲ್ಲದಿದ್ದರೆ...

ತರಕಾರಿ ಮತ್ತು ಹಣ್ಣುಗಳ ಬೆಲೆ ಯದ್ವಾ ತದ್ವಾ ಏರುತ್ತಿತ್ತು. ಸಿನೆಮಾ ನಿರ್ಮಾಪಕರು ತಮ್ಮ ಸಿನೆಮಾಗಳಲ್ಲಿ ಹೊಡೆದಾಟದ ದೃಶ್ಯಗಳನ್ನು ಕಾರುಗಳ ಗಾಜನ್ನು ಒಡೆಯುವ ದೃಶ್ಯಗಳ ಮೂಲಕ ತೋರಿಸಲು ಆಗುತ್ತಿರಲಿಲ್ಲವಾದ ಕಾರಣ ಹಳೆಯ ಸಿನಿಮಾಗಳ ಹಾಗೆ ತರಕಾರಿ ಮತ್ತು ಹಣ್ಣುಗಳ ಅಂಗಡಿಗಳಲ್ಲಿ ಫೈಟಿಂಗ್ ನಡೆದು, ಲಾರಿಗಟ್ಟಲೆ ಆಹಾರ ಪದಾರ್ಥಗಳು ಹಾಳಾಗಿ, ತರಕಾರಿಗಳ ಕೊರತೆ ಉಂಟಾಗುತ್ತಿತ್ತು.

10. ಪತ್ರಿಕೆಗಳೇ ಇರದಿದ್ದರೆ....

ನಮ್ಮಂಥ ಭಯಂಕರ ಬರಹಗಾರರಿಂದ ಅಂಚೆ ಇಲಾಖೆಗೆ ಒಂದು ಪೈಸೆ ಸಂಪಾದನೆಯೂ ಆಗುತ್ತಿರಲಿಲ್ಲ.

ದಂಡ

ಅಳಿಯನಲ್ಲವ
ಮಗಳ ಗಂಡ
ಅದಕ್ಕೇ ತೆತ್ತಿದ್ದೇವೆ
ವರದಕ್ಷಿಣೆಯ ದಂಡ

- ಮ.ಗು. ಬಿರಾದಾರ

ಡಬ್ಬಲ್ ನವ್ಯದ ಸಿಂಗಲ್ ವಿಮರ್ಶೆ

(ಯಕ್ಷಗಾನ ಬಯಲಾಟ)

– ಬಿ.ಆರ್. ನಾಗೇಶ್

ಧಿಥೋಂ ಧಿಥೋಂ ತರಿಕಟ ತರಿಕಟ ಧಿಥೋಂ

''ಬಲ್ಲಿರೇನಯ್ಯಾ?''

''ಬಲ್ಲೆವು''

''ಏನು ಬಲ್ಲೆವು?''

''ನಿಮಗೆ ತಾಳಕ್ಕೆ ಸರಿಯಾಗಿ ಕುಣಿಯಲು ಗೊತ್ತಿಲ್ಲ ಎಂದು''

''ತಾಳಕ್ಕೆ ಸರಿಯಾಗಿ ಕುಣಿದರೆ ನಾವು ನವ್ಯರು ಹೇಗಾದೇವು?''

''ಅಂದರೆ ತಾಳತಪ್ಪಿದವರು ನವ್ಯರು ಎಂದು ಅರ್ಥವೇ?''

''ಹೂಂ. ಹಾಗೆನ್ನಬಹುದು. ಆದರೆ ನಾವು ಸಿಂಗಲ್ ನವ್ಯರಲ್ಲ!''

''ಮತ್ತೆ?''

''ಡಬ್ಬಲ್ ನವ್ಯರು.''

''ಅರ್ಥವಾಗಲಿಲ್ಲವಲ್ಲಾ?''

''ಭಾಗವತರೇ, ನಿಮಗೆ ಅರ್ಥ ಆಗುವುದು ವೀಳ್ಯ ಹಾಕಿ ಯಾರಿಗೂ ತಿಳಿಯದ ಹಾಗೆ ಹಾಡುವುದು ಮಾತ್ರ''

''ಆದ್ದರಿಂದ ನಾವೂ ನವ್ಯರು ಎಂದು ಹೇಳಬಹುದಲ್ಲಾ''

''ಏನು ಭಾಗವತರೇ. ಸಾಹಿತ್ಯದಲ್ಲಿ ಮಾತ್ರ ನವ್ಯರು ಹುಟ್ಟುವುದು ಭಾಗವತಿಕೆಯಲ್ಲಿ ಅಲ್ಲ.''

''ಸರಿ, ಸರಿಯಪ್ಪ''

ಧಿಥೋಂ ಧಿಥೋಂ ತರಿಕಿಟ ತರಿಕಿಟ ಧಿಥೋಂ

''ಭಾಗವತರೇ?''

''ಕೇಳುತ್ತಾ ಇದ್ದೇನೆ''

''ನಾನು ಯಾರೆಂದು ಬಲ್ಲಿರಾ?''

''ತಾಳ ತಪ್ಪಿ ಕುಣಿಯುವ ನವ್ಯರು ಎಂದು ಗೊತ್ತಾಯಿತು.''

''ನಾವು ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ''

''ರಂಗಸ್ಥಳ ಬಿಟ್ಟು ಕುಣಿಯುವವರೇ?''

''ನಾವು ಡಬ್ಬಲ್ ನವ್ಯರು''

''ಅರ್ಥವಾಗಲಿಲ್ಲ''

ಧಿಧೋಂ ಧಿಧೋಂ ತಂಕಿಟ ತಂಕಿಟ ಧಿಧೋಂ

''ಭಾಗವತರೇ, ನಾನು ಯಾರು?''

''ಹೇಳಬೇಕು ಮಹಾಸ್ವಾಮೀ''

''ಡಬ್ಬಲ್ ಸವ್ವರ ವಿಮರ್ಶಾಲೋಕಕ್ಕೆ ಯಾರೆಂದು ಕೇಳಬಲ್ಲಿರಿ?''

''ಗೊತ್ತಿಲ್ಲ''

''ಹಾಹಾ ಭಾಗವತರೇ. ಡಬ್ಬಲ್ ಸವ್ವದ ವಿಮರ್ಶಾಧಿಪತಿ ತೆನಾಲಿರಾವ್ ಎಂದರೆ ನಾನೇ.''

ಧಿಧೋಂ

''ಹಿಂದೊಬ್ಬ ಆಂಧ್ರದಲ್ಲಿ ತೆನಾಲಿರಾಮ ಇದ್ದಾ. ಅವನ ಸಂಬಂಧಿಕರೇ ನೀವು?''

''ಆ ತೆನಾಲಿ ರಾಮ ಕಪ್ಪು ನಾಯಿಯನ್ನು ಬಿಳಿ ಮಾಡಲು ಹೊರಟು ಸೋತವ. ನಾನು ಸಣ್ಣದಿರುವಾಗ ಬಿಳಿ ನಾಯಿಯನ್ನು ಕಪ್ಪು ಮಾಡಿದವ - ಭಾಗವತರೇ - ಕಪ್ಪು ಮಾಡಿದವ, ಗೆದ್ದವ, ಅಪ್ಪನ ಶಾಯಿ ಬಾಟ್ಲಿಯಿಂದ ಶಾಯಿ ತೆಗೆದು, ನಮ್ಮಲ್ಲಿದ್ದ ಬಿಳಿ ನಾಯಿ ಮರಿಯ ಮೈಗೆ ಸವರಿ ಕಪ್ಪು ಮಾಡಿದವ. ಅದಕ್ಕಾಗಿಯೆ ನನಗೆ ತೆನಾಲಿರಾವ್ ಎಂದು ಹೆಸರಿಟ್ಟರು.''

''ನಾಯಿ ಕಪ್ಪು ಮಾಡಿದವರು ಸಾಹಿತ್ಯರಂಗಕ್ಕೆ ಪ್ರವೇಶಿಸಿದ್ದಾದರೂ ಹೇಗೆ ಮಹಾಸ್ವಾಮೀ?''

ಧಿಧೋಂ ಧಿಧೋಂ ತರಿಕಿಟ ತರಿಕಿಟ ತಿರ್‌ರ್...

''ನಾನು ಹುಟ್ಟುವಾಗಲೇ ವಿಮರ್ಶಕನಾಗಿದ್ದೆ. ನನಗೆ ಬೇಡವಾದುದನ್ನು ಕೈಯಿಂದ ದೂರಮಾಡಿ, ಬೇಕಾದುದನ್ನು ಎದೆಗೆ ಅವಚಿಕೊಂಡು ಇರುತ್ತಿದ್ದೆ. ಎಲ್ಲಾ ಒಳ್ಳೆಯದರಲ್ಲಿ ಕೆಟ್ಟದ್ದನ್ನು ಹುಡುಕುತ್ತಾ, ಕೆಟ್ಟದರಲ್ಲಿ ಇನ್ನೂ ಕೆಟ್ಟದ್ದನ್ನು ಹುಡುಕುತ್ತಾ ಬೆಳೆದೆ. ಇಂಥಾ ಬುದ್ಧಿ ಇರುವವರು ಸಾಹಿತ್ಯ ವಿಮರ್ಶಕರೇ ಆಗಿರುತ್ತಾರೆ - ಎಂಬುದರಿಂದ, ಸಾಹಿತ್ಯದಲ್ಲಿ ಯಂ.ಎ. ಮಾಡಿದೆ. ಅದರ ಮೇಲೆ ತೊಕ್ಕೊಳ್ಳಿ...''

ಧಿಧೋಂ...

''ಏನಾಯಿತು ರಾಯರೇ - ಎಕ್ಸಿಡೆಂಟೇ?''

''ಕರೆಕ್ಟ್ ಭಾಗವರತೇ. ನಾನೊಂದು ಪುಸ್ತಕದ ವಿಮರ್ಶೆ ಬರೆದೆ. ಆ ವಿಮರ್ಶೆ ಎಕ್ಸಿಡೆಂಟ್ ಮಾಡಿತು. ಹಾಗಾಗಿ ನಾನು ಎಕ್ಸಿಡೆಂಟ್ ವಿಮರ್ಶಕನಾದೆ.''

''ಅದ್ಭುತ ಸ್ವಾಮೀ''

''ಪತ್ರಿಕೆಯಲ್ಲಿ ಜಾಣಜಾಣೆಯರಿಗಾಗಿ ಪ್ರಕಟಗೊಂಡ ನನ್ನ ವಿಮರ್ಶೆಯನ್ನು ಓದುತ್ತಾ, ಒಬ್ಬ ಸಾಹಿತಿ ಮೋಟಾರ್ ಸೈಕಲ್ ಮೇಲೆ ಹೋಗುತ್ತಿದ್ದ. ನನ್ನ ಪುಸ್ತಕದ ಕುರಿತಾದ ನನ್ನ ವಿಮರ್ಶೆಯನ್ನು ಮನೆ ಮುಟ್ಟಿದ ಬಳಿಕ ಓದುವ ವ್ಯವಧಾನವೂ

ಆವನಿಗಿರಲಿಲ್ಲ. ಎದುರಿಗೆ ಬಂದ ಕಾರ್ಪೊರೇಷನ್ ಕಸದ ಲಾರಿಗೆ ನನ್ನ ವಿಮರ್ಶೆ ಓದುತ್ತಾ ಢಿಕ್ಕಿ ಹೊಡೆದ. ಅಲ್ಲೇ, ಪತ್ರಿಕೆಯಲ್ಲಿ ಪ್ರಕಟವಾಗಿದ್ದ ನನ್ನ ವಿಮರ್ಶೆಯ ಪುಟವನ್ನು ಹಿಡಿದುಕೊಂಡೇ, ಮಾರ್ಗದ ಮಧ್ಯೆ ಸತ್ತುಬಿದ್ದ. ನೋಡಿದಿರಾ ನನ್ನ ವಿಮರ್ಶೆಯ ಪ್ರಭಾವ?''

ಧಿಥೋಂ ಧಿಂಧಿಂಧಿಥೋಂ

''ಅದ್ಭುತ, ಆದರೆ ನೀವು ಈ ಸ್ಥಿತಿಗೆ ಮುಟ್ಟಿದ್ದಾದರೂ ಹೇಗೆ? ನಮ್ಮ ಅಜ್ಞಾನಿ ಪ್ರೇಕ್ಷಕರಿಗೆ ತಿಳುಹಿಸೋಣವಾಗಲಿ.''

''ಶಹಭಾಸ್ ಭಾಗವತರೇ, ನಿಮಗೆ ಗಂಟಲು ಮಾತ್ರವಲ್ಲ, ಬುದ್ಧಿಯೂ ಇದೆ ಎಂದು ತಿಳಿಯಿತು. ನೋಡಿ, ನಮ್ಮ ಕನ್ನಡ ಸಾಹಿತ್ಯದಲ್ಲಿ ಹಲವಾರು ಮೆಟ್ಟಲುಗಳಿವೆ - ಮೇಲೆ ಹೋಗಲು ಮೆಟ್ಟಲು, ಕೆಳಗೆ ಬರಲೂ ಅದೇ ಮೆಟ್ಟಲು. ಏರಿದ ರನ್ನ ಜನ್ನರ ಸರತಿ ಆದ ಮೇಲೆ, ನಡುಗನ್ನಡದವರ ಜಾಲಾಟ ಮುಗಿದ ಬಳಿಕ, ಹೊಸ ಕನ್ನಡದವರ ನೃತ್ಯ ಪ್ರಾರಂಭವಾಗಿ, ನವೋದಯದ ಮೂಲಕ ಹಾದು, ಪ್ರಗತಿಶೀಲರ ಪ್ರಗತಿಯನ್ನು ಕಣ್ಣಾರೆ ಕಂಡು, ನವ್ಯಕ್ಕೆ ಕನ್ನಡ ಸಾಹಿತ್ಯ ಬಂದು ಮುಟ್ಟಿದ್ದು ಅಂಗೈ ಹುಣ್ಣಿನಷ್ಟು ಸ್ಪಷ್ಟವಾದ ವಿಚಾರ. ಅದಾದ ಮೇಲೆ ಬಂಡಾಯದವರ ಹೈಜಂಪು, ದಲಿತರ ಲಾಂಗ್ ಜಂಪ್ ಮುಗಿಸಿ, ಸಧ್ಯ ಡಬ್ಬಲ್ ನವ್ಯದ ಸ್ಥಿತಿಯಲ್ಲಿದೆ ನಮ್ಮ ಸಾಹಿತ್ಯ.''

''ಈ ಸ್ಥಿತಿಯ ಲಕ್ಷಣಗಳೇನು ವಿಮರ್ಶಕರೇ?''

ಧಿಡಿಂ ಧಿಡಿಂ ಥಂ ಥಂ

''ಮುಖ್ಯವಾಗಿ ಇದು ವಿಮರ್ಶಾಯುಗ. ಒಂದು ಕೃತಿಯಲ್ಲಿ ಇಲ್ಲದುದನ್ನು ಇದೆ ಎಂದು ಸಿದ್ಧಾಂತಿಕರಿಸಿ, ಇಲ್ಲವಾದಲ್ಲಿ ಇದೆ ಎಂದು ತರ್ಕ ಮೂಲಕ ಸ್ಪಷ್ಟೀಕರಿಸುವ ಸ್ಥಿತಿಗೆ ಡಬ್ಬಲ್ ನವ್ಯಸ್ಥಿತಿ ಎಂದು ಹೇಳಬಹುದು. ಡಬ್ಬಲ್ ನವ್ಯದವರಿಗೆ ಮುಖ್ಯವಾಗಿ ಜಾಗತೀಕರಣ, ವಾತಾವರಣ, ವಸಾಹತೀಕರಣ, ವೃತ್ತಿ ಅಸ್ತಿತ್ವ, ಸಾಮಾಜಿಕ ಕಳಕಳಿ, ವಿಸ್ಕೀಕರಣ, ಬಿಯರೀಕರಣ, ಸಿಗರೇಟೀಕರಣ, ಸಮಾಜ ಶಾಸ್ತ್ರೀಕರಣ, ಮನೋ ವಿಜ್ಞಾನೀಕರಣ, ಮುಂತಾದ ಕರಣಗಳು ಬೇಕೇ ಬೇಕಾಗುತ್ತವೆ.''

''ಒಂದು ಕವನವನ್ನು ವಿಮರ್ಶೆ ಮಾಡಲು ಇವೆಲ್ಲಾ ಬೇಕೇ?''

''ಅಯ್ಯೋ ಅಜ್ಞಾನಿ ಭಾಗವತರೇ. ನೀವಿನ್ನೂ ಹಯವದನ ಕಾಲದಲ್ಲಿದ್ದೀರಿ. ಇಷ್ಟು ಸರಿ ಮಾತ್ರವಲ್ಲದೆ ಇಮೇಲ್, ಕಂಪ್ಯೂಟರ್, ನಿರೋಧ್- ಇತ್ಯಾದಿಗಳೂ ಬೇಕಾಗುತ್ತವೆ''

''ಸ್ವಾಮೀ, ನಿಮ್ಮ ವಿಮರ್ಶೆಯ ಒಂದು ಚೂರು ರುಚಿಯನ್ನು ನಮ್ಮ ಪ್ರೇಕ್ಷಕ / ಓದುಗ ವೃಂದಕ್ಕೆ....''

''ಶಹಭಾಸ್ ಭಾಗವತರೇ. ನಮ್ಮೆದುರಿಗಿರುವ ಓದುಗರು ಇಷ್ಟು ಕುತೂಹಲಕಾರಿಗಳು ಎಂದು ತಿಳಿದಿರಲಿಲ್ಲ. ಆಗಲಿ ಒಂದು ಸ್ಯಾಂಪಲ್ ವಿಮರ್ಶೆ ತೆಕ್ಕೊಳ್ಳಿ....''

ತರಿಕಿಟ ತರಿಕಿಟ ಕಿಟಿಕಿರಿಕಿರಿಕಿಟ

''ಭಾಗವತರೇ. ನಿಮಗೆ ನಾಯಿಮರಿ ಪದ್ಯ ಗೊತ್ತಿರಬೇಕಲ್ಲಾ?''

''ಅಯ್ಯೋ, ಆ ಪದ್ಯವನ್ನು ಎರಡನೆಯ ಮಹಾಯುದ್ಧದ ಸಮಯ ನಾನು ಬಾಯಿಪಾಠ ಮಾಡಿದ್ದೇನೆ. ಗೊತ್ತಿಲ್ಲದೆ ಏನು?''

''ಸರಿ. ಹಾಗಾದರೆ ನನ್ನ ವಿಮರ್ಶೆ ಕೇಳಲು ಪೂರ್ವ ತಯಾರಿ ನಿಮ್ಮಲ್ಲಿ ಇದೆ ಎಂದಾಯಿತು. ನೋಡಿ, ಆ ಕವನದಲ್ಲಿ ಒಟ್ಟಾಗಿ ಹದಿನೆರಡು ಸಾಲುಗಳಿವೆ. ಆ ಹದಿನೆರಡು ಸಾಲುಗಳು ವರ್ಷದ ಹದಿನೆರಡು ತಿಂಗಳುಗಳನ್ನ ಸೂಚಿಸುತ್ತವೆ. ಅಂದರೆ ಆ ಕವನ ಇಡೀ ವರ್ಷ ಉಬ್ಬಸದ ಉಸಿರೆಳೆದುಕೊಂಡು ಇರುತ್ತದೆ.''

''ಶಹಭಾಸ್''

''ಮೊದಲ ನಾಲ್ಕು ಸಾಲುಗಳು ಹೀಗಿವೆ; ನಾಯಿಮರಿ ನಾಯಿಮರಿ ತಿಂಡಿ ಬೇಕೇ? ತಿಂಡಿ ಬೇಕು ತೀರ್ಥ ಬೇಕು ಎಲ್ಲಬೇಕು, ಇಲ್ಲಿ ನಾಯಿಮರಿ ಕೆಳವರ್ಗಕ್ಕೆ ಪ್ರತೀಕವಾಗಿ ನಿಂತಿರುತ್ತದೆ. ಅವರಿಗೆ ಬೇಕಾಗುವುದು ಊಟ ತಿಂಡಿಯಲ್ಲ. ಆದರೆ ಕವಿ ತಿಂಡಿಬೇಕೇ ಎಂದು ಕೇಳಲು ಕಾರಣ ಸಾಂಸ್ಕೃತಿಕವಾದದ್ದು. ಕವಿ ಬೆಳಗ್ಗಿನ ತಿಂಡಿಯನ್ನು ತಿನ್ನುತ್ತಿರುವಾಗ ನಾಯಿಮರಿ, ಕೂಲಿಯಾಳು, ಎದುರಿಗೆ ಬಂದಿರಬೇಕು. ಆಗ ಊಟದ ಹೊತ್ತಲ್ಲ. ಆ ಹೊತ್ತಿನಲ್ಲಿ ಊಟದ ಪ್ರಸ್ತಾಪ ಮಾಡುವುದೂ ವಸಾಹತೀಕರಣದ ಚಿನ್ಹೆಯಾಗಿರುತ್ತದೆ. ಆದಕ್ಕಾಗಿ ಕವಿ ತಿಂಡಿ ಬೇಕೇ ಎಂದು ಕೇಳುತ್ತಾನೆಯೆ ಹೊರತು, ತಿಂಡಿಯನ್ನು ಕೊಡುವುದಿಲ್ಲ. ಇದು ಭಂಡವಾಳಶಾಹಿಯ ಸಂಕೇತ. ಆ ಸಮಯದಲ್ಲಿ ಹೊಟ್ಟೆ ಹಸಿದಿರುವ ಕೂಲಿ, ತಿಂಡಿಬೇಕು, ತೀರ್ಥಬೇಕು, ಎಲ್ಲಬೇಕು - ಎಂದು ಕೇಳುತ್ತಾನೆ. ಆ ಶಬ್ದಗಳ ಹಿಂದಿರುವ ವೇದನೆಯನ್ನು ನೋಡಿ - ನೈಜೀರಿಯಾ ಮಕ್ಕಳ ಎಲುಬು ಗೂಡು, ನೊಣ ತುಂಬಿದ ಮುಖ ಎದುರು ಬಂದ ಹಾಗಾಗುತ್ತದೆ. ತಿಂಡಿ ತೀರ್ಥಗಳನ್ನು ಕೇಳುವ ಪ್ರಶ್ನೆಯ ಹಿಂದಿರುವುದು ಜಾಗತಿಕ ಪ್ರಜ್ಞೆ. ಆದರೆ ಈ ಸಂದರ್ಭದಲ್ಲಿ ತೀರ್ಥ ಹೇಗೆ ಬಂತು ಎಂದು ನೀವು ಕೇಳಬಹುದು. ಭಾರತದಲ್ಲಿ ಹುಟ್ಟಿರುವ ನಮಗೆಲ್ಲಾ ತೀರ್ಥವೆಂದರೆ ಗಂಗಾಜಲ. ಪ್ರಾಣ ದೇಹದಿಂದ ಹೊರ ಹೋಗಲು ಉಯ್ಯಾಲೆಯಾಡುತ್ತಿರುವಾಗ, ಗಂಗಾಜಲ ಗಂಟಲಿನಿಂದ ಒಳಗೆ ಹೋದರೆ, ಪ್ರಾಣಕ್ಕೆ ದೇಹದಿಂದ ಜಾರಿ ಹೋಗಲು ಅನುಕೂಲವಾಗುತ್ತದೆ. ಇಲ್ಲಿ ನಾಯಿಮರಿ, ಎಂದರೆ ಕೂಲಿಗಳು ಕೇಳುವುದು ಇದನ್ನೆ. ಇದರರ್ಥ - ಸ್ವಾಮೀ, ನಿಮ್ಮ ಸೇವೆ ಮಾಡಿ ನನ್ನ ಜೀವ ಹೋಗುವ ಸ್ಥಿತಿಯಲ್ಲಿದೆ - ಹಾಗಾಗಿ ಗಂಟಲಿಗೆ ಒಂದಷ್ಟು ನೀರಿ ಬಿಡಿ ಎಂದು. ಬಳಿಕ ಬರುವ ಎಲ್ಲ ಬೇಕು - ಎಂಬ ಶಬ್ದಪುಂಜ, ಸತ್ತ ಮೇಲೆ ಬೇಕಾಗುವ ಎಲ್ಲಾ ವಸ್ತುಗಳಿಗೂ ಎಂದರೆ ಚಟ್ಟ, ಹೂಮಾಲೆ, ಊದುಬತ್ತಿ, ಮಡಕೆ, ನಾಲ್ಕು ಜನರು - ಇವೆಲ್ಲವೂ ಬೇಕು - ಎಂಬ ಅರ್ಥವನ್ನು ಸೂಕ್ಷ್ಮವಾಗಿ ಹೊಳೆಯಿಸುತ್ತದೆ.''

''ಸ್ವಾಮಿ ಸ್ವಾಮಿ ವಿಮರ್ಶಕರೇ, ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ ಅಥವಾ ನಾಲ್ಕು ಸುತ್ತು ಕುಣಿದು ಬಿಡಿ.''

ಧಧಿಥೋ ಧಿಧಿಧಿದ್ಧಿಥೋಂ

''ಭಾಗವತರೇ ಮುಂದಿನ ನಾಲ್ಕು ಸಾಲುಗಳು ಹೀಗಿವೆ ನೋಡಿ: ನಾಯಿಮರಿ ನಿನಗೆ ತಿಂಡಿ ಯಾಕೆ ಬೇಕು? ತಿಂದು ಗಟ್ಟಿಯಾಗಿ ಮನೆಯ ಕಾಯಬೇಕು. ಯಜಮಾನ ಎಂದರೆ ಭಂಡವಾಳಶಾಹಿಯ ಪ್ರತಿನಿಧಿ ಕೇಳುತ್ತಾನೆ - ಕೂಲಿಯೊಡನೆ - ನಿನಗೆ ತಿಂಡಿ ಯಾಕೆಬೇಕು ಎಂದು. ಇದೊಂದು ನಿಗೂಢ ಪ್ರಶ್ನೆ. ಜಗತ್ತಿನ ಎಲ್ಲಾ ವಿಜ್ಞಾನಿಗಳ ತಲೆ ಕೆಡಿಸಿದ ಪ್ರಶ್ನೆ. ಮನುಷ್ಯನಿಗೆ ಆಹಾರ ಏಕೆ ಬೇಕು? ತಿಂದ ಆಹಾರದ ಗುಣಮಟ್ಟದಂತೆ ಅವನ ಬುದ್ಧಿಯ ಗುಣಮಟ್ಟವೂ ಇರುವುದಿಲ್ಲ ಏಕೆ? ಆದರೆ ಭಂಡವಾಳಶಾಹಿ ಇದೀಗ ಜಾಗತೀಕರಣದ ಒಂದು ಬ್ರ್ಯಾಂಚ್ ಆಗಿರುತ್ತದೆ, ಈ ಪ್ರಶ್ನೆಯನ್ನು ಕೇಳುತ್ತದೆ: ನಿನಗೆ ತಿಂಡಿ ಏಕೆ ಬೇಕು ಎಂದು. ಇದರಷ್ಟು ಅಸಂಬದ್ಧ ಪ್ರಶ್ನೆ ಇನ್ನೊಂದಿಲ್ಲ. ಆಗಲಿ, ಈ ಪ್ರಶ್ನೆಯ ಹಿಂದೆ ಫ್ರ್ಯಾಯಿಡ್‌ನ ಸಿದ್ಧಾಂತವಿದೆ.

ನೋಡಿ, ನಿನಗೆ ನಾನು ತಿಂಡಿ ಕೊಟ್ಟು, ನೀನದನ್ನು ತಿಂದು, ನಿನ್ನ ದೇಹದೊಳಗಿನ ಕಾಮಶಕ್ತಿ ಉದ್ದೀಪನಗೊಂಡರೆ ಯಾರು ಹೊಣೆ? - ಎಂಬ ಗೂಢಾರ್ಥ ಇಲ್ಲಿದೆ. ಎಂಥಾ ಗಂಭೀರ ಆಲೋಚನೆ! ಎಂಥಾ ಓಶೋ ಚಿಂತನೆ!

''ಸ್ವಾಮೀ, ತೆನಾಲಿರಾಯರೇ, ಕುಡಿಯಲು ಏನಾದರೂ ಬೇಕೇ?''

''ನನಗೆ ಕುಡಿಯಲು ಕೊಡುವಷ್ಟು ತಾಕತ್ತು ನಿಮಗಿದೆಯೆ? ಹೆಚ್ಚೆಂದರೆ ಒಣ ಎಲೆ ಅಡಿಕೆ ಕೊಡಬಲ್ಲ ಯೋಗ್ಯತೆ ನಿಮ್ಮದು.''

''ಆಗಲಪ್ಪಾ, ಮುಂದರಿಸಿರಿ. ಇನ್ನೂ ಕೆಲವು ಸಾಲುಗಳು ಬಾಕಿ ಇವೆಯಲ್ಲ! ನಾಯಿಮರಿ ನಿನಗೆ ತಿಂಡಿ ಏಕೆ ಬೇಕು....''

''ಹೌದೌದು. ಇದು ಮುಂದಿನ ಸಾಮಾಜಿಕ ಸಾಂಸ್ಕೃತಿಕ ಕ್ರಾಂತಿಯ ಮೂಲಮಂತ್ರ. ಬಡವರಿಗೆ ನಿಮಗೆ ಊಟ ಬೇಕೇ - ಎಂಬ ಪ್ರಶ್ನೆ ಕೇಳಿದರೆ, ಅವರೇನು ಉತ್ತರ ಕೊಟ್ಟಾರು? ಉತ್ತರದ ಬದಲು ಅವರ ಹೊಟ್ಟೆ ಉರಿ ಅವರನ್ನು ಕ್ರಾಂತಿಕಾರಿಗಳನ್ನಾಗಿ ಮಾಡೀತು. ರಷ್ಯಾದಲ್ಲಿ ಫ್ರಾನ್ಸಿನಲ್ಲಿ ಆದದ್ದು ನಿಮಗೆ ಗೊತ್ತಿಲ್ಲವೇ? ಅಲ್ಲಿಯ ನಾಯಿಮರಿಗಳು ಕ್ರಾಂತಿ ಮಾಡಲಿಲ್ಲವೇ?''

''ಮುಂದರಿಸಿ''

ತಕಿಟ ತಕಿಟ ಧಿಥೋಂ

''ನಾಯಿಮರಿ ಎಂದರೆ ಬಡಜನರ ಪ್ರತಿನಿಧಿ, ಹೀಗೆ ಹೇಳುತ್ತದೆ - ತಿಂದು ಗಟ್ಟಿಯಾಗಿ ಮನೆಯ ಕಾಯಬೇಕು. ಇಲ್ಲಿಯ ಮುಖ್ಯ ಪ್ರಶ್ನೆ ಎಂದರೆ ಯಾರ ಮನೆಯನ್ನು ನಾಯಿಮರಿ ಕಾಯಬೇಕಾಗಿದೆ ಎಂದು. ಇದು ಸಾಮಾಜಿಕವಾಗಿ ಪ್ರಸ್ತುತತೆಯನ್ನು ಬಯಸುವ ಸಾಲು. ತಿನ್ನಬೇಕು - ತಿಂದ ಬಳಿಕ ಗಟ್ಟಿಯಾಗಬೇಕು - ಹೊಟ್ಟೆ ಮಾತ್ರವಲ್ಲ - ಮಿದುಳು - ಯೋಚನಾ ಶಕ್ತಿ - ಎಲ್ಲವೂ ಗಟ್ಟಿಯಾಗಬೇಕು. ಇಷ್ಟು ಗಟ್ಟಿಯಾದ ಬಳಿಕ, ಯಾರ ಮನೆಯಾದರೆ ಏನು? ಹಾಗಾಗಿ ಕವಿಯು ಗಟ್ಟಿಯಾಗಿ ನಿನ್ನ ಮನೆಯನ್ನು ಕಾಯಬೇಕು - ಎಂದು ಬರೆದಿಲ್ಲ. ಇಂಥಾ ಸಂದರ್ಭದಲ್ಲಿ ಭಂಡವಾಳಶಾಹಿ ಸೋಲಲೇ

ಬೇಕಾಗುತ್ತದೆ. ಅದಕ್ಕಾಗಿ, ತಾನು ಸೋತಿದ್ದೇನೆ ಎಂದು ಒಪ್ಪಿಕೊಳ್ಳುವ ಹೀನ ಕೆಲಸಕ್ಕೆ ಇಳಿಯದೆ, ಕಾರ್ಮಿಕ ಪ್ರತಿನಿಧಿಯನ್ನು ಜಾಣಮರಿ ಎಂದು ಯಜಮಾನ ಗುರುತಿಸುತ್ತಾನೆ. ಜಾಣಮರಿ ತಾಳು ಹೋಗಿ ತಿಂಡಿ ತರುವೆನು - ಎಂಬ ಸಾಲು ಕಾರ್ಮಿಕರ ಬೇಡಿಕೆಗಳನ್ನು ಭಂಡವಾಳಶಾಹಿ ಕೂಡಲೇ ಈಡೇರಿಸುವುದಿಲ್ಲ - ಬದಲಾಗಿ ಅದಕ್ಕಾಗಿ ದಿನ, ತಿಂಗಳು, ವರ್ಷಗಳನ್ನು ತೆಗೆದುಕೊಳ್ಳಬಹುದು - ಎಂಬ ಅರ್ಥ ಇಲ್ಲಿದೆ. ಅದಲ್ಲದೆ, ತಾನು ತಿನ್ನುವ ತಿಂಡಿಯನ್ನು ಯಜಮಾನ ಅವನಿಗೆ ಕೊಡುವುದಿಲ್ಲ. ಇದು ಬಹಳ ಮುಖ್ಯವಾದ ವಿಚಾರ. ಭಾಗವತರೇ, ಡಬ್ಬಲ್ ನವ್ಯ ವಿಮರ್ಶಕರು ಆಗಾಗ ಉಪಯೋಗಿಸಲೇಬೇಕಾದ ಶಬ್ದ ಮುಖ್ಯ ಎಂಬುದು. ಯಜಮಾನ ತಿಂಡಿ ಶುದ್ಧ ತುಪ್ಪದಲ್ಲಿಯೆ ಮಾಡಿದ್ದು - ಅದನ್ನು ಕಾರ್ಮಿಕನಿಗೆ ಕೊಡುವುದಾದರೂ ಹೇಗೆ? - ಎಂಬ ಸಂದಿಗ್ಧದಿಂದ ಹೊರಬರುವ ಪ್ರಕ್ರಿಯೆ ತಾಳು ಹೋಗಿ ತಿಂಡಿ ತರುವೆನು - ಎಂಬ ಸಾಲಿನಲ್ಲಿದೆ. ಆಗ ನಾಯಿಮರಿಯ ಪ್ರತಿಕ್ರಿಯೆ - ತಾ ನಿನ್ನ ಮನೆಯ ನಾನು ಕಾಯುತಿರುವೆನು - ಎಂಬ ಸಾಲಿನಲ್ಲಿದೆ. ತಿಂಡಿ ತಿನ್ನುವ ಮೊದಲೇ ಕೃತಜ್ಞತಾ ಭಾವವನ್ನು ಸೂಚಿಸುವ ಔದಾರ್ಯ ಕಾರ್ಮಿಕ ವರ್ಗದಲ್ಲಿದೆ - ಎಂಬ ವಿಚಾರವನ್ನು ಇದು ಸೂಚಿಸುತ್ತದೆ. ಆದರೆ ಒಂದು ವಿಚಾರವನ್ನು ಕವಿ ಗೂಢವಾಗಿಯೆ ಇಟ್ಟಿದ್ದಾನೆ ನೋಡಿ - ಅವನೂ ಹೊಟ್ಟೆಗಿಲ್ಲದ ಭಂಡವಾಳ ಶಾಹಿಯೆ - ಅದೇನೆಂದರೆ ಕೊನೆಗಾದರೂ ನಾಯಿಮರಿಗೆ ತಿಂಡಿ ಸಿಕ್ಕಿತೇ? ಇಲ್ಲವೇ? - ಎಂದು.''

''ಇಷ್ಟೆಲ್ಲಾ ವಿವರಣೆ ಕೊಟ್ಟಿರಲ್ಲಾ! ಈ ಎಲ್ಲಾ ವಿಚಾರಗಳು ಕವಿಯ ಮನಸ್ಸಿನಲ್ಲಿ ಇದ್ದಿರಬಹುದೇ?''

''ಸ್ವಾಮೀ ಭಾಗವತರೇ, ವಿಮರ್ಶಕರ ಕೆಲಸ ಏನೆಂದು ನಿಮಗೆ ಗೊತ್ತೇ? - ಅದೂ ಡಬ್ಬಲ್ ನವ್ಯ ವಿಮರ್ಶಕರದ್ದು? ಅದನ್ನು ಮೊದಲು ಕೇಳಿ. ಕವಿಯ ಕವನದಲ್ಲಿ ಅವನ ಅಭಿಪ್ರಾಯಗಳೆಲ್ಲವೂ ಪ್ರಕಟವಾಗಬೇಕೆಂದಿಲ್ಲ. ಈ ಶತಮಾನದ ಕವಿಯ ಮನಸ್ಸು ಒಂದು ಜ್ವಾಲಾಮುಖಿಯ ಹಾಗೆ. ಒಂದಷ್ಟು ಬೆಂಕಿ, ಲಾವಾ - ಹೊರಗೆ ಬರುತ್ತದೆ - ಹೊರಗೆ ಬಂದುದರ ಸಾವಿರ ಪಾಲು ಒಳಗೆ ಇರುತ್ತದೆ. ವಿಮರ್ಶಕನ ಕೆಲಸ ಆ ಒಳಗಿದ್ದುದನ್ನು ಹೊರ ತೆಗೆಯುವುದು. ನಾನಿಲ್ಲಿ ಮಾಡಿದ್ದಾರೂ ಅಷ್ಟೆ. ಈ ನಾಯಿಮರಿ ಕವನದಲ್ಲಿ ಮಾರ್ಕ್ಸ್ ಸಿದ್ಧಾಂತ ಹೇಗೆ ಸೂಚಿತವಾಗಿದೆ - ಜಾಗತೀಕರಣ ಎಲ್ಲೆಲ್ಲಿ ಮಿಂಚಿದೆ, ಸಾಂಸ್ಕೃತಿಕ ಭೌವ್ಯತೆ ಎಲ್ಲೆಲ್ಲಿ ಪ್ರತಿಫಲಿಸಿದೆ, ಮಾನವ ಮೌಲ್ಯಗಳು ಎಲ್ಲೆಲ್ಲಿ ಮಸುಕಾಗಿದೆ - ಇದೆಲ್ಲವನ್ನು ಗುರುತಿಸಿದ್ದೇನೆ. ಹೇಗೆ ಅನಿಸಿತು ಭಾಗವತರೇ?''

ಧಿಥೋಂ

''ಅರೆ ಭಾಗವತರೇ - ಭಾಗವತರೇ, ಎಲ್ಲಿಗೆ ಹೋದಿರಿ? ನನ್ನೊಬ್ಬನನ್ನೇ ಬಿಟ್ಟು ಹೋದಿರಾ? ಓದುಗರನ್ನು ಒಟ್ಟಿಗೆ ಕರೆದುಕೊಂಡು ಹೋದಿರಾ? ನಿಮ್ಮ ಯೋಗ್ಯತೆ ಇಷ್ಟೆ! ಡಬ್ಬಲ್ ನವ್ಯದ ವಿಮರ್ಶೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದ ಯೋಗ್ಯತೆ ನಿಮ್ಮದು. ಚಿಂತಿಲ್ಲ ಬಿಡಿ. ಇನ್ನೊಂದು ರಂಗಸ್ಥಳಕ್ಕೆ ಹೋಗಿ ಕುಣಿಯುತ್ತೇನೆ ನೋಡಿ. ಅರೆ ಚೆಂಡೆಯವನು ಎಲ್ಲಿ? ಎಲ್ಲಿ? ಎಲ್ಲಿ?''

ವಿವಾಹ ನಡೆಯುವುದು ಸ್ವರ್ಗದಲ್ಲೇ!!

- ಶೋಭಾ ಪ್ರಮೋದ್

''ಮದುವೆಗಳು ಸ್ವರ್ಗದಲ್ಲಿ ನಡೆಯುತ್ತವೆ'' ಎಂಬ ಗಾದೆ ಮಾತಿದೆ. ನನ್ನ ಹಣೆಯ ಬರಹವನ್ನು ಬರೆಯಬೇಕಾದರೆ ಬ್ರಹ್ಮನು ಸ್ವಲ್ಪ ನಿದ್ರೆ ಮಾಡುತ್ತಿದ್ದನೆಂದು ಕಾಣುತ್ತದೆ. ಹಾಗಾಗಿ, ಕೇವಲ ಕೊಂಕಣಿ - ಕನ್ನಡ ಬಲ್ಲ ನಾನು, ಗಂಧ ಗಾಳಿ ಗೊತ್ತಿಲ್ಲದ ಮರಾಠಿ ಲೋಕದಲ್ಲಿ, ಸಂಸಾರ ನೌಕೆಯನ್ನು ಸಾಗಿಸುವ (ದುಃ) ಸ್ಥಿತಿಯನ್ನು ಗಳಿಸಿಕೊಂಡೆ ಎನ್ನಿ!

ಸ್ವತಃ ಜ್ಯೋತಿಷ್ಕರಾದ ತಂದೆಯವರು, ಭಾವೀ ಅಳಿಯನ ಜಾತಕ ನೋಡಿ, ಗೋವೆಯ ಕುಲದೇವರ ಪ್ರಸಾದ ಪಡೆದುಕೊಂಡು, ಜಗಳಗಂಟಿ ಮಗಳನ್ನು ಮರಾಠಿ ಪ್ರಪಂಚಕ್ಕೆ ಅಟ್ಟಿದರು. ವಿವಾಹ ಮುಂಚೆಯೇ ಅತ್ತೆಯಾಗುವವರ ಹತ್ತಿರ ''ದೋಸ್ತಿ'' ಮಾಡಿ; ''ಅಡುಗೆ ಅಷ್ಟೇನೂ ಬಾರದು. ಸ್ವಲ್ಪ ಜೋರು ಬಾಯಿ, ಆದರೂ ನನ್ನ ಮಗಳ ಮನಸ್ಸು, ಬಾಳೆ ಹಣ್ಣಿನಂತೆ ಮೃದು'' ಎಂದರಂತೆ!!

ಅಂತೂ ಮದುವೆಯಾಯಿತು. ಸ್ವರ್ಗದಲ್ಲಿ ಅಲ್ಲ! ಈ ಭೂಲೋಕದಲ್ಲಿಯೇ! ಮಧುಚಂದ್ರ ಮಾತ್ರ ಆಗಲಿಲ್ಲ. ಮುಂದಿನ ಜನ್ಮದಲ್ಲಿ, ಈ ಗಂಡ ಸಿಕ್ಕರೆ, ಮಧುಚಂದ್ರ ಆಚರಿಸುವವಳಿದ್ದೇನೆ!

ನನ್ನ ಹಾಗೂ ಪತಿಯ ಜಾತಿ, ಗೌಡ ಸಾರಸ್ವತ ಆದರೂ ರೀತಿ-ರಿವಾಜುಗಳಲ್ಲಿ ಅಜ-ಗಜಾಂತರವಿದೆ. ದಾಳಿತೊವ್ವೆ, ಉಪ್ಕರಿ, ತಳಾಸಣ, ಕೊದ್ದೆಲ್ ಇತ್ಯಾದಿ ನಮ್ಮ ಕೊಂಕಣಿ ಪದ್ಧತಿಯ ಅಡಿಗೆ ಮಾಡಿದರೆ, ಗಂಡನ ಮೂಗು ಮುರಿದು, ಸೊಟ್ಟಗಾಗುತ್ತದೆ! ಇಡ್ಲಿ-ದೋಸೆ ಪ್ರಕಾರಗಳೂ ಇವರಿಗೆ ಇಷ್ಟವಿಲ್ಲ ಹಾಗಾಗಿ, ನಾನು ಅನಿವಾರ್ಯವಾಗಿ ಮರಾಠಿ ಅಡುಗೆಗಳನ್ನೆಲ್ಲ ಕಲಿತುಕೊಂಡೆ. ಅಪರೂಪಕ್ಕೆ ನಮ್ಮ ಪದ್ಧತಿಯ ಅಡುಗೆ ಮಾಡಿದರೆ, ''ನಿನ್ನ ಕರ್ನಾಟಕ ಅಡುಗೆ ವಕ್ರಿಸಿತಾ?'' ಎಂದು ವ್ಯಂಗ್ಯದಿಂದ ಚುಚ್ಚುವುದುಂಟು. ''ಹೆಂಡ್ತಿ ಕರ್ನಾಟಕದವಳಾದರೆ ಅಡ್ಡಿಯಿಲ್ಲ, ಆದರೆ ಅಡುಗೆ ಬೇಡ ಎಂದರೆ ಹೇಗೆ?!'' ಎಂದು ನಾನೂ ಜಗಳ ಕಾಯುತ್ತೇನೆ ಮರಾಯ್ರೇ!

ಶುದ್ಧ ಶಾಖಾಹಾರಿಯಾದ ನನ್ನ ಮನೆಯಲ್ಲಿ, ಈರುಳ್ಳಿ - ಬೆಳ್ಳುಳ್ಳಿ ಕೂಡ ಊಟದಲ್ಲಿ ಅಪರೂಪವೇ ಆಗಿತ್ತು. ಆದರೆ... ಮಹಾರಾಷ್ಟ್ರದ ಸಾರಸ್ವತರು, ಮೀನು, ಮೊಟ್ಟೆ, ಚಿಕನ್-ಮಟನ್ ತಿಂದು, ಮೇಲಾಗಿ ನಾವು ''ಬ್ರಾಹ್ಮಣರು'' ಎಂದು ಹೇಳುವುದನ್ನು ಮರೆಯುವುದಿಲ್ಲ ಸ್ವಾಮೀ! ನನಗೆ ವಾಕರಿಕೆ ಬಂದರೂ ಮನೆಯವರಿಗಾಗಿ ಮಾಡಲೇಬೇಕಿತ್ತು. (ವಿವಾಹ ಮಾಡಿಕೊಟ್ಟು, ಈಗ ಹಾಯಾಗಿರುವ ಅಪ್ಪನಿಗೆ, ಮನಸ್ಸಿನಲ್ಲೇ ನೂರು ಶಾಪ ಹಾಕಿ, ಪಾವನಳಾಗುತ್ತಿದ್ದೆ.)

ಗಣೇಶ ಚತುರ್ಥಿಯಂದು, ಗೌರಿ ಹಬ್ಬ ಇನ್ನೇನು ಮುಗಿಯುವ ಮುಂಚೆಯೇ, ಕುಟುಂಬದ ಜನರಿಗಾಗಿ ಮಟನ್-ಅಕ್ಕಿ ವಡೆ ಸಮಾರಾಧನೆ ಇರುತ್ತದೆ - ಇಪ್ಪತ್ತೈದು ಜನ ಸದಸ್ಯರು ಮಾಂಸಾಹಾರಿಗಳಾದರೆ, ನಾನೊಬ್ಬಳೇ ಶಾಖಾಹಾರಿ. ಅಲ್ಪ ಮತದವಳಾದ, ನನ್ನ ಅಭಿಪ್ರಾಯ ಸಾರಾಸಗಟಾಗಿ ಬಿದ್ದು ಹೋಯಿತೆನ್ನಿ!

ಇನ್ನು ದೇವರ ವಿಷಯವಾಗಿ, ನಾನು ಅನುಭವಿಸಿದ ಪರಿಸ್ಥಿತಿ, ಆ ಶ್ರೀಕೃಷ್ಣ ಪರಮಾತ್ಮನಿಗೇ ಪ್ರೀತಿ!! ನಮ್ಮಮ್ಮ, ಅಜ್ಜಿಯವರು, ನಾಗರ ಪಂಚಮಿ, ಕೃಷ್ಣಾಷ್ಟಮಿ ಹೀಗೆ ಹಬ್ಬಗಳನ್ನು ಸಡಗರದಿಂದ ಆಚರಿಸಿ, ಆಯಾ ಹಬ್ಬಕ್ಕೆ ವಿಶೇಷವಾಗಿರುವ ಅಡುಗೆ ಮಾಡುತ್ತಿದ್ದರು. ಆದರೆ ನನ್ನ ಗಂಡನ ಮನೆಯವರಿಗೆ ಕೃಷ್ಣ ಬೇಡ! ಯೋಗಿಯೂ - ಭೋಗಿಯೂ - ಆಗಿರುವ ಶಂಕರನೇ ಪ್ರೀತಿ! ಪ್ರತೀ ತಿಂಗಳು ಏಕಾದಶಿ ವ್ರತಗಳಿಲ್ಲ. ಆದರೆ ಶಿವರಾತ್ರಿಯಿದೆ. ಆಷಾಢ ಹಾಗೂ ಕಾರ್ತೀಕ ಏಕಾದಶಿ ವ್ರತಗಳೂ ಇವೆ. ದೇವರನ್ನು ಬದಲಿಸುವ ಮನಸ್ಸು ನನಗಾಗದಿದ್ದರೂ, ''ಕೃಷ್ಣ, ನಿನ್ನ ಜೊತೆಯಲ್ಲಿ ಚೆಂಡಾಟವಾಡಲು, ಶಂಕರನೂ ಇರಲಿ'' ಎಂದು, ಹೊಸ ದೇವರನ್ನು ಮನ ಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಿಕೊಂಡೆ!

ನನಗೋ ಬಾಲ್ಯದಿಂದಲೂ, ಎರಡು ತಾಸು, ಪೂಜೆ, ಭಜನೆ ಮಾಡಿ ರೂಢಿ. ಐದು ನಿಮಿಷದಲ್ಲಿ ದೇವರಿಗೆ ಪೂಜೆ ಮಾಡಿ ''ಹೊಟ್ಟೆ ಪೂಜೆ''ಯನ್ನು ಒಂದು ತಾಸು ಮಾಡುವ ಗಂಡನ ಮೇಲೆ ಕಡುಕೋಪ ಬರುತ್ತಿದ್ದರೂ, ಸಾಲೀಗ್ರಾಮ ಪೂಜೆ, ಇತರ ಮೂರ್ತಿಗಳ ಪೂಜೆ, ರಾಘವೇಂದ್ರ, ಗುರುಗಳಿಗೆ ತುಳಸೀ ಮಾಲೆ, ಅಷ್ಟೋತ್ತರ, ಪೂಜೆ ನಾನೇ ಮಾಡಲು ತೊಡಗಿದೆ. ಸಂಸ್ಕೃತವೇ ಕಾಲೇಜಿನಲ್ಲಿ ಪ್ರಧಾನ ವಿಷಯವಾಗಿದ್ದ ಕಾರಣಕ್ಕಾಗಿ, ಸತ್ಯನಾರಾಯಣ ಪೂಜೆ ಕೂಡ ನನಗೆ ಮಾಡಲು ಬರುತ್ತಿತ್ತು. ''ಶ್ರಾದ್ಧಕ್ಕೆ ಮತ್ತೇ ಭಟ್ಟರು ಬೇಡ. ನಾನು ಸತ್ತಾಗ, ಅಗ್ನಿ ಕೊಡುವಾಗ ಹೇಳುವ ಮಂತ್ರ, ವೈಕುಂಠ ಸಮಾರಾಧನೆ ಕೂಡ ನೀನೇ ಮಾಡಿಬಿಡು'' ಎಂದೂ ಅತ್ತೆಯವರು ತಮಾಶೆಯಿಂದ ಹೇಳಿದ್ದುಂಟು.

ಹೀಗೆ ಆಚಾರ-ವಿಚಾರದಲ್ಲಿ, ದೇವರ ವಿಷಯದಲ್ಲಿ, ಅಡುಗೆ ವಿಷಯದಲ್ಲಿ, (ವಿವಾಹವಾಗಿ ಹನ್ನೆರಡು ವರ್ಷಗಳಾದರೂ) ಇಂದಿಗೂ ಜಗಳವಾಗುತ್ತದೆ. ಆದರೆ ಹೊಡೆದಾಟ - ಬಡಿದಾಟ, ಡಿಶ್ಯೂಂ ಡಿಶ್ಯೂಂ ಮಾತ್ರ ಆಗದಿರುವುದು ನನ್ನ ಪುಣ್ಯ!

ಸಂಸಾರ ಎಂದ ಮೇಲೆ ಹೊಂದಾಣಿಕೆ ಇರಬೇಕು. ಹಾಗೆ ನಾನು ಹೊಂದುಕೊಂಡಿದ್ದೇನೆ ಎನ್ನಿ! ಪತಿಗೆ ಗೊತ್ತಿಲ್ಲದಂತೆ ಕನ್ನಡ ಕ್ಯಾಸೆಟ್, ಪುಸ್ತಕಗಳನ್ನು ಬೆಂಗಳೂರಿನಿಂದ ಖರೀದಿಸುವುದು, ನೂರು ರೂಪಾಯಿಗಳ ಅಂಚೆ ಚೀಟಿ, ಹಾಳೆ ಖರೀದಿಸಿ, ಕಥೆ-ಕವಿತೆ ಗೀಚುತ್ತ ಇರುವುದು... ಇವೆಲ್ಲ ನಾನೇ ಹೊಂದಿಸಿಕೊಂಡ ''ಹೊಂದಾಣಿಕೆ ತತ್ವಗಳು''!

ನಾನು ಅನುಭವಿಸಿದ ಭಾಷಾ ಗೊಂದಲ, ಉಚ್ಚಾರದ ತೊಂದರೆ, ಅಡುಗೆ ತೊಂದರೆ... ಇತ್ಯಾದಿ ಇತ್ಯಾದಿಗಳಿಂದ ಮಗಳಿಗೆ, ಮಹಾರಾಷ್ಟ್ರದ ಹುಡುಗನನ್ನೇ ಹುಡುಕುತ್ತೇನೆ. (ಅವಳೇ ಹುಡುಕಿಕೊಂಡರಂತೂ ನನ್ನ ಕೆಲಸ ತಪ್ಪಿತು!) ಮಗನನ್ನು ನೋಡಿದರೆ, ಅವನೇ ಹೆಣ್ಣು ಹುಡುಕುತ್ತಾನೆಂದು ಕಾಣುತ್ತೆ!

ಏನೇ ಆಗಲಿ ಒಂದಂತೂ ನಿಜ. ನನ್ನ ಲೇಖನ ಕವಿತೆಗಳು ಕನ್ನಡದ ವಿವಿಧ ಪತ್ರಿಕೆಯಲ್ಲಿ ಪ್ರಕಟವಾಗುವುದಕ್ಕೆ ಈ ತನಕ 900ಕ್ಕೂ ಹೆಚ್ಚು ಬರಹಗಳು ''ಸಂಸಾರ ಜಗಳ'' ರಾಮಾಯಣಗಳೇ!! ನೀವು ಏನಂತೀರಾ?!

ಶನಿ ಸಿಂಡ್ರೋಮು

– ಎಚ್. ಗೋಪಾಲಕೃಷ್ಣ

ನಿಮಗೆ ಶನಿಕಾಟ ಶುರುವಾಗಿದೆಯೇ? ಅಥವಾ ನಿಮಗೆ ಶನಿ ಅಮರಿಕೊಂಡಿದ್ದಾನೆಯೇ? ಇದೇನು ಎರಡೂ ಪ್ರಶ್ನೆ ಒಂದೇ ರೀತಿ ಇದೆ. ಏನಾದ್ರೂ ಡೋಸು ಜಾಸ್ತಿ ಆಗಿದೆಯಾ ಅಂತ ಕೇಳ್ತೀರೀ ಅಂತ ಗೊತ್ತು. ಶನಿಕಾಟ ಶುರುವಾಗಿದೆಯಾ ಅಂದರೆ ನೀವು ಪ್ರತಿ ಮೂರು ತಿಂಗಳಿಗೆ ಒಮ್ಮೆ ಬೆಂಗಳೂರಿನ ಎಲ್ಲಾ ಜ್ಯೋತಿಷ್ ವಿಜ್ಞಾನಿಗಳನ್ನೂ ಬೇರೆ ಬೇರೆ ಭೇಟಿ ಮಾಡಿ ನಿಮ್ಮ ಜಾತಕ ಪಾತಕ ತೋರಿಸಿದಾಗ ಅವರು ಹೇಳಲ್ಲವೇ 'ನಿಮಗೆ ಶನಿ ಶುರುವಾಗಿದೆ' ಅಂತ. ಅದರರ್ಥ ಇದರದ್ದು ಮತ್ತೊಂದು ಪ್ರಶ್ನೆಯ ಅರ್ಥ ಏನಪ್ಪಾಂದರೆ ನೀವು ಸ್ವಂತ ಅನುಭವಿಸುತ್ತಿರುವುದು ಅಂದರೆ ನಿಮ್ಮ ಮನೇಲಿ ನಿಮಗೆ ಯಾರೂ ಸರಿಯಾಗಿ ಮುಖ ಕೊಟ್ಟು ಮಾತಾಡುಲ್ಲ, ನೀವು ಮಾಡಿದ ಪ್ರತಿ ಕೆಲಸದಲ್ಲೂ ತಪ್ಪು ಕಂಡುಹಿಡಿಯೋದೂ - ಅದ್ಯಾವದೋ ಕಾಲದಲ್ಲಿ ನೀವು ಕಟ್ಟಿಸಿರೋ ಮನೆಯ ಕಿಟಕಿ ಸೊಟ್ಟ ಇದೆ ಅಂತ ಕೇತೆ ತೆಗೆಯೋದೂ... ಇದೆಲ್ಲಾ ಹಾಳಾಗಲಿ ಅಂದರೆ ಟೀವಿ ರಿಮೋಟನ್ನ ನಿಮ್ಮ ಮಗನೋ ಮಗಳೋ ಗಟ್ಟಿಯಾಗಿ ಜಾಂಬುವಂತ ಸೀತೆ ಆಭರಣ ಹಿಡಿದ ಹಾಗೆ ಹಿಡಿದುಕೊಂಡು ನಿಮಗೆ ನ್ಯೂಸೂ ಸಹ ನೋಡಲು ಅವಕಾಶ ಮಾಡಿಕೊಡದಿರುವುದು, ನಿಮ್ಮ ಬಾಸು ನಿಮ್ಮನ್ನ ಕಂಡ ಕೂಡಲೇ ಗುರ್ ಅನ್ನುವುದು....

ಈ ಎರಡನೇ ಖಾಯಿಲೆ ಅಂದರೆ 'ಶನಿ ಅಮರೋದು' ಒಬ್ಬರ ಜೀವನದಲ್ಲಿ ಐವತ್ತರ ನಂತರ ಶುರುವಾಗುತ್ತದಂತೆ. ಇದು ಗಂಡಸರ ಸಂಗತಿಯಾದರೆ ಹೆಂಗಸರ ವಿಷಯದಲ್ಲಿ ಅವರಿಗೆ ಶನಿ ಅವರನ್ನು ಮದುವೆ ಆಗಬೇಕು ಅಂತ ಗಂಡು ಒಪ್ಪಾನೆ ನೋಡಿ ಅವತ್ತೇ ಶುರು ಆಗುತ್ತಂತೆ - ಹೀಗಂತ ನಮ್ಮ ಎಕ್ಸ್‌ಪರ್ಟುಗಳು ದಿವಸಕ್ಕೆ ಹತ್ತು ಸಲ ಆದರೂ ಹೇಳುತ್ತೆ.

ಶನಿಕಾಟ ಶುರುವಾದ ಕೂಡಲೇ ನೀವು ಅದೇನು ಮಾಡ್ತೀರೀ? ಕೊಂಚ ಜೇಬು ದಪ್ಪ ಇದ್ದರೆ ಹೋಮ ಹವನ ಮಾಡಿಸಿ ಶನಿದೇವರನ್ನ ಸಂಪ್ರೀತಿಗೊಳಿಸಲು ಯತ್ನಿಸುತ್ತೀರಿ. ಶನಿದೇವರು ಸಂತೃಪ್ತಿ ಹೊಂದಿದನೋ ಇಲ್ಲವೋ ಅದು ಬೇರೆ ಸಂಗತಿಯಾದರೂ ನಿಮಗೆ ''ಶನಿ ನಿವಾರಿಸಿಕೊಂಡ'' ಮಾನಸಿಕ ಸಂತೃಪ್ತಿಯಾದರೂ ಇದ್ದೇ ಇರುತ್ತೆ.

ಸಂತೃಪ್ತಿ ದೊರೆಯುತ್ತೆ ಸರಿ ಆದರೆ ಹಳೇ ಕಾಟವೇ ಮುಂದುವರೆದರೆ ಅದೇನು ಕ್ರಮ ಕೈಗೊಳ್ತೀರೀ? ಬೇರೆ ಜ್ಯೋತಿಷಿಗಳನ್ನ ಹಿಡಿದು, ಅವರು ತೋರಿಸಿದ ಮತ್ತಾವುದೋ ದೇವರಿಗೆ ಹೋಮ ಹವನ ಮಾಡ್ತೀರಿ. ಇದೊಂದು ಥರಹ ಚೈನ್ ರಿಯಾಕ್ಷನ್ ಆಗಿ ಜೀವಮಾನ ಪೂರ್ತಿ ಹೋಮ ಹವನದಲ್ಲೇ ನೀವು ಕಾಲ ಕಳೀಬೇಕಾಗುತ್ತೆ. ಒಂದು ದೇವರಿಗೆ ಹವಿಸ್ಸು ಅರ್ಪಿಸಿ ಮತ್ತೊಂದು ದೇವರಿಗೆ ಅರ್ಪಿಸದೇ ಹೋದರೆ ಈ

ದೇವರಿಗೆ ಅಂದರೆ ಎರಡನೇದಕ್ಕೆ ನಿಮ್ಮ ಮೇಲೆ ಮುನಿಸು ಬರೋದಿಲ್ಲವೇ? ನನ್ನ ಗೆಳೆಯ ಒಬ್ಬ ಇದಾನೆ ವರ್ಷದಲ್ಲಿ ಕನಿಷ್ಠ ಒಂದೂವರೆ ಡಜನ್ನು ಹೋಮ ಮಾಡ್ತಾನೆ. ಅದೂ ಎಂತೆಂತ ಹೋಮಗಳು ಅಂತೀರೀ? ಹೆಸರು ಪಸರು ಕೇಳಿಲ್ಲದೇ ಇರೋ ಈತನಕ ನೀವು ಎಲ್ಲೂ ಕಂಡಿಲ್ಲದೇ ಇರೋ ಹೋಮಗಳು. ಆತ ಸುಖವಾಗಿದ್ದಾನೆಯೇ ಅಂದರೆ ಖಂಡಿತ ಇದ್ದಾನೆ - ತಿಂಗಳಿಗೆ ಒಂದೂವರೆ ಹೋಮ ಅಂದರೆ ಅದರ ಖರ್ಚು - ಮನೆಗೆ ಅತಿಥಿಗಳನ್ನ ಕರೆದು ಅವರಿಗೆ 'ಎಡೆ' ಇಕ್ಕೋ ಖರ್ಚು ಇವನ್ನೆಲ್ಲಾ ಮಾಡ್ತಾನೆ ಅಂದರೆ ಸಂಪಾದಿಸಿರುವ ಕಳ್ಳದುಡ್ಡು ಕರಗ್ತಾ ಇರುತ್ತೆ. ಕಳ್ಳದುಡ್ಡು ಕರಗಿದ ನಂತರ ಯಾರು ಸುಖವಾಗಿರುಲ್ಲ ಹೇಳಿ? ಇದಕ್ಕೆ ಈಚೆಗೆ ಒಂದು ವೈಜ್ಞಾನಿಕ ಪದ ಹುಡುಕಿದಾರಂತೆ. ಹೋಮ ಸಿಂಡ್ರೋಮು ಅಂತ. ಹೋಂ ಸಿಂಡ್ರೋಮು ಬೇರೆ, ಹೋಮ ಸಿಂಡ್ರೋಮು ಬೇರೆ ಅಂತ ವಿವರಿಸಿ ಹೇಳಬೇಕಿಲ್ಲ ಅಂತ ತಿಳಿದಿದ್ದೇನೆ. ಈ ಹೋಮ ಸಿಂಡ್ರೋಮು ಸುಮಾರು ಜನ ಸರ್ಕಾರಿ ನೌಕರರಿಗೆ, ಬಿಸಿನೆಸ್ ಮ್ಯಾಗ್ನೇಟುಗಳಿಗೆ ಅಮರುತ್ತಂತೆ - ಅದೂ ಯಾವಾಗ ಅಂದರೆ ಸರ್ಕಾರಗಳು ಬದಲಾದಾಗ, ಹೆಡ್ಡು ಟ್ರಾನ್ಸ್‌ಫರ್ ಆದಾಗ ಮತ್ತು ವೆಂಕಟಾಚಲಯ್ಯನವರು (ಲೋಕಾಯುಕ್ತ) ಕನಸಿನಲ್ಲಿ ಬಂದಾಗ...!

ಹೋಮ ಗೀಮ ಮಾಡಲು ತಾಕತ್ತಿಲ್ಲದವರು ಅಂದರೆ ಬರೇ ಸಂಬಳ ನೆಚ್ಚಿಕೊಂಡು ಜೀವನ ಮಾಡುವವರು ಅದೇನು ಮಾಡ್ತಾರೆ? ಇದು ನನ್ನ ತರಹದ ಗುಂಪು. ಆದರಿಂದಾಗಿ ಇಂತಹವರನ್ನು ನಾನು ಯಾವಾಗಲೂ 'ಜಾಸೂ' ಮಾಡಿ ಅವರ ಚಲನವಲನಗಳನ್ನ ಪತ್ತೇದಾರ ಧನಂಜಯನ ರೀತಿ ಗಮನಿಸುತ್ತೇನೆ. ಮೊದಲು ಈ ಗುಂಪಿನವರು ಮಾಡುವ ಕೆಲಸ ಅಂದರೆ ಶನಿಕಾಟ ತಪ್ಪಿಸಿಕೊಳ್ಳಲು ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಹತ್ತಿರದ ಬಂಧುಗಳಿಂದ ಮಾಹಿತಿ ಪಡೆಯುವುದು. ಮಾಹಿತಿ ವಿಷಯಕ್ಕೆ ಬಂದರೆ ಸರಾಸರಿ ಒಬ್ಬ ಇಂತಹ ಸಮಸ್ಯೆಗಳಿಗೆ ನೂರು ಪರಿಹಾರ ಒದಗಿಸುವಷ್ಟು ಶಕ್ತನಾಗಿರುತ್ತಾನಂತೆ. ಈ ಪರಿಹಾರಗಳಲ್ಲಿ ಹೋಮ ಹವನದ ನಂತರ ಮುಖ್ಯವಾದದ್ದು ಎಂದರೆ ಶನಿ ದೇವರ ದೇವಸ್ಥಾನಗಳಿಗೆ ಭೇಟಿ ನೀಡುವುದು. ಅಲ್ಲಿ ಶನಿದೇವರಿಗೆ ಪೂಜೆ ಮಾಡಿಸುವುದು: ಮನೆ ಹತ್ತಿರ ಶನಿ ದೇವರು ಇಲ್ಲ ಅಂದರೆ ದೂರದಲ್ಲಿನ ಶನಿ ದೇವಸ್ಥಾನಗಳಿಗೆ ಭೇಟಿ ನೀಡುವುದು ಒಂದು ಸಲಹೆಯಾದರೆ 'ನವಗ್ರಹ' ದೇವರುಗಳು ಎಲ್ಲಾ ದೇವಸ್ಥಾನಗಳಲ್ಲೂ ಇರುವುದರಿಂದ ನವಗ್ರಹಕ್ಕೇ ಪ್ರದಕ್ಷಿಣೆ ಹಾಕಿ ಎಂಬುವುದು. ನವಗ್ರಹಕ್ಕೆ ಪ್ರದಕ್ಷಿಣೆ ಎಂದರೆ ಬರೀ ಪ್ರದಕ್ಷಿಣೆಗೆ ನಿಲ್ಲಬಾರದು. ಶನಿದೇವರಿಗೆ ಅತಿ ಪ್ರಿಯವಾದ (ಇದನ್ನು ಯಾರು ಕಂಡುಹಿಡಿದರೋ ತಿಳೀದು) ಕರಿ ಎಳ್ಳು, ಕಡ್ಲೆಕಾಯಿ ಎಣ್ಣೆ ಸೇರಿಸಿದ, ಕರೀಬಟ್ಟೆಯಲ್ಲಿ ಗಂಟು ಕಟ್ಟಿದ ಕರೀ ಉಂಡೆಗಳನ್ನು ದೀಪ ಹಚ್ಚುವುದು! ಇದು ಯಾವತ್ತು ಮಾಡಬೇಕು ಅಂದರೆ ಶನಿವಾರದ ದಿವಸಗಳು ಮಾತ್ರ! ಬಟ್ಟೆ ಮಾರುವ ಮತ್ತು ಎಳ್ಳು ಮಾರುವ ಅಂಗಡಿಗಳವರಿಗೆ ಈ ಗುಟ್ಟು ಗೊತ್ತಿರುವುದರಿಂದ ಯಾವುದೇ ಬಟ್ಟೆ ಅಂಗಡಿಗೆ ಹೋಗಿ ಕರೀಬಟ್ಟೆ ಕೇಳಿ, ಒಂದು ಮೀಟರು 1/2 ಮೀಟರು ತುಂಡರಿಸಿದ ಬಟ್ಟೆ ಕೂಡಲೇ ನಿಮ್ಮೆದುರು

ಪ್ರತ್ಯಕ್ಷವಾಗುತ್ತದೆ; ಅದೇ ರೀತಿ ಕರೀ ಎಳ್ಳೂ ಸಹ. ಮೊನ್ನೆ ಆಸ್ತಿಕರೊಬ್ಬರ ಬಳಿ ಶನಿ ದೇವರಿಗೆ ಈ 'ಕರೀ' ಯಾಕೆ ಅಷ್ಟು ಪ್ರೀತಿ ಅಂತ ಕೇಳಿದೆ. ಕಪ್ಪಗಿನ ಧಾನ್ಯ - ಇವ್ನಬಿಟ್ಟರೆ ಯಾವುದಿದೇರೀ? ಅಂದರು. ಹತ್ತು ನಿಮಿಷ ತಲೆ ಕೆರೆದೆ - ಯಾಕೆ ಹುಚ್ಚೆಳ್ಳಿದೆಯಲ್ಲಾ, ಹಾಗೇ ಕರೀ ಮಡಕೆ ಕಾಳು ಅಂತ ಧಾರವಾಡದ ಕಡೆ ಸಿಗುತ್ತಲ್ಲಾ? ಅಂದೆ. ಹುಚ್ಚೆಳ್ಳು? ಬೆಂಗಳೂರಿನಲ್ಲಿ ಅದನ್ನ ಯಾರು ನೋಡಿದಾರೆ? ಇನ್ನ ಕರೀ ಮಡಿಕೆ ಕಾಳಿಗೆ ಧಾರವಾಡದವರೆಗೂ ಯಾರು ಹೋಗ್ತಾರೆ? ಎಂದರು. ಕರೀ ಎಳ್ಳನ್ನು ಇಷ್ಟಪಡುವ ದೇವತೆಯೊಂದು ಇದೆ ಅಂತ ಖುಷಿಯಾಯಿತು. ಶನಿದೇವರಿಗೆ ಮತ್ತೊಂದು ಪ್ರೀತಿಯ ವಸ್ತು ಇದೆಯಂತೆ. ಅದೆಂದರೆ ನೀಲಿ ಬಣ್ಣದ ಹೂ. ನೀಲು ಬಣ್ಣದ ಹೂಗಳು ನಿಮಗೆ ಎಲ್ಲೂ ಮಾರಾಟಕ್ಕೆ ಸಿಗದು! ಈಚೀಚೆಗೆ ಹೊಸ ಬಡಾವಣೆಗಳಲ್ಲಿ ನೆಟ್ಟಿರುವ ಸಾಲು ಮರಗಳಲ್ಲಿ ಕೆಲವು ನೀಲಿ ಗಂಟೆ ಹೂ ಬಿಡುತ್ತೆ. ಅದನ್ನೇ ಶನಿ ದೇವರಿಗೆ ಅರ್ಪಿಸಿ ಶನಿ ಪೀಡಿತರು ತೃಪ್ತಿ ಪಡುತ್ತಾರೆ. ಹಾಗೆ ನೋಡಿದರೆ ಇವೆಲ್ಲಾ ಫಾರಿನ್ ಹೂಗಳು. ನಮ್ಮ ಪುರಾಣಗಳಲ್ಲಿ ಇವುಗಳ ಹೆಸರೇ ಕಾಣಿಸದು.

ಶನಿ ದೇವರ ಬಗೆಗೆ ಚಿಂತಿಸುತ್ತಿರಬೇಕಾದರೆ ಮತ್ತೊಂದು ವಿಚಿತ್ರ ಗಮನಿಸಿದ್ದೇನೆ. ಅದು ನಮ್ಮ ಉದ್ಯೋಗಸ್ಥರ ಮಹಿಳೆಯರು. ಮೊದ ಮೊದಲು ಅಂದರೆ ಅವರುಗಳು ಅಂದರೆ ಉದ್ಯೋಗಸ್ಥ ಮಹಿಳೆಯರು ಸಣ್ಣ ವಯಸ್ಸಿನವರಿದ್ದಾಗ ಅವರ ಕೈಗಳಲ್ಲಿ ಫೆಮಿನಾ, ಫಿಲ್ಮ್ ಫೇರ್, ಸ್ಟಾರ್ ಡಸ್ಟ್... ಮೊದಲಾದ ರಂಗುರಂಗಿನ ಪತ್ರಿಕೆಗಳು ಕಾಣಿಸುತ್ತಿತ್ತು. ಈಗ ಈ ಯಾವ ಪತ್ರಿಕೆಗಳೂ ಅವರ ಕಣ್ಣಿಗೆ ಕಾಣಿಸದು ಎಂದು ತೋರುತ್ತದೆ. ಯಾರ ಬಳಿಯೂ ಈ ಪತ್ರಿಕೆಗಳು ಇರುವುದಿಲ್ಲ; ಬದಲಿಗೆ ಸುಮ್ಮನೆ ಕೂತಾಗಲೋ ರಸ್ತೆಯಲ್ಲಿ ನಡೆವಾಗಲೋ ತುಟಿ ಪಿಟಿ ಪಿಟಿ ಎಂದು ಅನ್ನುತ್ತಾ ಕೈಯಲ್ಲಿ ಒಂದು ಸಣ್ಣ ಪುಸ್ತಕ ಹಿಡಿದು ಓಡಾಡುತ್ತಾರೆ. ಮೊದಮೊದಲು ಇದು ಗಮನಕ್ಕೆ ಬಂದಾಗ ಒಂದು ರೀತಿ ದಿಗಿಲು ಆಗಿಬಿಟ್ಟಿತ್ತು. ಲಿಬರೇಷನ್ ಮೂವ್‌ಮೆಂಟಿನವರು ಹೆಂಗಸರಿಗೆ ಯಾವುದಾದರೂ ನೂತನ ಕೋಡ್ ಆಫ್ ಕಾಂಡಕ್ಟ್ ಪುಸ್ತಕ ತಯಾರಿಸಿಬಿಟ್ಟಿದ್ದಾರೋ... ಅಂತ. ಒಂದೆರಡು ತಿಂಗಳು ಇದರ ಬಗ್ಗೆ ಮತ್ತೆ ಧನಂಜಯನ ರೀತಿ ಪತ್ತೇದಾರಿಕೆ ನಡೆಸಿದರೂ ಅದೇನೂ ತಿಳೀಲಿಲ್ಲ. ಅನಿರೀಕ್ಷಿತವಾಗಿ ಒಂದು ದಿನ ಅಂದರೆ ಮೊನ್ನೆ - ಈ ಗುಟ್ಟು ಕಂಡು ಹಿಡಿದೆ.

ನಮ್ಮ ಸೀನಿಯರ್ ಕೊಲೀಗು ಮೋಹನಲಕ್ಷ್ಮಿ - ಈಕೇನ ನಾವೆಲ್ಲ ಎದುರಿಗೆ ಮೇಡಂ ಅಂತಂದರೂ ಹಿಂದೆ ಗ್ರ್ಯಾನೀ ಅಂತ ಕರೀತೀವಿ - ತುಂಬಾ ಅರ್ಜೆಂಟಾಗಿ ಫ್ಯಾಕ್ಟರಿಯಿಂದ ಆಚೆ ಹೋಗಬೇಕಾಯಿತು. ಆಕೆ ಬ್ಯಾಗನ್ನ (ವ್ಯಾನಿಟಿಬ್ಯಾಗು) ಮರೆತು ಹೋಗಿಬಿಟ್ಟಳು. ಆಚೆಯಿಂದ ನನ್ನನ್ನ ಫೋನಿನ ಮೂಲಕ ಸಂಪರ್ಕಿಸಿ ಬ್ಯಾಗು ತೆಗೆದಿರಿಸಲು ಕೋರಿದಳು. 'ಬ್ಯಾಗಲ್ಲಿ ದುಡ್ಡು ಗಿಡ್ಡು ಇದ್ದರೆ ಅದು ನನಗೇ...' ಅಂದೆ. 'ದುಡ್ಡಿನ ಪರ್ಸು ತಗೊಂಡು ಬಂದಿದೀನಿ. ಅಕಸ್ಮಾತ್ ಚಿಲ್ರೆ ಸಿಕ್ರೆ ಅದು ನಿಮಗೇ; ಬ್ಯಾಗು ತೆಗೆದಿಡಿ...' ಅಂತ ಒಂದೂವರೆ ಘಂಟೆಯ ಫೋನಿನ ಮಾತುಕತೆ ಅಂತ್ಯದಲ್ಲಿ ಹೇಳಿದಳು. ಅದರಂತೆ ಆಕೆ ಬ್ಯಾಗು ತೆಗೆದೆ. ಅದರಲ್ಲಿದ್ದದ್ದು ಕೆಳಗೆ ಟೇಬಲ್ ಮೇಲೆ ಸುರಿದೆ.

ಅದೇನೇನು ಸಿಕ್ಕಿತು ಅಂತೀರೀ? ನಾಲ್ಕು ವಿಕ್ಸ್‌ಡಬ್ಬ, ಎರಡು ಅಮೃತಾಂಜನದ ಡಬ್ಬ, ಒಂದು ಪ್ಯಾಕೆಟ್ಟು ಬಿಸ್ಕತ್ತು, ಒಂದು ಸಾವಿರದಷ್ಟು ಬಸ್ಸಿನ ಟಿಕೇಟ್ಟು, ರಿಬ್ಬನ್ನು, ಲಿಪ್‌ಸ್ಟಿಕ್ಕು ಪಪ್ಪ ಆರು, ಹೇರ್‌ಪಿನ್... ಬಿಡಿ ಇದರ ವಿವರ ಬೇಡಿ. ಮುಖ್ಯ ಸಂಗತೀಗೆ ಬರ್ತೀನಿ. ಇಂತಹ ಎಲ್ಲ ಸರ್ವ ವಸ್ತುಗಳ ಸಂಗಡ ಹದಿಮೂರು ಪಾಕೆಟ್ ಸೈಜಿನ ಪುಸ್ತಕಗಳು ಸಿಕ್ಕವು! ಹೇಳಿಕೇಳಿ ಮೋಹನಲಕ್ಷ್ಮೀ ಎಲ್ಲಾ ಹೆಂಗಸರ ಹಾಗೇನೇ ಸರಸ್ವತಿ ದ್ವೇಷಿ! ಇಂತಹವಳ ಹತ್ತಿರ ಇಷ್ಟೊಂದು ಪುಸ್ತಕ ಅಂದರೆ! ಆಶ್ಚರ್ಯದಿಂದ ಪುಸ್ತಕ ತೆಗೆದರೆ ಶನಿದೇವರ ಮೇಲೆ ಸ್ತೋತ್ರದವು ಆರು ಪುಸ್ತಕ, ಮೃತ್ಯುಂಜಯ ಜಪದವು ಎರಡು, ಗೊರವನಲಕ್ಷ್ಮಿ ಸ್ಥಳ ಪುರಾಣದ ಒಂದು ಪುಸ್ತಕ... ಈ ರೀತಿಯವು. ವಯಸ್ಸಾದ ಉದ್ಯೋಗಸ್ಥ ಮಹಿಳೆಯರನ್ನು ಅವರ ಅವರ ಕಾಲದ ಸ್ಟಾರ್‌ಡಪ್ಪ್ ಜೀವನ ಸಹ ನೆನೆದು ನನ್ನ ಕಣ್ಣಲ್ಲಿ ಕೋಡಿ ಹರಿದುಬಿಟ್ಟಿತು. ಇನ್ಮೇಲೆ ಯಾವುದಕ್ಕೇ ಕಾರಣಕ್ಕೂ ಮೋಹನಲಕ್ಷ್ಮೀನ ರೇಗಿಸಬಾರದು ಅಂತ ಆ ಕ್ಷಣದಲ್ಲೇ ಡಿಸೈಡಿಸಿಬಿಟ್ಟೆ. ಪಾಪ ಪ್ರತಿದಿನ ಆಕೆ ಪಿಟ ಪಿಟ ಅಂತ ಶನಿಸ್ತೋತ್ರ ಹೇಳಿಕೊಳ್ಳೋದೂ, ಆಯಸ್ಸು ಹೆಚ್ಚಲಿ ಅಂತ ಮೃಂತ್ಯುಂಜಯ ಜಪ ಹೇಳಿಕೊಳ್ಳೋದೂ ನೆನೆಸಿಕೊಂಡು ಆಕೆ ಬಗೆಗೆ ಒಂದು ರೀತಿ ಕರುಣೆ, ಮರುಕ, ಮಮತೆ, ಮಮಕಾರ... ಅದೇನೇನೋ ಹುಟ್ಟಿಬಿಟ್ಟಿತು! ಪಾಪ ಎಲ್ಲಾ ಸೀನಿಯರ್ ಹೆಂಗಸರದ್ದೂ ಇದೇ ಪಾಡಿರಬಹುದು ಅಂತನ್ನಿಸಿದೆ. ಅದರಿಂದ ಸೀನಿಯರ್ ಹೆಂಗಸರಿಗೆ ಮನಸ್ಸಿಗೆ ಬೇಜಾರು ಆಗುವ ರೀತಿ ನಡೀತಕ್ಕದಲ್ಲ ಅಂತ ಠರಾವು ಸಹ ಪಾಸ್ ಮಾಡಿದ್ದೀನಿ.

ಶನಿಪುರಾಣದ ಮುಂದಿನ ಭಾಗಕ್ಕೆ ಅಂದರೆ ಅಟ್‌ಮೋಸ್ಟ್ ಅಂತ್ಯದ ಭಾಗಕ್ಕೆ ಬರ್‍ತಾ ಇದೀನಿ. ಈಗ ನೀವು ನನ್ನ ಸಂಗಡ ನಮ್ಮ ಫ್ಯಾಕ್ಟರೀಗೆ ಬರಬೇಕು. ನಮ್ಮ ಫ್ಯಾಕ್ಟರಿಯ 'ಟೋ ಪೋಗ್ರಫಿ' ನಿಮಗಾಗಲೆ ತಿಳಿದಿರಬಹುದು. ಇಲ್ಲ ಅಂದರೆ 'ಫಾರ್ ಲೇಟ್ ಕಮರ್ಸ್' ಮತ್ತೊಮ್ಮೆ ಹೇಳಿಬಿಡ್ತೀನಿ. ಇದಕ್ಕೆ ಎರಡು ಬಾಗಿಲು ಒಂದು ಉತ್ತರ ಮತ್ತೊಂದು ದಕ್ಷಿಣ. ದಕ್ಷಿಣದ ಬಾಗಿಲ ಕಡೆ ಬರುವವರು ಸಾರಿಗೆ ಮೂಲಕ ಬರುವವರು ಮತ್ತು ಈ ಬಾಗಿಲಿಗೆ ಹತ್ತಿರ ತಮ್ಮ ನಿವಾಸ ಇರೋರು. ಉತ್ತರದ ಬಾಗಿಲಿನಲ್ಲಿ ಬರುವವರು ಕಾರ್ಖಾನೆಯ ಹಿಂಭಾಗದಲ್ಲಿ ಮನೆಮಠ ಮಾಡಿಕೊಂಡಿರುವ ಅಚ್ಚ ಪ್ರೊಲಿಟೇರಿಯನ್‌ಗಳು ಉತ್ತರದ ಬಾಗಿಲು ಮೊದಲು ಇರಲಿಲ್ಲ. ನಮ್ಮ ಕಾರ್ಮಿಕರು ಒಂದೂವರೆ ಮೈಲಿ ಸುತ್ತಿ ಬರಬೇಕು, ಇಲ್ಲೊಂದು ಬಾಗಿಲು ಮಡಗಿ ಅಂತ ನಮ್ಮನ್ನ ಪ್ರತಿನಿಧಿಸುವವರು ಒತ್ತಾಯ ಮಾಡಿದಾಗ ಈ ಬಾಗಿಲು ಇರಿಸಿದರಂತೆ. ಇದು ಹಾಗಿರಲಿ ಬಿಡಿ. ಒಟ್ಟಿನಲ್ಲಿ ಎರಡು ಬಾಗಿಲುಗಳಿವೆ.

ದಕ್ಷಿಣದ ಬಾಗಿಲಿನ ಮೂಲಕ ಬರುವವರಿಗೆ ಅವರುಗಳು ಬಸ್ಸುಗಳಿಂದ ಇಳಿದ ಕೂಡಲೇ ಒಂದು ಗಣಪತಿ ದೇವಸ್ಥಾನ ಎದ್ದು ಕಾಣುತ್ತೆ. ಸುಮಾರು ಜನ ಆಸ್ತಿಕರು ಕಾರ್ಖಾನೆ ಒಳಗೆ ಬರುವ ಮೊದಲೇ ಒಂದು ಸಲ ಈ ಗಣೇಶನಿಗೆ ಕೈಮುಗಿದು ಇವತ್ತೂ ಸುಸೂತ್ರವಾಗಿ ನಡೀಲಿ, ಸಾಲ ಕೊಟ್ಟೋರು ನಮಗೆ ಕಾಣಿಸದಿರಲಿ, ಮೊದಲಾದ ಪ್ರೆಯರು ಸಲ್ಲಿಸಿ ಪ್ರವೇಶಿಸುತ್ತಾರೆ. ಇತ್ತ ಉತ್ತರ ಬಾಗಿಲಿನಿಂದ ನೀವು ಒಂದೂವರೆ ನಿಮಿಷ ನಡೆದರೆ ಅಲ್ಲೂ ಒಂದು ದೇವಾಲಯವಿದೆ. ಇದರಲ್ಲಿ ಮುಖ್ಯವಾಗಿ ಹಿಂದಿನ

ಕಾಲದ ದೊಡ್ಡ ದೊಡ್ಡ ಫೋಟೋಗಳು. ಹಿಂದೆ ಮನೆ ಬದಲಾಯಿಸಬೇಕಾದರೆ ಇಂತಹ ದೊಡ್ಡ ಸೈಜಿನ ಫೋಟೋಗಳನ್ನು ಸಾಗಿಸೋದು ಕಷ್ಟ ಅಂತ ಅನಿಸಿದಾಗ ಅದನ್ನ ಹತ್ತಿರದ ದೇವಸ್ಥಾನಗಳಿಗೆ ದಾನ ಮಾಡುತ್ತಿದ್ದರು. ನೆನಪಿದೆಯೇ? ಅಂತಹ ಅಗಾಧ ಸೈಜಿನ ಫೋಟೋಗಳು ಇಲ್ಲಿ. ಬಹುಶಃ ಇವುಗಳೂ ಸಹ ಮನೆಯಲ್ಲಿ ಸ್ಥಳಾಭಾವ ಅಂತ ಇಲ್ಲಿ ಸೇರಿದೆಯೋ ತಿಳೀದು! ಈ ಫೋಟೋಗಳು ಎದುರಿಗೆ ಕಾಣುವಂತೆ ಇವೆ. ಕೊಂಚ ಬಲ ಪಕ್ಕದಲ್ಲಿ ಒಂದು ಕಟ್ಟೆಮೇಲೆ ಒಂಬತ್ತು ಬೇರೆ ಬೇರೆ ರೀತಿಯ ವಿಗ್ರಹಗಳು ನಿಲ್ಲಿಸಿದಾರೆ. ಇವು ಯಾವುವು ಅಂತ ಸುಮಾರು ದಿವಸ ತಲೆ ಕೆಡಿಸಿಕೊಂಡ ನಂತರ ಯಾರೋ ಪುಣ್ಯಾತ್ಮ 'ಅವು ನವಗ್ರಹಗಳೂ ರೀ...' ಅಂತ ವಿವರಿಸಿದ. ನಾನೂ ಸಹ ಈ ಗೇಟಿನಲ್ಲೇ ಬರುವುದರಿಂದ ಪ್ರತಿದಿವಸ ಅಲ್ಲಿನ ಚಟುವಟಿಕೆಗಳು ನನ್ನ ಕಣ್ಣಿಗೆ ಎದ್ದು ರಾಚುತ್ತಿರುತ್ತದೆ. ಈ ನವಗ್ರಹಗಳೂ ಪ್ರತಿದಿವಸ ನನ್ನನ್ನ ಕೆಕ್ಕರಿಸಿ ನೋಡುತ್ತವೆ.

'ಒಂದೆರಡು ವರ್ಷಗಳ ಹಿಂದೆ ಬೆಂಗಳೂರಿನವರೆಲ್ಲಾ ಒಂದು ರೀತಿ 'ಶನಿ ಸನ್ನಿ' ಹಿಡಿಸಿಕೊಂಡಿದ್ದರು ನೆನಪಿದೆಯೇ? ಆಗಿನ ಸಾಮಾನ್ಯ ಜೋಕು ಅಂದರೆ ಬೇಂಗಳೂರಿನಲ್ಲಿ ಅತಿ ಹೆಚ್ಚು ಬಿಸಿನೆಸ್ ಸ್ಥಳಗಳು ಅಂದರೆ ಎರಡು ಅಂತ ಹೇಳುತ್ತಿದ್ದರು. ಮೊದಲನೇದು ದರ್ಶಿನಿ ಹೋಟೆಲ್ಲು ಅಂತಾದರೆ ಎರಡನೇದು ಶನಿ ದೇವಸ್ಥಾನಗಳು ಅಂತ! 'ಶನಿಸನ್ನಿ' ಹತ್ತಿದವರು ಶನಿದೇವರ ದೇವಾಲಯಗಳಿಗೆ ಹೋಗಿ ಕಾಣಿಕೆ ಸಲ್ಲಿಸುತ್ತಿದ್ದರು. ಮತ್ತೆ ಫ್ಯಾಕ್ಟರೀಗೆ ಬನ್ನಿ; ಮೊದಲ ದಿನ ನೋಡಿದಾಗ ಅದ್ಯಾರೋ ಇಂದು ಬಾಂಡಲಿ ತಂದು ಇರಿಸಿದ್ದರು ಅದರಲ್ಲಿ ಎಳ್ಳು ದೀಪ ಹಚ್ಚಿದ್ದರು. ಬೆಂಕಿ ಉರೀತಿತ್ತು ಸುತ್ತಲೂ ಎಳ್ಳು, ಬಟ್ಟೆ ಎಣ್ಣೆ ಇವು ಮೂರೂ ಸುಟ್ಟಾಗ ಬರುವ 'ದಿವ್ಯ ನಾತ' (ನಾತ ಅನ್ನಬಹುದೇ ತಿಳೀದು - ಆಸ್ತಿಕರು ಕ್ಷಮಿಸಿರಿ ಪ್ಲೀಸ್) ಹಬ್ಬಿತ್ತು. ಎರಡು ಮೂರು ದಿವಸದ ನಂತರ ಈ ಸುಮಾರು ದೊಡ್ಡದಾದ ಬಾಂಡಲಿ ಪಕ್ಕದಲ್ಲಿ ಒಂದು ಮಿನಿ ಬಾಂಡಲಿ ಸ್ಥಾಪಿತವಾಗಿತ್ತು. ಒಂದು ವಾರದಲ್ಲಿ ಈ ಮಿನಿ ಬಾಂಡಲಿಗಳ ಸಂಖ್ಯೆ ಹದಿನಾರೋ ಹದಿನೆಂಟೋ ಆಗಿತ್ತು! ಒಂದು ಸಮಸ್ಯೇನ ಸಾರ್ವತ್ರಿಕ ಮಾಡಿದರೆ ಅದಕ್ಕೆ ಸುಲಭ ಪರಿಹಾರ ಸಿಗಬಲ್ಲದು ಅಂತ ಪಾರ್ಕಿನ್‌ಸನ್ ಹೇಳಿದ್ದಾನಂತೆ. ಈ ಸಮಸ್ಯೆಯನ್ನ ಸಾರ್ವತ್ರಿಕ ಮಾಡಿದೆ. ಕಾರ್ಖಾನೇಲಿರೋ ಎಲ್ಲರೂ ಈ ತರಹ ಚಿಕ್ಕದೋ ದೊಡ್ಡದೋ ಬಾಂಡಲಿ ತಂದು ಕಾರ್ಖಾನೆಯ ಈ ನವಗ್ರಹದ ಮುಂದೆ ಇರಿಸಿ ದೀಪ ಹತ್ತಿಸಲು ಆರಂಭಿಸಿದರೆ ಹೇಗೆ? ಅಂತ.

ಇಡೀ ಬೆಂಗಳೂರಿನಲ್ಲಿ ಆಗ ಬಾಂಡಲಿಗಳು ಸಿಗದೇ ಹೋಗಬಹುದು; ಬೆಂಗಳೂರಿನಲ್ಲಿ ಬಾಂಡಲೆ ಅಭಾವ ಆಗವುದರಿಂದ ಹೊಸದಾಗಿ ಸಂಸಾರ ಹೂಡುವವರು ಅದರಲ್ಲೂ ವಲಸಿಗರು ಬಾಂಡಲೇ ಸಿಗದೇ ತಮ್ಮ ಅತ್ಯಂತ ಆಪ್ತ ತಿಂಡಿಗಳಾದ ಬೋಂಡಾ, ವಡೆ, ನಿಪ್ಪಟ್ಟು ಇತ್ಯಾದಿಗಳಿಗೆ ಹೋಟಲಿಗೆ ನುಗ್ಗಬಹುದು. ಪ್ರತಿದಿನ ಹೋಟಲಲ್ಲಿ ತಿಂದರೆ ಯಾರ ಹೊಟ್ಟೆ ಸರಿಯಿರುತ್ತೆ? ಎಲ್ಲರೂ ರೋಗ ರುಜಿನ ಬಂದು ಆಸ್ಪತ್ರೆ ಸೇರಿದರೆ ನ್ಯಾಚುರಲ್ಲಾಗಿ ಅವರ ಹೊರೆ ನಮ್ಮ ಮೇಲೆ, ಸರ್ಕಾರದ ಮೇಲೆ ಬೀಳುತ್ತೆ. ಒಂದು ಸೋಷಿಯಲ್ ಪ್ರಾಬ್ಲಂ ಅನ್ನು ಈಗಾಗಲೇ ಅತಿ ಭಾರ ಹೊತ್ತು ಕುಸಿಯುತ್ತಿರುವ ಸರ್ಕಾರದ ಮೇಲೆ ಹಾಕುವುದರಲ್ಲಿ ಅದೇನು ಪುರುಷಾರ್ಥ ಸಾಧಿಸಿದ ಹಾಗಾಗುತ್ತೆ? ಈ ಪ್ರಾಬ್ಲಂ ಅನ್ನು ತಪ್ಪಿಸಲು ಸಾಧ್ಯವಿಲ್ಲವೇ?


ಕೆಲವರು ಆಸ್ತಿಕ ಚಿಂತಕರ ಬಳಿ ಈ 'ಸಾಮಾಜಿಕ ಸಮಸ್ಯೆ' ಕುರಿತು ಚರ್ಚಿಸಿದೆ! ಅದು ಹೇಗೋ ಇದು ಕಿವಿಯಿಂದ ಕಿವಿಗೆ ಹಬ್ಬಿತು. 'ಇರೋ ಒಂದೇ ಬಾಂಡಲಿಯಲ್ಲೇ ಎಳ್ಳು ದೀಪ ಉರಿಸಬೇಕಾಗಿ ಭಕ್ತಾದಿಗಳಲ್ಲಿ ವಿನಂತಿ, ಯಾರೂ ಹೊಸ ಬಾಂಡಲಿಗಳನ್ನು ತರತಕ್ಕದ್ದಲ್ಲ....' ಅಂತ ದೇವಸ್ಥಾನದ ಮುಂದೆ ಬೋರ್ಡು ಹಾಕಬೇಕಾದ ಪ್ರಮೇಯ ಅದು ಹೇಗೋ ತಪ್ಪಿಹೋಯಿತು ಮತ್ತು ಕೆಲವೇ ದಿನಗಳಲ್ಲಿ ಒಂದು ಕಿಂಗ್‌ಸೈಜ್ ಬಾಂಡಲಿ ಮಾತ್ರ ಕಾಣಿಸಲಾರಂಭಿಸಿತು! ಅದರಲ್ಲಿ ಸಾರಾಸಗಟಾಗಿ ಎಳ್ಳು ದೀಪ ಉರಿಯುತ್ತಿತ್ತು.

'ಅನಿಷ್ಟಕ್ಕೆಲ್ಲಾ ಶನೀಶ್ವರ' ಅಂತ ಒಂದು ಗಾದೆ ಕೇಳಿರಬೇಕು ನೀವು. ಮೊನ್ನೆ ಒಬ್ಬರು ಕನ್ನಡ ಪಂಡಿತರು ಸಿಕ್ಕಿದ್ದರು. ಅವರೆದುರು ಈಗಾದೆ ಪ್ರಾಸಂಗಿಕವಾಗಿ ಹೇಳಿದೆ. ಅವರು ತಲೆ ತಲೆ ಚಚ್ಚಿಕೊಂಡರು. 'ಶನೀಶ್ವರ' ಅಂಬುವ ಪದಪ್ರಯೋಗ ಮಾಡಿದವರು ರೌರವ ನರಕಕ್ಕೆ ಹೋಗ್ತಾರೆ ಅಂದರು! ನನಗೆ ನರಕದಲ್ಲೂ ಸ್ವರ್ಗದಲ್ಲೂ ಸಮಾನ ಆಸಕ್ತಿ; ಆದರೂ ಸರಿಯಾದ ಪದ ಯಾವುದು ಅಂತ ಕೇಳಿದೆ. 'ಶನೈಶ್ಚರ' ಅಂಬೋದು ಸರಿ ರೂಪವಂತೆ! ಇದನ್ನ ಕೇಳಿದ ನಂತರ ಬೆಂಗಳೂರಿನ 'ಶನಿ ದೇವರು'ಗಳ ದೇವಸ್ಥಾನದ ಬೋರ್ಡುಗಳನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಲು ಆರಂಭಿಸಿದೆ. ಅದೇನು ಆಶ್ಚರ್ಯ ಅಂತೀರಿ? ಸುಮಾರು ತೊಂಬತ್ತರಷ್ಟು ಬೋರ್ಡುಗಳು 'ಶನೀಶ್ವರ' ಅಂತಲೇ ಇರೋದು! ಅಂದರೆ ಎಲ್ಲರೂ ರೌರವ ನರಕಕ್ಕೆ ತಯಾರಿರುವವರು.

ಇದರಿಂದ ಮತ್ತೊಂದು ಹೊಸಾ ಥಿಯರಿ ಕಂಡು ಹಿಡಿದಿದೀನಿ. 'ಶನೇಶ್ವರ' ಅಂತ ಹೇಳಿ ರೌರವ ನರಕಕ್ಕೆ ಬೀಳುವುದರ ಬದಲಿಗೆ ಇಲ್ಲಿನ ನರಕವನ್ನೇ ಪಾಲಿಗೆ ಬಂದದ್ದು ಅಂತ ಅನುಭವಿಸುವುದು ಮೇಲಲ್ಲವೇ...ಅಂತ! 'ನೋಡಿ ಶನಿಕಾಟ ಅಂದರೆ ಇದೇ ಅಲ್ಲವೇ? ಎಲ್ಲೋ ಹೊರಟು ಎಲ್ಲೋ ದಾರಕಿತ್ತ ಗಾಳಿ ಪಟದ ರೀತಿ, ಹರಿಗೋಲಿಲ್ಲದ ದೋಣಿಯ ರೀತಿ, ಪ್ರಧಾನಿ ಪಟ್ಟ ಕಳೆದುಕೊಂಡ ಪ್ರಧಾನಿ ರೀತಿ ಅಂಡಲೆಯೋದೂ...' ಅಂತ ನೀವಂತೀರಿ ಅಂತ ನನಗೆ ಗೊತ್ತು. ಆದರೇನು ಮಾಡುವುದು ತಾ ಮಾಡಿದ ಕರ್ಮ ಬಲವಂತವಾದಾಗ...' ಅಂತೇನೋ ದಾಸರ ಪದ ವುಂಟಂತಲ್ಲಾ....!

ಮೊನ್ನೆ ಒಬ್ಬರು ಸೈಕಿಯಾಟ್ರಿಸ್ಟರ ಬಳಿ ಈ ಶನಿ ಮಹಾತ್ಮ್ಯೆ ಪ್ರಸ್ತಾಪಿಸಿದೆ. ಒಂದೆರಡು ನಿಮಿಷ ಚಿಂತಿಸಿದ ಅವರು ಈ ತರಹದ ಸಮಸ್ಯೆಗಳು ಇರೋದು ಒಳ್ಳೇದೇ... ಅಂದರು. ಅದಕ್ಕೆ ಅವರಿತ್ತ ವಿವರಣೆ. ಸಮಸ್ಯೆಗೆ ಒಂದು ಪರಿಹಾರ ಇದೆ ಅಂತ ಜನ ಅದನ್ನು ಪರಿಪಾಲಿಸಲು ತೊಡಗುವುದರಿಂದ ಹೊಸಾ ಸಮಸ್ಯೆಗಳನ್ನು ಹುಟ್ಟು ಹಾಕಲು, ಬಾಚಿ ತಬ್ಬಲು ಅವರಿಗೆ ವ್ಯವಧಾನವಿರುವುದಿಲ್ಲ ಎಂದು. ಎಂತಹ ಸಮಂಜಸ ಅರ್ಥೈಸಿಕೆ ಅಲ್ಲವೇ? ಹಾಗಿದ್ದರೆ ನಮಗೆಲ್ಲರಿಗೂ ಶನಿ ಮೆಟ್ಟಲಿ... 'ಶನಿ ಸಿಂಡ್ರೋಮು' ಪ್ರಪಂಚವನ್ನು ಆವರಿಸಲಿ....

★★★


STRIKING POWER
Down Hole Hammers
&
Button Bits

Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR